ಪ್ರಕಾಶಕರು :

ಎಚ್. ವೆಂಕಟರಾಮಯ್ಯ ಅಂಡ್ ಸನ್ಸ್

ವಿದ್ಯಾನಿಧಿ ಬುಕ್ ಡಿಪೋ :: ಮೈಸೂರು

ವಿದ್ಯಾನಿಧಿ ಜ್ಞಾನಭಂಡಾರ–೧

ಸಾಹಿತ್ಯ ಸಮಾರಾಧನ

(ಏಳು ಪ್ರಬಂಧಗಳು)

ಅ. ನ. ಕೃ.

ಶ್ರೀ [illegible] ಅವರಿಗೆ
[illegible]
ಅ.ನ.ಕೃ.
೮.೧೨-೫೮

ಎಚ್. ವೆಂಕಟರಾಮಯ್ಯ ಅಂಡ್ ಸನ್ಸ್
ವಿದ್ಯಾನಿಧಿ ಬುಕ್ ಡಿಪೋ : : ಮೈಸೂರು

ಮೊದಲನೆಯ ಮುದ್ರಣ: ೧೯೫೯

ಬೆಲೆ : ರೂ. ೧-೨೫

ಮುದ್ರಕರು:
ಜಿ. ಎಚ್. ರಾಮರಾವ್
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
ಮೈಸೂರು

ಮುನ್ನುಡಿ

'ಸಮದರ್ಶನ' ಪ್ರಬಂಧ ಸಂಗ್ರಹ ಪ್ರಕಟವಾದ ಎರಡು ವರ್ಷಗಳ ತರುವಾಯ 'ಸಾಹಿತ್ಯ ಸಮಾರಾಧನ' ಸಂಗ್ರಹವನ್ನು ಓದುಗರ ಕೈಯಲ್ಲಿಡುತ್ತಿದ್ದೇನೆ.

ಇದರಲ್ಲಿ ಸಂಗ್ರಹವಾಗಿರುವ ಲೇಖನಗಳಲ್ಲಿ 'ಆಧುನಿಕ ಕನ್ನಡ ಸಾಹಿತ್ಯ' ನಾನು ಮೈಸೂರು ಸರ್ಕಾರದ 'ಮೈಸೂರು ರಾಜ್ಯ' ಸಂಕಲನಕ್ಕೆ ಬರೆದ ಲೇಖನ. ಉಳಿದ ಕೆಲವು ಬೆಂಗಳೂರು ಆಕಾಶವಾಣಿಯಲ್ಲಿ ಬಿತ್ತರಿಸುವುದಕ್ಕೆ ಬರೆದ ಲೇಖನಗಳು. ಇವುಗಳನ್ನು ಪುನರ್ಮುದ್ರಿಸಲು ಅನುಕೂಲ ಮಾಡಿಕೊಟ್ಟ ಆಯಾ ಸಂಸ್ಥೆಗಳ ಅಧಿಕಾರವರ್ಗದವರಿಗೆ ನನ್ನ ಕೃತಜ್ಞತೆ ಸಲ್ಲುತ್ತದೆ.

ಕಥೆ, ಕಾದಂಬರಿ, ನಾಟಕಗಳ ಜತೆಗೆ ವಿಚಾರಪೂರ್ಣವೂ, ಬೋಧಪ್ರದವೂ ಆದ ಗ್ರಂಥಗಳು ಬರಬೇಕೆಂಬುದೇ ನನ್ನ ಆಶಯ. ಕನ್ನಡದ ಪ್ರಕೃತ ಪರಿಸ್ಥಿತಿಯಲ್ಲಿ ಇಂಥ ಗ್ರಂಥಗಳನ್ನು ಪ್ರಕಟಿಸಲು ಪ್ರಕಾಶಕರು ಹಿಂದೆಗೆಯುತ್ತಾರೆ. ಹೀಗಾಗಿ ಎರಡು ಮೂರು ದಶಕಗಳಿಂದ ನಾನು ಅಭ್ಯಾಸ ಮಾಡುತ್ತಿರುವ ಅನೇಕ ವಿಷಯಗಳಮೇಲೆ ಗ್ರಂಥ ಬರೆಯುವುದನ್ನೇ ಕೈಬಿಡಬೇಕಾಗಿದೆ.

'ವಿದ್ಯಾನಿಧಿ ಪ್ರಕಾಶನ ಸಂಸ್ಥೆ'ಯವರು 'ವಿಚಾರ ಪ್ರಬೋಧಕ' ಗ್ರಂಥಮಾಲೆಯೊಂದನ್ನಾರಂಭಿಸಿ ನನ್ನ 'ಸಾಹಿತ್ಯ ಸಮಾರಾಧನ' ಗ್ರಂಥವನ್ನೇ ತಮ್ಮ ಮೊದಲನೆಯ ಪ್ರಕಟನೆ

ಮಾಡಿಕೊಂಡಿದ್ದಾರೆ. ಈ ಗ್ರಂಥಮಾಲೆ ಇತೋಪ್ಯತಿಶಯವಾಗಿ ಬೆಳೆದು, ಕನ್ನಡದ ವಿಚಾರ ಪ್ರಬೋಧ ಸಾಹಿತ್ಯದ ಬೆಳವಳಿಗೆಗೆ ಇಂಬುಗೊಡಲಿ ಎಂದು ಹಾರೈಸುತ್ತೇನೆ.

ಬೆಂಗಳೂರು ೪
೧೩–೨–೧೯೫೯

ಅ. ನ. ಕೃ

ವಿಷಯಾನುಕ್ರಮಣಿಕೆ

ಸಾಹಿತ್ಯ ಸಮಾರಾಧನ

ಕನ್ನಡನಾಡು ಕಟ್ಟಿದ ಕಲಿಗಳು

ಹಿಂದೂ ಧರ್ಮವನ್ನು ಪರಧರ್ಮಗಳ ಆಘಾತದಿಂದ, ಹಿಂದೂ ಸಂಸ್ಕೃತಿಯನ್ನು ಪರ ಸಂಸ್ಕೃತಿಗಳ ಪ್ರತಿರೋಧದಿಂದ ರಕ್ಷಿಸಿ ಕಾಪಾಡಿದ ಮಹಾನುಭಾವರಿಬ್ಬರು–ಆಚಾರ್ಯ ಶ್ರೀ ಶಂಕರರು (೮ನೆಯ ಶತಮಾನ) ; ಶ್ರೀ ವಿದ್ಯಾರಣ್ಯರು (೧೪ನೆಯ ಶತಮಾನ).

ಈ ಇಬ್ಬರು ಪುಣ್ಯಪುರುಷರ ಅವತಾರವಾಗದಿದ್ದರೆ ಭಾರತ ತನ್ನ 'ಭಾರತೀಯತೆ'ಯನ್ನೇ ನೀಗಿಕೊಂಡು ಚೀಣ, ಜರ್ಮ, ಅರೇಬಿಯಾ, ಪರ್ಶಿಯಾಗಳ ವಸಾಹತಾಗುತ್ತಿತ್ತು.

ವಿದ್ಯಾರಣ್ಯರು ಧರ್ಮಸಂಸ್ಥಾಪಕರಾಗಿದ್ದುದು ಮಾತ್ರ ವಲ್ಲದೆ ರಾಜ್ಯಸಂಸ್ಥಾಪಕರೂ ಆಗಿದ್ದರು. ವಿಜಯನಗರ ಅವರ ಮಹಾತಪಸ್ಸಿನ ಫಲ. ಆ ತಪಶ್ಶಕ್ತಿಯನ್ನು ಎಂದಿನವರೆಗೆ ಕನ್ನಡಿಗರು ಸನ್ಮಾರ್ಗದಲ್ಲಿ ಬಳಸಿಕೊಂಡರೋ ಅಂದಿನವರೆಗೆ ವಿಜಯನಗರ ಉಳಿಯಿತು–ಬೆಳೆಯಿತು. ಆ ತಪಸ್ಸಿನ ನಿರ್ಮಲ ಪ್ರಭೆಗೆ ಕಳಂಕ ಒದಗಿದಾಗ (೧೬ನೆಯ ಶತಮಾನ) ವಿಜಯ ನಗರ ನಾಮಾವಶೇಷವಾಗಿ 'ಹಾಳುಹಂಪೆ' ಯಾಯಿತು. ಯಾವ ಶ್ರೀಕ್ಷೇತ್ರದಲ್ಲಿ ಕನ್ನಡ ಸರಸ್ವತಿ ಲಾಸ್ಯವಾಡಿದಳೋ ಅಲ್ಲಿ ವಾನರ ಉಲ್ಲೂಕಗಳು ನರ್ತಿಸಲಾರಂಭಿಸಿದವು.

ವಿದ್ಯಾರಣ್ಯರ ಚಿಜ್ಜ್ಯೋತಿಯೇ ಗಾಂಧಿಯಾಗಿ ಪುನರವ ತರಿಸಿತು. ಅಂದು – ೧೪ನೆಯ ಶತಮಾನದಲ್ಲಿ–ಆರಂಭಿಸಿದ್ದ ಕೆಲಸ ೧೯೪೭ರಲ್ಲಿ ಮುಗಿದಂತಾಯಿತು.

ಭಾರತ ಸ್ವಾತಂತ್ರ್ಯ ಗಳಿಸಿದ ಬಾಪು ಎಂದೋ ಭಾಷಾ

ವಾರು ಪ್ರಾಂತ್ಯರಚನೆಗೆ ತಮ್ಮ ಒಪ್ಪಿಗೆಯನ್ನಿತ್ತಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಬಂದ ಎಂಟು ವರ್ಷಗಳ ತರುವಾಯ ಈ ತತ್ವ ಸತ್ವವಾಯಿತು. ಕಾಂಗ್ರೆಸ್ ತನ್ನ ಮಾತು ಉಳಿಸಿಕೊಂಡು ಸಮಸ್ತ ಭಾರತೀಯರ ಗೌರವಾದರಗಳಿಗೆ ಪಾತ್ರವಾಯಿತು.

ವಂಗ ವಿಭಜನೆಯ ಕಾಲಕ್ಕೆ (೧೯೧೮) ರೂಪುತಳೆದ ಭಾಷಾವಾರು ಪ್ರಾಂತ ರಚನೆಯ ಭಾವನೆ ಈ ಮೂವತ್ತೆಂಟು ವರ್ಷಕಾಲ ಸತತವಾಗಿ ಬೆಳೆಯುತ್ತ ಹೋಗಿದೆ. ಆಂಧ್ರ, ಮಹಾರಾಷ್ಟ್ರ, ಗುಜರಾತುಗಳಲ್ಲಿದ್ದ ಈ ಪ್ರಶ್ನೆ ವಿಕೃತಾವಸ್ಥೆ ತಳೆದು ಭಾರತದ ಸಾಮೂಹಿಕ ಶಕ್ತಿಯನ್ನೇ ಅಲುಗಾಡಿಸಿತು.

ಭಾಷಾಪ್ರಾಂತ್ಯದ ಬಯಕೆ

ಭಾಷಾವಾರು ಪ್ರಾಂತ್ಯ ಬೇಕೆಂಬ ಭಾವನೆ ಕನ್ನಡಿಗರಲ್ಲೂ ೧೯೧೮ಕ್ಕೆ ಉದ್ಭವಿಸಿತು. ಇತರ ಭಾಷಾನುಯಾಯಿಗಳಿಗಿಂತ ಕನ್ನಡಿಗರು ಹೆಚ್ಚು ಕಷ್ಟಕ್ಕೆ ಒಳಗಾಗಿದ್ದರು. ಕನ್ನಡನಾಡು ಇಪ್ಪತ್ತೊಂದು ಹೋಳುಗಳಾಗಿ ಹಲವು ರಾಜ್ಯಾಧಿಕಾರಗಳ ಅಧೀನಕ್ಕೆ ಸಿಕ್ಕು ಪರಿಪರಿಬಾಧೆಗೊಳಗಾಗಿತ್ತು. ಬಂಗಾಳ, ಮಹಾರಾಷ್ಟ್ರ, ತಮಿಳುನಾಡು, ಆಂಧ್ರ ದೇಶೀಯರು ಆಂಗ್ಲರ ನೊಗವನ್ನಿಳುಹಿದರೆ ಸಾಕಾಗಿತ್ತು. ಕನ್ನಡಿಗರು ಆಂಗ್ಲರ ನೊಗವನ್ನಲ್ಲದೆ ಮಹಾರಾಷ್ಟ್ರ, ತಮಿಳು, ಆಂಧ್ರ, ಕೇರಳಗಳ 'ದೇಶೀ ನೊಗ'ಗಳನ್ನೂ ಇಳುಹಬೇಕಾಗಿತ್ತು. ಸಣ್ಣಪುಟ್ಟ ಸಂಸ್ಥಾನಗಳನ್ನಳಿಸಿ ಪ್ರಾಂತ್ಯ ಪುನರ್ವಿಂಗಡನೆಯ ಹಾದಿ ಹಸನು ಮಾಡಿದ ಕೀರ್ತಿ ವಲ್ಲಭಭಾಯ್ ಪಟೇಲರಿಗೆ ಸೇರಬೇಕು.

೧೯೧೮ರಲ್ಲಿ ಕನ್ನಡನಾಡಿನ ವಿಕೃತ ಸ್ಥಿತಿಯ ಚಿತ್ರ ಇಂದಿನ ಕನ್ನಡಿಗರ ಚಿತ್ತಭಿತ್ತಿಯ ಮೇಲೆ ಸುಲಭವಾಗಿ ಮೂಡಲಾರದು.

ಜಮಖಂಡಿ, ಸಾಂಗಲಿ. ಕೊಲ್ಹಾಪುರ, ಬಳ್ಳಾರಿ, ಕಾಸರಗೋಡು, ಉದಕಮಂಡಲ, ಬೀದರ್ ಮೊದಲಾದ ಗಡಿಗಳ ಮಾತಂತಿರಲಿ! ಧಾರವಾಡ, ಬೆಳಗಾಂವಿ, ಮಂಗಳೂರು ಮೊದಲಾದ ಕನ್ನಡ ಸಾಂಸ್ಕೃತಿಕ ಕ್ಷೇತ್ರಗಳಲ್ಲಿಯೇ ಕನ್ನಡದ ಸೊಲ್ಲು ಅಡಗಿಹೋಗಿತ್ತು. ಮೈಸೂರಿನ ಜನ ಕನ್ನಡದಲ್ಲಿ ಮಾತನಾಡುವುದು, ಬರೆಯುವುದು ಹೀನಾಯವೆಂದು ಭಾವಿಸುತ್ತಿದ್ದರು. ಇಂಗ್ಲಿಷ್ ಭಾಷೆಯ ಮೇಲಣ ಪ್ರೇಮ, ಆಂಗ್ಲ ಸರ್ಕಾರದ ಬಗ್ಗೆ ಇದ್ದ ಭಯ – ಈ ಎರಡು ಉಪಾಧಿಗಳಿಗೆ ಸಿಕ್ಕಿ ಕನ್ನಡಿಗರು 'ಅರೆಬೆಂದ ಸಾಹೇಬ' ರಾಗಿದ್ದರು. ತೆಲುಗು, ತಮಿಳು, ಮರಾಠಿ, ಉರ್ದು ಭಾಷೆಗಳ ವ್ಯಾಮೋಹಕ್ಕೆ ಪಕ್ಕಾಗಿದ್ದ ಗಡಿನಾಡಿನ ಕನ್ನಡಿಗರು ಕನ್ನಡಕ್ಕೆ ತಿಲತರ್ಪಣವನ್ನರ್ಪಿಸಿದ್ದರು.

ಈ ದುರಂತ ಪರಿಸ್ಥಿತಿಯಲ್ಲಿ ಕನ್ನಡದ ಪಾಂಚಜನ್ಯ ಊದಿದವರು 'ಕನ್ನಡ ದಾಸಯ್ಯ' ಶಾಂತಕವಿಗಳು.

ಕನ್ನಡಿಗರ ಮನೆ ಮನೆಗಳಿಗೆ ಅಲೆದು ಕಾಡಿಬೇಡಿ ಅತ್ತು, 'ಕನ್ನಡ ಕಾಪಾಡಿ' ಎಂದು ಕೇಳಿಕೊಂಡವರು ಶಾಂತಕವಿಗಳು. ಕೀರ್ತನೆಗಳ ಮೂಲಕ, ಕಾವ್ಯಗಳ ಮೂಲಕ, ಹಾಡುಗಬ್ಬಗಳ ಮೂಲಕ. ಇವರ ಪ್ರಭಾವಕ್ಕೆ ಸಿಕ್ಕು ಕನ್ನಡ ಕಲಿಗಳಾಗಿ ನಿಂತವರು ಆಲೂರು ವೆಂಕಟರಾಯರು, ಮುದವೀಡು ಕೃಷ್ಣರಾಯರು, ಮುದವೀಡು ವೆಂಕಟರಾಯರು, ಕಡಪಾ ರಾಘವೇಂದ್ರರಾಯರು ಮತ್ತು ಕೌಜಲಗಿ ಶ್ರೀನಿವಾಸರಾಯರು.

ಕರ್ನಾಟಕತ್ವದ ಪೂರ್ಣ ಕಲ್ಪನೆಯನ್ನು ಕನ್ನಡಿಗರ ಕಣ್ಮನಗಳ ಮೇಲೆ ಅಚ್ಚೊತ್ತಿದ ಗ್ರಂಥಗಳು, ಶಾಂತಕವಿಗಳ 'ವಿದ್ಯಾರಣ್ಯ ಕಾವ್ಯ' ಮತ್ತು ಆಲೂರು ವೆಂಕಟರಾಯರ 'ಕರ್ನಾಟಕ ಗತವೈಭವ' (೧೯೧೮).

೧೯೫೬ರಿಂದ ಈವರೆಗೆ—ಮೂವತ್ತೆಂಟು ವರ್ಷಗಳ ಕಾಲಾವಧಿಯಲ್ಲಿ ಕರ್ನಾಟಕವನ್ನು ರೂಪಿಸಿ, ಹರಿದು ಹಂಚಿ ಹೋಗಿದ್ದ ಈ ನಾಡು ಮತ್ತೆ ಒಂದುಗೂಡುವುದಕ್ಕೆ ಶ್ರಮಿಸಿದ ಮಹನೀಯರನ್ನು ಹೆಸರಿಸುವುದಷ್ಟೇ ಈ ಲೇಖನದ ಉದ್ದೇಶ. ಈ ನಾಲ್ಕು ದಶಕಗಳ ಉಜ್ವಲ ಇತಿಹಾಸವನ್ನು ಸವಿಸ್ತಾರವಾಗಿ ಸಮಗ್ರವಾಗಿ ಇತಿಹಾಸಕಾರರು ಬರೆಯಬೇಕು.

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆಯಾಗುವ ಮುನ್ನ ವಿಶ್ವವಿದ್ಯಾನಿಲಯ ಶಿಕ್ಷಣವೆಲ್ಲಾ ಮದರಾಸು ವಿಶ್ವವಿದ್ಯಾನಿಲಯಕ್ಕೆ ಅಧೀನವಾಗಿತ್ತು. ಇಂಗ್ಲಿಷ್ ಬೋಧಕ ಭಾಷೆಯಾಗಿದ್ದುದಲ್ಲದೆ ಸರ್ಕಾರ ಹಾಗೂ ಸಾರ್ವಜನಿಕ ವ್ಯವಹಾರ ಭಾಷೆಯೂ ಆಗಿತ್ತು. ಸರ್ವವ್ಯಾಪಿಯಾಗಿದ್ದ ಇಂಗ್ಲಿಷಿನ ಸರ್ವಾಧಿಕಾರಕ್ಕೆ ಸಿಕ್ಕಿ ಕನ್ನಡ ಮೂಲೆಗುಂಪಾಗಿತ್ತು.

ಸರ್ ಎಂ. ವಿಶ್ವೇಶ್ವರಯ್ಯ ಮತ್ತು ದಿವಾನ್ ಬಹದ್ದೂರ್ ಎಚ್.ವಿ. ನಂಜುಂಡಯ್ಯನವರ ಮಹಾಪ್ರಯತ್ನದಿಂದ ಮೈಸೂರು ಮದ್ರಾಸಿನ ಮುಂಗಮುಷ್ಟಿಯಿಂದ ಪಾರಾಗಿ ತನ್ನದೇ ಆದ ವಿಶ್ವವಿದ್ಯಾನಿಲಯ ಸ್ಥಾಪಿಸಿಕೊಂಡಿತು. ಮೈಸೂರು ವಿಶ್ವವಿದ್ಯಾನಿಲಯ ಹುಟ್ಟಿದ ಕಾಲದಲ್ಲಿ ಕನ್ನಡಕ್ಕೆ ವಿಶೇಷ ಇಂಬು ದೊರೆಯದಿದ್ದರೂ, ಮೈಸೂರಿನ ಜನತೆಯ ಮನಸ್ಸಿನಲ್ಲಿ ಸ್ವಾಭಿಮಾನ ಹುಟ್ಟಲು ಅವಕಾಶವಾಯಿತು.

ಭಾರತರಾಷ್ಟ್ರ ಸಭೆಗೂ (Indian National Congress) ಹಳೆಯದು 'ಮೈಸೂರು ಪ್ರಜಾಪ್ರತಿನಿಧಿ ಸಭೆ.' ಒಂದು ಕೋಟಿಗೂ ಮಿಕ್ಕ ಕನ್ನಡಿಗರ ಪ್ರಾತಿನಿಧಿಕ ಸಭೆಯಾದ ಈ

ಸಂಸ್ಥೆಯ ಕಾರ್ಯಕಲಾಪಗಳೆಲ್ಲಾ ಇಂಗ್ಲಿಷಿನಲ್ಲೇ ನಡೆಯುತ್ತಿದ್ದವು. ಆ ಕಾಲದ ಪ್ರಜಾಪ್ರತಿನಿಧಿಗಳು ಕನ್ನಡದಲ್ಲಿ ಮಾತನ್ನಾಡುವುದು ಹೀನಾಯ ಎಂಬ ಭಾವನೆ ತಳೆದಿದ್ದರು. ಪ್ರಜಾಪ್ರತಿನಿಧಿ ಸಭೆ, ಶಾಸನ ಸಭೆಗಳಲ್ಲಿ ಕನ್ನಡ ಮಾತುಗಾರಿಕೆಯನ್ನು ಬಳಕೆಗೆ ತಂದವರು ಅತ್ತಿಗುಪ್ಪೆ ಕೃಷ್ಣಶಾಸ್ತ್ರಿಗಳು, ಹೊಸಕೊಪ್ಪ ಕೃಷ್ಣರಾಯರು ಮತ್ತು ಸಿ. ನರಸಿಂಹಯ್ಯನವರು. ಅತ್ತಿಗುಪ್ಪೆ ಕೃಷ್ಣಶಾಸ್ತ್ರಿಗಳು ತಮ್ಮ ವೈದುಷ್ಯ, ವಾಗ್ಮಿಯತೆ, ಉತ್ಕಟ ಕನ್ನಡಾಭಿಮಾನಗಳಿಂದ ಎಲ್ಲರ ಗಮನವನ್ನೂ ಸೆಳೆದಿದ್ದರು. ಎಂ. ವೆಂಕಟಕೃಷ್ಣಯ್ಯನವರು (ತಾತಯ್ಯನವರು) ತಮ್ಮ 'ಸಂಪದಭ್ಯುದಯ'-'ಸಾಧ್ವಿ' ಪತ್ರಿಕೆಗಳ ಮೂಲಕ ಕನ್ನಡದ ಸ್ಥಾನಮಾನಗಳನ್ನು ರಕ್ಷಿಸುತ್ತ ಬಂದರು.

ಸಾಹಿತ್ಯಪರಿಷತ್ತಿನ ಜನನ

ಕರ್ಪೂರ ಶ್ರೀನಿವಾಸರಾಯರು, ಬೆಳ್ಳಾವೆ ವೆಂಕಟನಾರಣಪ್ಪನವರು, ಆಲೂರು ವೆಂಕಟರಾಯರ ಪ್ರಯತ್ನದಿಂದ ೧೯೧೫ರಲ್ಲಿ 'ಕರ್ನಾಟಕ ಸಾಹಿತ್ಯ ಪರಿಷತ್' ಜನ್ಮತಾಳಿತು. ಡಿ. ವಿ. ಗುಂಡಪ್ಪನವರು ಪರಿಷತ್ತಿನ ಅಧಿಕಾರ ಸೂತ್ರಗಳನ್ನು ವಹಿಸುವವರೆಗೆ (೧೯೪೩) ಪರಿಷತ್ತು ಕೇವಲ ಪಂಡಿತರ, ವಿವಿಧ ಕಳಾಮಂಡಿತರ' ಸಂಸ್ಥೆಯಾಗಿದ್ದರೂ ಅದು ಚಿರಸ್ಥಾಯಿಯಾಗಿ ನಿಲ್ಲುವುದಕ್ಕೆ ಬೆಳ್ಳಾವೆ ವೆಂಕಟನಾರಣಪ್ಪನವರ ಸೇವೆ, ತ್ಯಾಗ, ಕರ್ತೃತ್ವಶಕ್ತಿಯೇ ಕಾರಣವೆನ್ನಬಹುದು.

ಕನ್ನಡದ ಹಿರಿಮೆಯನ್ನು ಜನಸಾಮಾನ್ಯಕ್ಕೆ ಪರಿಚಯ ಮಾಡಿಕೊಟ್ಟು, ಅವರ ಹೃದಯದಲ್ಲಿ ಕನ್ನಡದ ಮೇಲಣ ಅಭಿಮಾನ ಹುಟ್ಟಿಸುವ ಕೆಲಸವಿನ್ನೂ ಆಗಬೇಕಿತ್ತು. ೧೯೨೦ರ

ಸುಮಾರಿಗೆ ಮೊಟ್ಟಮೊದಲನೆಯ ಬಾರಿ ಕಡಪಾ ರಾಘವೇಂದ್ರ ರಾಯರು ಬೆಂಗಳೂರಿಗೆ ಬಂದರು. ಹದಿನೈದು ದಿನ ಸತತವಾಗಿ ಅವರು ಗಾಂಧೀ ಮೈದಾನದಲ್ಲಿ (ಈಗ ಕನ್ನಡ ಸಾಹಿತ್ಯ ಪರಿಷತ್ತು ಇರುವ ಸ್ಥಳ) ಭಗವದ್ಗೀತೆಯ ಮೇಲೆ ಭಾಷಣಮಾಡಿದರು. ಕೇವಲ ಆಧ್ಯಾತ್ಮಿಕ ಜೀವನವನ್ನಲ್ಲದೆ ರಾಜಕೀಯ ಹಾಗೂ ಸಾಮಾಜಿಕ ಜೀವನವನ್ನು ಗೀತೆ ಹೇಗೆ ರೂಪಿಸಬಲ್ಲದೆಂಬುದನ್ನು ರಾಘವೇಂದ್ರರಾಯರು ಅಸದೃಶವಾಗಿ ಬಣ್ಣಿಸುತ್ತಿದ್ದರು. ಧಾರವಾಡ, ಬಳ್ಳಾರಿ ಕನ್ನಡ ಶೈಲಿಗಳನ್ನು ಸಮಾವೇಶಗೊಳಿಸಿಕೊಂಡ ಅವರ ಪ್ರೋಜ್ಜ್ವಲಶೈಲಿ ಮೈಸೂರಿನವರ ಕಣ್ಣು ತೆರೆಯಿಸಿತು.

ರಾಘವೇಂದ್ರರಾಯರು ಹಾಕಿದ ಅಸ್ತಿಭಾರದ ಮೇಲೆ ಮಹಾಸೌಧ ಕಟ್ಟಿದವರು ಪಂಡಿತ ತಾರಾನಾಥರು. ಅವರ ಮಾತುಗಾರಿಕೆ ಕೇಳಿ ಮೈಸೂರಿನ ಜನ ವಿಸ್ಮಯಗೊಂಡರು. ಸಂಗೀತ, ಸಾಹಿತ್ಯ, ವೈದ್ಯ, ದರ್ಶನಗಳಲ್ಲಿ ಅವರಿಗಿದ್ದ ಅನ್ಯಾದೃಶ್ಯ ಪಾಂಡಿತ್ಯ, ಬಹು ಭಾಷಾ ಪರಿಶ್ರಮ, ತೇಜಃಪುಂಜವಾದ ವಾಗ್ವೈಖರಿ ಮೈಸೂರಿನವರ ಸುಪ್ತ ಕನ್ನಡಾಭಿಮಾನಕ್ಕೆ ಪುಟಗೊಟ್ಟಿತು. ಇದೇ ಕಾಲದಲ್ಲಿ ಕೊಪ್ಪಳದ ಜಯರಾಮಾಚಾರ್ಯರು, ಸೋಸಲೆ ರಾಮದಾಸರು, ಬೇಲೂರು ಕೇಶವದಾಸರು, ಶಿವಯ್ಯ ಶಾಸ್ತ್ರಿಗಳು ತಮ್ಮ ಕೀರ್ತನೆಗಳ ಮೂಲಕ ಜನಜಾಗೃತಿಯನ್ನುಂಟುಮಾಡಿದರು.

ಮೈಸೂರಿನಲ್ಲಿ ಆರಂಭವಾದ ಕಾಂಗ್ರೆಸ್ ಚಳುವಳಿ, ಸ್ವರಾಜ್ಯ ಪಕ್ಷಗಳು ಪರ್ಯಾಯವಾಗಿ ಸಾಂಸ್ಕೃತಿಕ ಪುನರುದ್ಧಾರಕ್ಕೆ ಇಂಬುಗೊಟ್ಟವು. ಡಿ. ವಿ. ಗುಂಡಪ್ಪನವರು, ನ್ಯಾಯಮೂರ್ತಿ ಸೆಟ್ಲೂರ್ ಶ್ರೀನಿವಾಸ ಅಯ್ಯಂಗಾರ್ಯರು,

ಜಮಖಂಡಿ ಭೀಮರಾಯರು, ಎಚ್. ವಿ. ಸುಬ್ರಮ್ಹಣ್ಯಂ, ಪಾ. ರಾ. ರಾಮಯ್ಯ, ಕೆ. ರಂಗಯ್ಯಂಗಾರ್, ತಾಳಕೆರೆ ಸುಬ್ರಮಣ್ಯಂ, ತಿ. ತಾ. ಶರ್ಮ ಈ ರಂಗದಲ್ಲಿ ಅಪಾರ ಕೆಲಸ ಮಾಡಿದರು.

'ಶ್ರೀ' ಅವರು

ಆಚಾರ್ಯ ಶ್ರೀ ಬಿ.ಎಂ. ಶ್ರೀಕಂಠಯ್ಯನವರ ಲಕ್ಷ್ಯ ಕನ್ನಡದ ಕಡೆ ತಿರುಗಿದುದು ಕನ್ನಡಿಗರ ಪುಣ್ಯವಿಶೇಷ. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಶ್ರೀಯವರು ಕನ್ನಡದ ಹಿರಿಮೆಯನ್ನು ಸಾರುವುದಕ್ಕಾರಂಭಸಿದಾಗ ಜನ ಅಚ್ಚರಿಗೊಂಡರು.

ಇಂಗ್ಲಿಷ್, ಕನ್ನಡ, ಗ್ರೀಕ್, ತಮಿಳು, ಸಂಸ್ಕೃತ ಭಾಷೆಗಳ ಮೇಲೆ ಶ್ರೀಯವರಿಗೆ ಏಕರೀತಿಯಾದ ಪಾಂಡಿತ್ಯವಿತ್ತು. ಆ ಅಪಾರ ಪಾಂಡಿತ್ಯ ಬಲದಿಂದ ಅವರು ಕಾಲ್ಡ್‌ವೆಲ್ ಪಂಡಿತರ ದಕ್ಷಿಣ ಭಾಷಾಮೈತ್ರಿ ತತ್ವವನ್ನೊಪ್ಪಿಕೊಂಡು, ಕನ್ನಡ ಇತರ ದಾಕ್ಷಿಣಾತ್ಯಭಾಷೆಗಳೊಂದಿಗೆ ಹೆಚ್ಚು ಸಂಪರ್ಕವಿಟ್ಟುಕೊಳ್ಳಬೇಕೆಂದು ಪ್ರತಿಪಾದಿಸಿದರು. ಶ್ರೀಯವರ ವಾದಸರಣಿ ಕನ್ನಡದ ಪುನರೋದಯಕ್ಕೆ ಪೋಷಕವಾದಂತೆ ಇತರ ದ್ರಾವಿಡ ಭಾಷೆಗಳ ಉದ್ಧಾರಕ್ಕೂ ನೆರವಾಯಿತು.

ಇಂಗ್ಲಿಷಿನ ಮೋಹ ಅಲ್ಪ ಸ್ವಲ್ಪ ಅಳಿದು, ಕನ್ನಡದ ಬಗ್ಗೆ ಅಭಿಮಾನ ಹುಟ್ಟುತ್ತಿದ್ದ ಕಾಲದಲ್ಲಿ ಗಾಂಧೀಜಿಯವರ ಕಂಬಳಿಯ ಮರೆಯಲ್ಲಿ ಆಶ್ರಯಪಡೆದ ಹಿಂದಿ ಧಾಳಿಯಿಟ್ಟಿತು.

ಕನ್ನಡ ಸುಭದ್ರವಾಗಿ ನಿಲ್ಲುವುದಕ್ಕೆ ಅಡ್ಡಿ ಆತಂಕಗಳನ್ನೊದಗಿಸಿದ - ಹಿಂದಿ ಚಳುವಳಿಯ ವಿರುದ್ಧ ಸೆಣಸಲು ನಿಂತ

ವರು ಎ. ಆರ್. ಕೃಷ್ಣಶಾಸ್ತ್ರಿಗಳು. 'ಭಾರತದ ಬಹು ಸಂಖ್ಯಾತರ ಭಾಷೆಯೆಂದು ಹಿಂದಿಯನ್ನು ಮಾನಿಸೋಣ–ಆದರೆ ದೇಶ ಭಾಷೆಗಳನ್ನು ತುಳಿಯಲು ಹಿಂದಿಗೆ ಅವಕಾಶ ಕೊಡಬಾರದು' ಎಂದು ಕೃಷ್ಣಶಾಸ್ತ್ರಿಗಳು ಘೋಷಿಸಿದರು.

ಈ ವೇಳೆಗೆ ಒಂದು ತತ್ವ ಎಲ್ಲ ಕನ್ನಡ ಭಕ್ತರ ಮನಸ್ಸಿನಲ್ಲಿ ಸ್ಥಿರವಾಗಿ ನೆಲಸಿತು. ಕನ್ನಡ ಬದುಕಬೇಕಾದರೆ, ಹರಿದು ಹಂಚಿಹೋಗಿರುವ ಕನ್ನಡನಾಡು ಒಂದುಗೂಡಿ ಒಂದೇ ಪ್ರಾಂತ್ಯವಾಗಬೇಕು. ಈ ಏಕೀಕೃತ ಕರ್ನಾಟಕ ಪ್ರಾಂತ್ಯದ ಒಡೆಯರಾಗಿ ಪರಂಪರಾಗತವಾಗಿ ಕನ್ನಡವನ್ನು ಪೋಷಿಸಿಕೊಂಡು ಬಂದಿರುವ ಮೈಸೂರಿನ ಮಹಾಸ್ವಾಮಿಗಳವರೇ ಪ್ರಭುಗಳಾಗಿರಬೇಕು.

ಅನಿವಾರ್ಯ ಏಕೀಕರಣ

ಕನ್ನಡದ ಉಳುವಿಗೆ ಕರ್ನಾಟಕ ಏಕೀಕರಣ ಅನಿವಾರ್ಯವಾಯಿತು. ಕನ್ನಡ ಬದುಕಬೇಕಾದರೆ, ಕನ್ನಡನಾಡು ಬದುಕಬೇಕು, ಎನ್ನುವ ಭಾವನೆ ಜನತೆಯ ಮನಸ್ಸಿನಲ್ಲಿ ಬೇರೂರಿತು. ಈ ಭಾವನೆ ಬೆಳಸಿ, ಕನ್ನಡಿಗರಲ್ಲಿ ಐಕ್ಯಮತ್ಯ, ಸೌಹಾರ್ದ ಮೂಡಿಸಲು ಶ್ರೀಯವರು, ಅ. ನ. ಕೃ, ಕಾರಂತರು, ಬಿ. ಶಿವಮೂರ್ತಿಶಾಸ್ತ್ರಿ, ತಿ. ತಾ. ಶರ್ಮ, ರಾಜರತ್ನಂ ಹಲವು ಸಲ ಕನ್ನಡನಾಡು ಸುತ್ತಿಬಂದರು.

ತಮ್ಮ ಭಾಷಣ, ಲೇಖನ, ಗ್ರಂಥಗಳಿಂದ 'ಅಖಂಡ ಕರ್ನಾಟಕ' ಭಾವನೆಯನ್ನು ಸ್ಥಿರಗೊಳಿಸಿ ರಾಜಕೀಯ ಮುಖಂಡರು ಈ ಚಳುವಳಿಗೆ ಧುಮುಕ್ಕುವಂತೆ ಪ್ರೇರೇಪಿಸಿದರು.

ಇವರ ಪ್ರಯತ್ನದ ಫಲವಾಗಿ ಶಿವಪುರಿಯಲ್ಲಿ ನಡೆದ

ಮೈಸೂರು ಕಾಂಗ್ರೆಸ್ ಅಧಿವೇಶನ ಏಕೀಕೃತ ಕರ್ನಾಟಕ ಪ್ರಾಂತರಚನೆಯ ತತ್ವವನ್ನು ಒಪ್ಪಿಕೊಂಡಿತು.

ಭಾಷಾನುವಾರು ಪ್ರಾಂತ್ಯ ರಚನೆಯ ತತ್ತ್ವಕ್ಕೆ ಮೋತಿಲಾಲ್ ನೆಹ್ರೂ ಸಮಿತಿಯೇ ತನ್ನ ಅಂಗೀಕಾರ ಮುದ್ರೆಯನ್ನೊತ್ತಿತು. ೧೯೨೪ರಲ್ಲಿ ಬೆಳಗಾಂವಿಯಲ್ಲಿ ನಡೆದ ಕಾಂಗ್ರೆಸ್ ಮಹಾಧಿವೇಶನದ ಅಧ್ಯಕ್ಷರಾಗಿದ್ದ ಗಾಂಧೀಜಿ ಈ ತತ್ತ್ವವನ್ನು ಒಪ್ಪಿಕೊಂಡುದಲ್ಲದೆ, ಕರ್ನಾಟಕ ಪ್ರಾಂತ್ಯ ನಿರ್ಮಾಣ ಅತ್ಯಗತ್ಯವೆಂದು ಸಮರ್ಥಿಸಿ ಕನ್ನಡಿಗರ ಭವಿಷ್ಯತ್ತಿಗೆ ಬಲವಾದ ಬುನಾದಿ ಹಾಕಿದರು.

ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ಕೂಡಲೆ ಪ್ರಾಂತ್ಯಗಳ ಪುನರ್ವಿಂಗಡನೆಯಾಗಿ ಕರ್ನಾಟಕ ಪ್ರಾಂತ್ಯ ರೂಪುಗೊಳ್ಳುವುದೆಂದು ಜನ ನಂಬಿದ್ದರು. ಆದರೆ ಯಾವ ಕಾರಣಕ್ಕೋ ಏನೋ ಕೇಂದ್ರಸರ್ಕಾರ ಭಾಷಾವಾರು ಪ್ರಾಂತರಚನೆಯನ್ನು ಮುಂದೆ ತಳ್ಳಿಕೊಂಡು ಬಂತು. ಜನಾಭಿಪ್ರಾಯ ಸಂಘಟಿತವಾಗಿ, ಭಾಷಾವಾರು ಪ್ರಾಂತ್ಯರಚನೆಯ ಬೇಡಿಕೆ ಉತ್ಕಟವಾಗಲು ಕೇಂದ್ರಸರ್ಕಾರ ೧೯೫೩ರಲ್ಲಿ ಫಸಲ್ ಆಲಿಯವರ ನಾಯಕತ್ವದಲ್ಲಿ ಒಂದು ಸಮಿತಿಯನ್ನು ನೇಮಿಸಿ ವರದಿಯನ್ನು ಬರಮಾಡಿಕೊಂಡಿತು. ಇನ್ನು ಈ ಪ್ರಶ್ನೆಯನ್ನು ಉಪೇಕ್ಷಿಸುವುದು ಭಾರತದ ಅಸ್ತಿತ್ವಕ್ಕೇ ಹಾನಿಕರವೆಂಬ ಭಾವನೆ ಕೇಂದ್ರ ಸರ್ಕಾರಕ್ಕೆ ಬರಲು ೧೯೫೬ನೆಯ ಇಸವಿ ನವೆಂಬರ್ ತಿಂಗಳಲ್ಲಿ ಹೊಸ ಪ್ರಾಂತ್ಯಗಳನ್ನು ನಿರ್ಮಿಸಲು ಕೇಂದ್ರ ಸರ್ಕಾರ ನಿರ್ಧರಿಸಿತು. ಈ ನಿರ್ಧಾರದಿಂದ ಕನ್ನಡಿಗರ ಬಹು ದಿನಗಳ ಆಸೆ ಫಲಿಸಿತು.

ಕೇಂದ್ರ ಸರ್ಕಾರದ ಮನವನ್ನೊಲಿಸಿಕೊಂಡು, ಕರ್ನಾಟಕ ಪ್ರಾಂತ್ಯ ನಿರ್ಮಾಣದ ಅಗತ್ಯವನ್ನು ಅವರಿಗೆ ಮನವರಿಕೆ

ಮಾಡಿಕೊಡಲು ಸಿದ್ದವನಹಳ್ಳಿ ನಿಜಲಿಂಗಪ್ಪ, ಬಿ. ಎಸ್. ದಾತಾರ್, ಡಿ. ಪಿ. ಕರಮರ್‌ಕರ್, ಹೊಸಮನಿ ಸಿದ್ದಪ್ಪ ಮತ್ತು ರಾಮಕೃಷ್ಣ ಕಾರಂತರು ಪಟ್ಟಿರುವ ಶ್ರಮ ಅಷ್ಟಿಷ್ಟಲ್ಲ.

ಉತ್ತರ ಕರ್ನಾಟಕ

ಮುಂಬಯಿ ಸರ್ಕಾರದ ಪದಾಘಾತಕ್ಕೆ ಸಿಕ್ಕಿದ್ದ ಉತ್ತರ ಕರ್ನಾಟಕದಲ್ಲಿ ಕನ್ನಡದ ಸ್ಥಿತಿ ಶೋಚನೀಯವಾಗಿತ್ತು. ಉತ್ತರ ಕರ್ನಾಟಕದ ಅಧಿಕಾರಿಗಳಾಗಿ ಬರುತ್ತಿದ್ದ ಮರಾಠಿಗರು ಕನ್ನಡದಮೇಲೆ ತಮ್ಮ ಅಧಿಕಾರ ಬಲದಿಂದ ಪ್ರಬಲ ಧಾಳಿ ನಡೆಸಿದ್ದರು. ಕನ್ನಡಸಂಘ, ಸಂಸ್ಥೆ, ಶಿಕ್ಷಣಾಲಯಗಳು ಮರಾಟಿಮಯವಾಗಿದ್ದುದಲ್ಲದೆ, ಕನ್ನಡಿಗರಲ್ಲಿ ನೈಚ್ಯಾನುಸಂಧಾನ ಮೂಡಿ, ಅವರನ್ನು ಮರಾಟಿ ಅಭಿಮಾನಿಗಳನ್ನಾಗಿ ಮಾಡಿತ್ತು.

ಈ ಪರಿಸ್ಥಿತಿಯಲ್ಲಿ ಧಾರವಾಡದಲ್ಲಿ ಕರ್ನಾಟಕ ಕಾಲೇಜ್ ಸ್ಥಾಪಿಸಲು ಹೋರಾಡಿದವರು ದಿವಾನ್ ಬಹದ್ದೂರ್ ರೊದ್ದ ಶ್ರೀನಿವಾಸರಾಯರು. ಅವರ ಸಮಕಾಲೀನರಾಗಿದ್ದ ಡೆಪ್ಯುಟಿ ಚನ್ನಬಸಪ್ಪನವರು ಕನ್ನಡ ಶಾಲೆಗಳ ಸ್ಥಾಪನೆಗೆ ತ್ರಿಕರಣ ಪೂರ್ವಕವಾಗಿ ಶ್ರಮಿಸಿದರು.

ಇಂದಿಗೂ ಉತ್ತರಕರ್ನಾಟಕದಲ್ಲಿ ಕನ್ನಡ ಜೀವಂತವಾಗಿರುವುದಕ್ಕೆ ಈ ಇಬ್ಬರು ಮಹಾನುಭಾವರ ಶ್ರಮವೇ ಕಾರಣವೆಂದು ಧಾರಾಳವಾಗಿ ಹೇಳಬಹುದು. ಕೂಪರ್ ಮಂತ್ರಿಮಂಡಲದಲ್ಲಿ ಶಿಕ್ಷಣಮಂತ್ರಿಗಳಾದ ಸರ್ ಕಂಬಳಿ ಸಿದ್ದಪ್ಪನವರು ಕನ್ನಡಿಗರ ಕೈಬಿಟ್ಟು ಹೋಗಿದ್ದ ನೂರಾರು ಕನ್ನಡಶಾಲೆಗಳನ್ನು ಪುನಃ ದೊರಕಿಸಿದುದಲ್ಲದೆ ನೂರಾರು ಹೊಸ ಶಾಲೆಗಳನ್ನು ಸ್ಥಾಪಿಸಿದರು.

ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿಯೂ ಕರ್ನಾಟಕ ಏಕೀಕರಣ ಸಾಧಿಸಲು ಟೊಂಕ ಕಟ್ಟಿತು. ಹೊಸಮನಿ ಸಿದ್ದಪ್ಪನವರು, ದೊಡ್ಡಮೇಟಿ ಅಂದಾನಪ್ಪನವರು, ದ. ಪ. ಕರಮರ್‌ಕರ್, ಕಬ್ಬೂರ ಮಧ್ವರಾಯರು, ಜಾಲೀಹಾಳು ಅನಂತರಾಯರು, ಕೌಜಲಗಿ ಹಣುಮಂತರಾಯರು, ದಿವಾಕರ ರಂಗರಾಯರು, ಹಳ್ಳಿಕೇರಿ ಗುದ್ಲಪ್ಪನವರು ಈ ಚಳುವಳಿಯನ್ನು ಪೋಷಿಸುತ್ತ ಬಂದರು. ಗದುಗಿನ ದಾನವೀರ ಬಸರಿಗಿಡದ ವೀರಪ್ಪನವರು ತಮ್ಮ ಸಮಸ್ತ ಆಸ್ತಿಯನ್ನೂ ಏಕೀಕರಣಕ್ಕೆ ಮೀಸಲಿಟ್ಟರು.

ಕಲಾವಿದರ ಸೇವೆ

ಶಿಕ್ಷಣ ರಾಜಕೀಯ ಕ್ಷೇತ್ರಗಳಲ್ಲಿ ಏಕೀಕರಣ ಚಳುವಳಿ ಸಾಗಿದಂತೆ ಸಾಂಸ್ಕೃತಿಕ ರಂಗದಲ್ಲಿಯೂ ಸಾಗಬೇಕಾಗಿತ್ತು. ಪುಣೆ, ಮುಂಬಯಿಗಳಿಂದ ಬರುತ್ತಿದ್ದ ಮರಾಟಿ ನಾಟಕ ಕಂಪೆನಿಗಳು ಉತ್ತರ ಕರ್ನಾಟಕದ ರಂಗಭೂಮಿಯನ್ನು ಮೂಲೆಗೊತ್ತರಿಸಿದ್ದವು. ಆ ಕಂಪೆನಿಗಳ ಸ್ಪರ್ಧೆಯನ್ನೆದುರಿಸಿ ನಿಂತು, ಜನ ಕನ್ನಡನಾಟಕಗಳ ಕಡೆ ಲಕ್ಷ್ಯಬೀರುವಂತೆ ಮಾಡಿದವರು ಗರೂಡ ಸದಾಶಿವರಾಯರು, ವಾಮನರಾವ್ ಮಾಸ್ತರ್, ಗಂಗೂಬಾಯಿ ಗುಳೇದಗುಡ್ಡ, ಹಂದಿಗನೂರ ಸಿದ್ಧರಾಮಪ್ಪ ಮತ್ತು ಬಸವರಾಜ ಮನ್‌ಸೂರ್ ಅವರು.

ರಬಕವಿಯ ಶ್ರೀಮಂತರಾಗಿದ್ದ ತಮ್ಮಣ್ಣಪ್ಪ ಚಿಕ್ಕೋಡಿಯವರೂ, ಗೋಕಾಕ್ ಮಿಲ್ಸ್ ಮ್ಯಾನೇಜರಾಗಿದ್ದ ರಾವ್ ಸಾಹೇಬ್ ಕಣಬರಗಿಮಠ ಶಿವಮೂರ್ತಿಸ್ವಾಮಿಗಳೂ ಗಡಿನಾಡುಗಳಲ್ಲಿ ಮರಾಟಿ ಕಂಪೆನಿಗಳು ಮಾಡುತ್ತಿದ್ದ ಹಾವಳಿಯನ್ನೆದುರಿ

ಸಲು ಕನ್ನಡ ಕಂಪೆನಿಗಳನ್ನು ಹುಟ್ಟುಹಾಕಿ, ಲಕ್ಷಾಂತರ ರೂಪಾಯಿಗಳನ್ನು ಕನ್ನಡ ಪ್ರಸಾರಕ್ಕೆ ವಿನಿಯೋಗಿಸಿದರು.

ಉತ್ತರ ಕರ್ನಾಟಕದ ಶಿಕ್ಷಣಭಾಷೆ ಮರಾಟಿಯಾಗಿತ್ತು. ಕನ್ನಡನಾಡು, ಸಾಹಿತ್ಯ, ಸಂಸ್ಕೃತಿಗೆ ಅಪಾರ ಸೇವೆಯನ್ನಸಗಿರುವ ಅನೇಕ ಹಿರಿಯರು ಮಾರಾಟಿ ಶಿಕ್ಷಣ ಪಡೆದವರೇ ಆಗಿದ್ದರು. ಕನ್ನಡಿಗರಲ್ಲಿ ಅಕ್ಷರಜ್ಞತೆಯೇ ಅತ್ಯಂತ ಸಣ್ಣ ಪ್ರಮಾಣದಲ್ಲಿದ್ದಾಗ ಆನಾಡಿ ಚೆನ್ನವೀರಪ್ಪನವರು ಪ್ರಕಟನಮಂದಿರ, ಪುಸ್ತಕಾಲಯ ಆರಂಭಿಸಿ ಕನ್ನಡ ಗ್ರಂಥಗಳ ಪ್ರಸಾರ ಕೈಗೊಂಡರು. ಧಾರವಾಡದಿಂದ ಬೆಳಗಾಂವಿಯವರೆಗೆ, ಬಳ್ಳಾರಿಯವರೆಗೆ ಚನ್ನವೀರಪ್ಪನವರು ಗಾಡಿಯಲ್ಲಿ ಪುಸ್ತಕಗಳನ್ನು ತುಂಬಿಕೊಂಡು ಹೋಗಿ ಮಾರುಕಟ್ಟೆ ಚೌಕಗಳಲ್ಲಿ, ಸಂತೆಮಾಳಗಳಲ್ಲಿ ನಿಂತು ಕನ್ನಡ ಪ್ರಸಾರ ಮಾಡಿದರು. ನವಕರ್ನಾಟಕದ ಆದಿಕವಿ ಶಾಂತಕವಿಗಳ ಕೃತಿಗಳನ್ನು ಪ್ರಸಿದ್ಧಿಗೆ ತಂದ ಕೀರ್ತಿಯೂ ಆನಾಡಿ ಚೆನ್ನವೀರಪ್ಪನವರಿಗೇ ಸಲ್ಲಬೇಕು.

ಇಂದು, ಉತ್ತರ ಕರ್ನಾಟಕದ ಸಾಹಿತ್ಯರಂಗದಲ್ಲಿ ಕಂಡು ಬರುತ್ತಿರುವ ಸಿದ್ಧಿಗೆ ಅಸ್ತಿಭಾರ ಹಾಕಿದವರು ದತ್ತಾತ್ರೇಯ ರಾಮಚಂದ್ರ ಬೇಂದ್ರೆ. ಇವರ ಪ್ರಭಾವದಿಂದ ಕನ್ನಡನಾಡಿಗೆ ಹಲವಾರು ಕವಿಗಳು, ಕತೆಗಾರರು, ಕಾದಂಬರಿಕಾರರು ದೊರೆತರು. ಹುಬ್ಬಳ್ಳಿಯ ಪಂ. ವೆಂಕೋಬಾಚಾರ್ಯ, ಕರ್ಬಿ, ಕೆ. ಎಫ್. ಪಾಟೀಲ ಮೊದಲಾದವರು ಆ ಭಾಗದಲ್ಲಿ ಕನ್ನಡ ಹಿತ ಸಂರಕ್ಷಣೆಯನ್ನು ವಿಶೇಷ ನಿಷ್ಠೆಯಿಂದ ಮಾಡಿದ್ದಾರೆ.

ಬಿಜಾಪುರ

ಬಿಜಾಪುರ ಕನ್ನಡದ ಗಂಡುಮೆಟ್ಟು. ಆ ಕೀರ್ತಿಯನ್ನು

ಉಳಿಸಿ ಬೆಳಸಿದವರು ಕೌಜಲಗಿ ಶ್ರೀನಿವಾಸರಾಯರು ಮತ್ತು ರಾವ್‌ಬಹದ್ದೂರ ಹಳಕಟ್ಟಿಯವರು.

ಕಾಂಗ್ರೆಸ್, ಕನ್ನಡ ಎರಡೂ ಶ್ರೀನಿವಾಸರಾಯರಿಗೆ ಉಚ್ಛ್ವಾಸ, ನಿಶ್ವಾಸಗಳಂತಿದ್ದುವು. ಜಿಲ್ಲೆಯ ಶ್ರೇಷ್ಠ ವಕೀಲರಾಗಿ ರಾಯರು ಸಂಪಾದಿಸಿದ ಸಮಸ್ತ ಆಸ್ತಿಯನ್ನೂ ಕಾಂಗ್ರೆಸ್ಸಿಗೆ, ಕನ್ನಡದ ಬದುಕಿಗೆ, ನಿವೇದಿಸಿದರು.

ಬೆಳಗಾಂವಿ

ಉತ್ತರ ಕರ್ನಾಟಕದಲ್ಲಿ ಕನ್ನಡದ ಬಗ್ಗೆ ತೀರ ಹಿಂದುಳಿದಿದ್ದ ಜಿಲ್ಲೆ ಬೆಳಗಾಂವಿ. ಒಂದಲ್ಲೊಂದು ದಿನ ಬೆಳಗಾಂವಿಯನ್ನು ಕಬಳಿಸುವ ಸಲುವಾಗಿ ಮರಾಟಿಗಳು ಬೆಳಗಾಂವಿಯ ಮೇಲೆ ಸತತವಾಗಿ ಧಾಳಿ ನಡೆಸಿದರು. ಸಂಘ ಸಂಸ್ಥೆಗಳು, ನಗರ ಸಭೆ, ಸಾಂಸ್ಕೃತ ಚಟುವಟಿಕೆಗಳೆಲ್ಲವೂ ಮರಾಟಿಗರ ಪಾಲಾಗಿತ್ತು.

ಕನ್ನಡಿಗರೂ ಬೆಳಗಾಂವಿ ಕಾಂಗ್ರೆಸ್ಸಿನ ಸ್ವಾಗತಾಧ್ಯಕ್ಷರೂ ಆದ ದೇಶಪಾಂಡೆ ಗಂಗಾಧರರಾಯರು ಪ್ರತ್ಯಕ್ಷವಾಗಿ-ಪರೋಕ್ಷವಾಗಿ ಕನ್ನಡಕ್ಕೆ ದ್ರೋಹ ಮಾಡುತ್ತಿದ್ದರು. ಅತ್ಯಂತ ಪ್ರಭಾವಶಾಲಿಗಳಾಗಿದ್ದ ಗಂಗಾಧರರಾಯರನ್ನು ಎದುರಿಸುವುದು ಸುಲಭದ ಮಾತಾಗಿರಲಿಲ್ಲ. ಗಂಗಾಧರರಾಯರ ಕೌಟಿಲ್ಯ ನೀತಿಯಿಂದಾಗಿ ಬೆಳಗಾಂವಿ ಕನ್ನಡಿಗರ ಕೈ ಬಿಡುತ್ತಿದ್ದುದನ್ನು ಕಂಡ ಮುದವೀಡು ಕೃಷ್ಣರಾಯರು ತಮ್ಮ 'ಕರ್ನಾಟಕ ವೃತ್ತ' ವಾರಪತ್ರಿಕೆಯನ್ನು ಧಾರವಾಡದಿಂದ ಬೆಳಗಾಂವಿಗೆ ಸಾಗಿಸಿ, ಮರಾಟಿಗರ ಪ್ರಾಬಲ್ಯದ ವಿರುದ್ಧ ಹೋರಾಡಲಾರಂಭಿಸಿದರು. ಕೃಷ್ಣರಾಯರ ಭುಜಕ್ಕೆ ಭುಜ ಕೊಟ್ಟು ನಿಂತು ಕನ್ನಡ ಕಾಪಾಡಿದ

ವರು ಡಾ॥ ಸವಣೂರ ಹನುಮಂತರಾಯರು, ಗೆಜ್ಜೆ ಕೃಷ್ಣ ರಾಯರೂ ಮತ್ತು ಬೆಳವಿಯವರು.

ಧಾರವಾಡದ ಲಿಂಗಾಯಿತ ಎಜ್ಯುಕೇಷನ್ ಸೊಸೈಟಿಯವರು ಬೆಳಗಾಂವಿಯಲ್ಲಿ 'ಲಿಂಗರಾಜ ಕಾಲೇಜ್' ಸ್ಥಾಪಿಸಿದುದೂ, ಬಳವಂತ ದಾತಾರ್‌ರವರು 'ಲಾ ಕಾಲೇಜ್' ಸ್ಥಾಪಿಸಿದುದೂ ಬೆಳಗಾಂವಿಯ ಪರಿಸ್ಥಿತಿಯನ್ನು ತಕ್ಕಮಟ್ಟಿಗೆ ಸುಧಾರಿಸಿತು.

ಸಾರ್ವಜನಿಕ ರಂಗದಲ್ಲಿ ಕನ್ನಡ ಸೇನಾನಿಗಳಾಗಿ ಹೋರಾಡಿದ ಅರವಿಂದ ಜೋಶಿ ಮತ್ತು ಅಡ್ಡಣಗಿ ವಕೀಲರು ಅನೇಕ ಸಲ ಮರಾಟಿಗರ ಕೋಪ ತಾಪಗಳ ಸವಿಕಂಡು ಪ್ರಹಾರ ಸೇವೆಯನ್ನು ಅನುಭವಸಬೇಕಾಯಿತು.

ಸೊಲ್ಲಾಪುರ

ಉತ್ತರ ಕರ್ನಾಟಕದ ಗಡಿ ನಾಡಾದ ಸೊಲ್ಲಾಪುರದ ಪರಿಸ್ಥಿತಿ ಇಂದಿಗೂ ಶೋಚನೀಯವಾಗಿದೆ. ಇಲ್ಲಿನ ಬಹು ದೊಡ್ಡ ಶ್ರೀಮಂತರು ಕನ್ನಡಿಗರು. ಮರಾಟಿ ರಾಹುಗ್ರಸ್ತರಾಗಿರುವ ಈ ಶ್ರೀಮಂತರಿಗೆ ಕನ್ನಡ ಬೇಕಿಲ್ಲ. ಇವರ ಉಪೇಕ್ಷೆಯನ್ನು ಪ್ರತಿಭಟಿಸಿ ಸ್ವಂತ ಖರ್ಚಿನಿಂದ ಕನ್ನಡ ಶಾಲೆಯನ್ನು ನಡೆಸುತ್ತಿರುವ ಜಯದೇವಿ ಬಾಯಿ ಲಿಗಾಡೆಯವರ ಮಾತೃಶ್ರೀಯವರು ಅಭಿನಂದನಾರ್ಹರು. ಸೊಲ್ಲಾಪುರದಲ್ಲಿ ಕನ್ನಡಕ್ಕಾಗಿ ದುಡಿಯುತ್ತಿರುವುದು ಈ ಮನೆತನವೊಂದೇ. ಜಯದೇವಿ ಬಾಯಿ ಸ್ವಯಂ ಕನ್ನಡ ಕವಯಿತ್ರಿಯಾಗಿರುವುದಲ್ಲದೆ, ಪರಮ ನಿಷ್ಠೆಯಿಂದ ಕನ್ನಡ ಪ್ರಸಾರ ಕಾರ್ಯ ನಡೆಸಿಕೊಂಡು ಬಂದಿದ್ದಾರೆ.

ಬಳ್ಳಾರಿ

ಅನೇಕ ಆಘಾತಗಳಿಗೆ ಸಿಲುಕಿದರೂ ಬಳ್ಳಾರಿ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡು ಬಂದಿರುವುದು ಹಿರಿಯಚ್ಚರಿ.

ತೆಲಗು ಅಧಿಕಾರಿಗಳ ದರ್ಪ ದಬ್ಬಾಳಿಕೆಯನ್ನೆದುರಿಸಿ ಕನ್ನಡದ ಹಿತಸಂರಕ್ಷಣೆ ಮಾಡಿದ ಹಿರಿಯರಲ್ಲಿ ರಂಗನಾಥ ಮೊದಲಿಯಾರರು, ಮಹಾಬಲೇಶ್ವರಪ್ಪನವರು, ಹೊಸಪೇಟೆ ಅನಂತಾಚಾರ್ಯರು ತರುವಾಯದವರಿಗೆ ಮೇಲ್ಪಂಕ್ತಿಹಾಕಿ ಕೊಟ್ಟರು. ಬಳ್ಳಾರಿಯನ್ನು ಅಂಧ್ರರಿಗೆ 'ಪಸಾಯನದಾನ' ಕೊಡುವ ಸಂದರ್ಭ ಒದಗಿದಾಗ ಕನ್ನಡ ಶೂರರಾಗಿ ಹೋರಾಡಿದವರು ಟೇಕೂರ್ ಸುಬ್ರಮಣ್ಯಂ, ಜೋಳದರಾಶಿ ದೊಡ್ಡನಗೌಡ, ನಾಗೇಶಶಾಸ್ತ್ರಿಗಳು, ರಜಾಕ್ ಸಾಹೇಬರು, ಗಾದಿಲಿಂಗನಗೌಡರು, ಬದನೇಹಾಳು ರಂಗನಗೌಡರು, ಬೂಸಣ್ಣನವರು, ಯಜಮಾನ ಶಾಂತರುದ್ರಪ್ಪನವರು.

ದಕ್ಷಿಣ ಕನ್ನಡ ಜಿಲ್ಲೆ

ಕನ್ನಡದ ಸಂಬಂಧವಾಗಿ ದಕ್ಷಿಣ ಕನ್ನಡ ಜಿಲ್ಲೆಯನ್ನು ಸ್ಮರಿಸಿಕೊಂಡಾಗ ನಮ್ಮ ಮುಂದೆ ಬಂದು ನಿಲ್ಲುವುದು ಎರಡು ಹೆಸರುಗಳು - ಕಾರ್ನಾಡ ಸದಾಶಿವರಾಯರು, ನೆಲ್ಲೀಕಾಯಿ ವೆಂಕಟರಾಯರು. ಒಬ್ಬರು, ರಾಜಕೀಯ ರಂಗದ ಅನಭಿಷಿಕ್ತ ಪ್ರಭುಗಳು, ಇನ್ನೊಬ್ಬರು ಸಾಂಸ್ಕೃತಿಕ ರಂಗದ ಅನಭಿಷಿಕ್ತ ಪ್ರಭುಗಳು. ಕಾಂಗ್ರೆಸ್ ಸಂಸ್ಥೆ ಬೆಳೆಯುವುದಕ್ಕೆ ಸದಾಶಿವರಾಯರು, ಕನ್ನಡ ಉಳಿಯುವುದಕ್ಕೆ ವೆಂಕಟರಾಯರು ಮಾಡಿದ ತ್ಯಾಗ ಸ್ವರ್ಣಾಕ್ಷರಗಳಲ್ಲಿ ಉಲ್ಲಖಿತವಾಗಬೇಕು.

ಉಡುಪಿಯಲ್ಲಿ ರಾಜಗೋಪಾಲಕೃಷ್ಣರಾಯರು ಬಂದು

ಬಳಗವನ್ನೇ ಕಟ್ಟಿದರು. ಅವರು ನಡೆಸಿದ 'ಕೃಷ್ಣಸೂಕ್ತಿ' ಆ ತಲೆಮಾರಿನ ಕನ್ನಡ ಸಂಸ್ಕೃತಿಯ ಪ್ರತೀಕವಾಯಿತು.

ಕೊಡಗು

ಕನ್ನಡ, ಕನ್ನಡ ಪ್ರಾಂತ್ಯದ ಬಗ್ಗೆ, ಕೊಡಗಿನಲ್ಲಿ ಮೂರು ಅಭಿಪ್ರಾಯಗಳಿದ್ದವು. ಒಂದು ವರ್ಗ ಕೊಡಗು ಇದ್ದಂತೆಯೇ ಪುಟ್ಟ ಪ್ರಾಂತ್ಯವಾಗಿರಬೇಕು ಎಂದು ವಾದಿಸುತ್ತಿದ್ದವರು; ಇನ್ನೊಂದು ವರ್ಗ ಕೊಡಗು ಮೈಸೂರಿಗೆ ಸೇರಿದರೆ ಅಡ್ಡಿಯಿಲ್ಲ, ಆದರೆ ಅಖಂಡ ಕರ್ನಾಟಕಕ್ಕೆ ಸೇರಕೂಡದು ಎನ್ನುತ್ತಿದ್ದವರು; ಮೂರನೆಯ ವರ್ಗ ಕೊಡಗು, ಮೈಸೂರು, ಉತ್ತರ ದಕ್ಷಿಣ ಕನ್ನಡ ಜಿಲ್ಲೆಗಳು, ಉತ್ತರ ಕರ್ನಾಟಕ ಎಲ್ಲವೂ ಕೂಡಿದ ಕರ್ನಾಟಕ ಪ್ರಾಂತ್ಯ ನಿರ್ಮಾಣವಾಗಬೇಕೆನ್ನುತ್ತಿದ್ದವರು. ಈ ಮೂರನೆಯ ವರ್ಗಕ್ಕೆ ಸೇರಿ ಅಖಂಡ ಕರ್ನಾಟಕ ಸ್ಥಾಪನೆಯನ್ನು ಸಾಧಿಸಿದವರು ಸಿ. ಎಸ್. ವೆಂಕಪ್ಪಯ್ಯನವರು, ಪೂಣಚ್ಚ, ಐ. ಸಿ. ಸುಬ್ಬಯ್ಯ.

ಇವರೆಲ್ಲರ ದೀರ್ಘಕಾಲದ ಪ್ರಯತ್ನ, ಪರಿಶ್ರಮ, ಸಾಧನೆ, ತ್ಯಾಗ, ಆತ್ಮಾರ್ಪಣದಿಂದ ಲಭಿಸಿರುವ ಏಕೀಕೃತ ಕರ್ನಾಟಕ ಪ್ರಾಂತ್ಯವನ್ನು ಉಳಿಸಿಕೊಂಡು ಬೆಳಸಿಕೊಳ್ಳುವ ಜವಾಬ್ದಾರಿ ನಮ್ಮದು.

ಪ್ರಗತಿಪರ ನಾಯಕತ್ವದಲ್ಲಿ ಕನ್ನಡ ನಾಡು ಭಾರತದ ಕಣ್ಮಣಿಯಾಗಬಲ್ಲದು. ಜಾತ್ಯಾತೀತ, ವರ್ಗಾತೀತ ರಾಷ್ಟ್ರ ಕಟ್ಟುವ ನಮ್ಮ ಆಶಯವನ್ನು ಕಾರ್ಯೋನ್ಮುಖ ಮಾಡುವ ಸುಸಂಧಿ ಒದಗಿದೆ. ಕನ್ನಡಿಗರು ಎಚ್ಚತ್ತು ಶ್ರೀ ವಿದ್ಯಾರಣ್ಯರ ಕನಸು ನನಸಾಗುವಂತೆ ಮಾಡಬೇಕು.

ಬಳ್ಳಾರಿ ಜಿಲ್ಲೆಯಲ್ಲಿ ಕನ್ನಡ ಪ್ರಾಂತ್ಯ ನಿರ್ಮಾಣಕ್ಕಾಗಿ ಮೊದಲಿನಿಂದಲೂ ಶ್ರಮಿಸಿದವರಲ್ಲಿ ಶ್ರೀ ಬೆಲ್ಲೋಣಿ ಭೀಮರಾಯರು ಮುಖ್ಯರಾಗಿದ್ದಾರೆ. ತೆಲುಗಿನ ಪ್ರಚಂಡ ಆಘಾತವನ್ನು ರಾಯರು ಎದುರಿಸಿ ನಿಂತುದಲ್ಲದೆ ಕನ್ನಡಸಾಹಿತ್ಯ ಸಾಂಸ್ಕೃತಿಕ ಸಂವರ್ಧನಕ್ಕೆ ಅಪಾರ ಸಹಾಯ ಮಾಡಿದ್ದಾರೆ.

ಮೈಸೂರಿನಲ್ಲಿ ಕನ್ನಡ ಪ್ರಾಣರಾಗಿದ್ದ ರಾವ್‌ಬಹದ್ದೂರ್ ಎಂ. ಶಾಮರಾಯರವರನ್ನು ನಾವು ಮರೆಯುವಂತಿಲ್ಲ. ಇವರು ಶಿಕ್ಷಣ ಮುಖ್ಯಾಧಿಕಾರಿಗಳಾಗಿದ್ದ ಕಾಲದಲ್ಲಿಯೇ ಕನ್ನಡ ಮಾಧ್ಯಮದ ಬಗ್ಗೆ ಯೋಚಿಸಿ, ಅದರ ದಾರಿ ಹಸನುಗೊಳಿಸಿದರು. ಕೆಲಸದಿಂದ ನಿವೃತ್ತರಾದಮೇಲೆ ರಾಯರ ಜೀವನ ಕನ್ನಡ ಸಾಹಿತ್ಯ, ಸಂಸ್ಕೃತಿ, ಇತಿಹಾಸದ ವಿಕಾಸಕ್ಕೆ ಮೀಸಲಾಯಿತು. ಸ್ವಯಂ ವಿದ್ವಾಂಸರೂ, ವಿದ್ವತ್ಪಕ್ಷಪಾತಿಗಳೂ ಆದ ರಾಯರ ಮನೆ ಒಂದು ಸಾಹಿತ್ಯಾನುಭವಮಂಟಪವಾಯಿತು. ಅವರ ಉದಾರ ಪೋಷಣೆಯಿಂದಾಗಿ ಹಲವು ಕನ್ನಡ ವಿದ್ವಾಂಸರು ಬೆಳಕಿಗೆ ಬಂದರು.

ಹರಿದು ಹಂಚಿಹೋಗಿದ್ದ ಕನ್ನಡನಾಡು ಇಂದು ಒಟ್ಟುಗೂಡಿರುವುದಕ್ಕೆ ಧರ್ಮಸ್ಥಳದ ಪೂಜ್ಯ ಮಂಜಯ್ಯ ಹೆಗ್ಗಡೆಯವರ ತಪಸ್ಸು ಕಾರಣವೆಂದು ನಿಸ್ಸಂಶಯವಾಗಿ ಹೇಳಬಹುದು. ಧರ್ಮಸ್ಥಳ ಶ್ರೀಕ್ಷೇತ್ರದಲ್ಲಿ ಇವರ ಸತತವಾಗಿ ನಡೆಸಿದ ಜ್ಞಾನಯಜ್ಞದಲ್ಲಿ ಏಕೀಕರಣದ ಮಾತು ಬರಲೇಬೇಕು-ಆ ಬಗ್ಗೆ ಒಂದು ನಿರ್ಣಯವಾಗಲೇ ಬೇಕು, ಅದು ಕೇಂದ್ರ ಸರ್ಕಾರ ಮುಟ್ಟಲೇ ಬೇಕು. ಏಕೀಕರಣ ಚಳುವಳಿಗೆ ಶ್ರೀಮಂಜಯ್ಯನವರ ಪ್ರತ್ಯಕ್ಷ, ಪರೋಕ್ಷ ಸೇವೆ, ಸಹಾಯ ವರ್ಣನಾತೀತ.

'ಕೌನ್ಸಿಲ್ ಆಫ್ ಸ್ಟೇಟ್'ನಲ್ಲಿ ಮೊಟ್ಟಮೊದಲಿಗೆ

ಕರ್ನಾಟಕ ಏಕೀಕರಣದ ಪ್ರಸ್ತಾಪ ಮಾಡಿ, ಕನ್ನಡಿಗರ ದುರಂತ ಸ್ಥಿತಿಯನ್ನು ಆಳರಸರಿಗೆ ಮನವರಿಕೆ ಮಾಡಿಕೊಟ್ಟವರು ಶ್ರೀ ಜಿನರಾಜ ಹೆಗ್ಗಡೆ. ಸುಮಾರು ಎರಡು ದಶಕಕಾಲ ರಾಜಕೀಯ ದಲ್ಲಿದ್ದ ಜಿನರಾಜರು ಕನ್ನಡ ಪ್ರಾಂತ್ಯ ನಿರ್ಮಾಣಕ್ಕೆ ಏಕನಿಷ್ಠೆ ಯಿಂದ ದುಡಿದು, ತಮ್ಮ ರಾಜಕೀಯ ಸ್ಥಾನವನ್ನು ಕಳೆದು ಕೊಂಡರು.

ಕನ್ನಡ ಪ್ರಾಂತ್ಯ ನಿರ್ಮಾಣಕ್ಕೆ ಪೋಷಕವಾದ ಮತ್ತೊಂದು ಪ್ರಸಂಗವನ್ನು ಇಲ್ಲಿ ಪ್ರಸ್ಥಾಪಿಸುವುದು ಅನುಚಿತ ವಾಗಲಾರದು. ೧೯೨೪ರಲ್ಲಿ ಬೆಳಗಾವಿಯಲ್ಲಿ ಕಾಂಗ್ರೆಸ್ಸಿನ ಮಹಾಧಿವೇಶನ ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ನಡೆ ಯಿತು. ಆ ಕಾಲಕ್ಕೆ ಬರುವ ಎಲ್ಲ ಕಾಂಗ್ರೆಸ್ ಮಹಾನಾಯಕ ರಿಗೂ ಕನ್ನಡ ಸಂಗೀತದ ಪರಿಚಯ ಮಾಡಿಸಬೇಕೆಂಬ ಇಚ್ಛೆ ಶ್ರೀಗಳಾದ ಮುದವೀಡು ಕೃಷ್ಣರಾಯರು ಮತ್ತು ಡಾ॥ ಸವ ಣೂರ ಹನುಮಂತರಾಯರ ಮನಸ್ಸಿನಲ್ಲಿ ಹುಟ್ಟಿತು. ಈ ಹಿರಿ ರಿಬ್ಬರೂ ಮೈಸೂರಿಗೆ ಬಂದು ವಿದ್ವನ್ಮಣಿಗಳನ್ನು ಕಂಡು ಬೆಳ ಗಾಂವಿಗೆ ಆಹ್ವಾನಿಸಿದರು. ವೀಣೆ ಶೇಷಣ್ಣನವರು, ವೀಣೆ ಸುಬ್ಬಣ್ಣನವರು, ವೀಣೆ ವೆಂಕಟಗಿರಿಯಪ್ಪನವರು, ಬಿಡಾರದ ಕೃಷ್ಣಪ್ಪನವರು, ಚಿಕ್ಕರಾಮರಾಯರು, ದೇವೇಂದ್ರಪ್ಪನವರು, ಸೋಸಲೆ ರಾಮದಾಸರು, ಸ್ವರಮೂರ್ತಿ ವಿ. ಎನ್. ರಾಯರು, ಶಿವರುದ್ರಪ್ಪನವರು ಬೆಳಗಾಂವಿಗೆ ಹೋಗಿ 'ಸಂಗೀತ ಸಮ್ಮೇಳನ' ದಲ್ಲಿ ಭಾಗವಹಿಸಿ ಕನ್ನಡಿಗರ ಕಲಾಮಹತಿಯ ಪರಿಚಯ ಮಾಡಿಕೊಟ್ಟರು. ಗಾಂಧೀಜಿ, ಸರೋಜಿನಿದೇವಿ, ಸಿ. ಆರ್. ದಾಸ್, ಮೋತಿಲಾಲ್ ನೆಹ್ರೂ, ಸೇನಗುಪ್ತ, ಮೊದಲಾದ ನಾಯಕಶ್ರೇಷ್ಠರು ಶೇಷಣ್ಣನವರ ವೀಣಾವಾದನ ಕೇಳಿ ಆನಂದಿ

ಸಿದರು. ಕನ್ನಡ ಜನ ಸುಸಂಸ್ಕೃತರು, ಉತ್ತಮ ಕಲಾವಿದರು, ರಸಿಕರು ಎಂಬ ಭಾವನೆ ಹಿರಿಯ ನಾಯಕರ ಮನಸ್ಸಿನಲ್ಲಿ ಬೆಳೆಯಲು ಈ ಕಲಾವಿದರು ಕಾರಣರಾಗಿದ್ದಾರೆ. ತಮ್ಮ ಮುಕ್ತಾಯ ಭಾಷಣದಲ್ಲಿ ಗಾಂಧೀಜಿ 'ಕನ್ನಡನಾಡು ಒಂದಾಗಬೇಕೆಂಬ ಕನ್ನಡಿಗರ ಬಯಕೆ ನ್ಯಾಯವಾದುದಾಗಿದೆ. ಅದನ್ನು ಪ್ರತಿಭಟಿಸಲು ಯಾರಿಗೂ ಸಾಧ್ಯವಿಲ್ಲ' ಎಂದು ಹೇಳಲು ಈ ಕಲಾವಿದರ ಹಿರಿಮೆಯೂ ಪರ್ಯಾಯವಾಗಿ ಕಾರಣವಾಯಿತು.

ಹೈದರಾಬಾದು

ಹೈದರಾಬಾದಿನ ಮೂರು ಪೂರ್ಣ ಜಿಲ್ಲೆಗಳು ಕನ್ನಡ ನಾಡಿನವು ಎಂಬುದು ಬಹಳ ಜನಕ್ಕೆ ತಿಳಿದಿರಲಿಲ್ಲ. ರಾಷ್ಟ್ರಕೂಟರು, ವಿಜಯನಗರದರಸರ ಕಾಲದಲ್ಲಿ ಇಡಿಯ ದಕ್ಷಿಣಾಪಥವೇ ಕನ್ನಡಿಗರದಾಗಿತ್ತು. ಅದು ಕಾಲಾನುಕ್ರಮದಲ್ಲಿ ಹ್ರಸ್ವವಾಗುತ್ತ ಬಂದು ಮೂರು ಜಿಲ್ಲೆಗಳಿಗೆ ಅಡಕವಾಯಿತು. ಆಂಧ್ರ, ಮಹಾರಾಷ್ಟ್ರ, ಕರ್ನಾಟಕದ ತ್ರಿವೇಣೀ ಸಂಗಮದಂತಿದ್ದ ಹೈದರಾಬಾದಿನಲ್ಲಿ ಒಂದೂ ಕನ್ನಡ ಶಾಲೆ ಇರಲಿಲ್ಲ. ಈ ಕೊರತೆ ನಿವಾರಿಸಲು ಮುಂದೆ ಬಂದವರು ಬಿ. ಜಿ. ಚಿಮ್ಮಲಿಗಿ. ಇಂದಿನ ಹೈದರಾಬಾದಿನಲ್ಲಿ ಕಾಣಬರುತ್ತಿರುವ ಕನ್ನಡ ಚೇತನಕ್ಕೆ ಉಸಿರು ತುಂಬಿದವರೇ ಚಿಮ್ಮಲಗಿಯವರು. ಮೂರು ದಶಕಗಳ ಕೆಳಗೆ ಇವರು ಸ್ಥಾಪಿಸಿದ 'ನೃಪತುಂಗ ವಿದ್ಯಾಲಯ' ಇಂದು ದೊಡ್ಡ ಸಂಸ್ಥೆಯಾಗಿ ಬೆಳೆದಿದೆ. ಹೈದರಾಬಾದಿನ ಸಮಸ್ತ ಕನ್ನಡ ಚಟುವಟಿಕೆಗೂ ಸೇವಾ ಸಹಾಯ, ಧನಸಹಾಯ, ಒದಗಿಸಿ ಕನ್ನಡಿಗರು ಕನ್ನಡ ಮರೆಯದಿರುವಂತೆ ಶ್ರಮಿಸಿದವರು ಡಾ॥ ಮೇಲ್ಕೋಟೆ ಮತ್ತು ಅವರ ಧರ್ಮಪತ್ನಿ ಸೌ॥ ವಿಮಲಾಬಾಯಿಯವರು. ಜನತೆಯಲ್ಲಿ ಕನ್ನಡ ಪ್ರಸಾರ

ಕೈಗೊಂಡು, ಲೇಖಕರ ಬಳಗವೊಂದನ್ನು ಕಟ್ಟಲು ರಾ. ಭಿ. ಮನಸಬ್ದಾರ ಮತ್ತು ಜಿ. ಕೆ. ಪ್ರಾಣೇಶಾಚಾರ್ಯ ಅಪಾರವಾಗಿ ಶ್ರಮಿಸಿದ್ದಾರೆ.

ರಾಯಚೂರಿನಲ್ಲಿ ಕನ್ನಡ ಸ್ಥಿರವಾಗಿ ನಿಲ್ಲಲು ಅಸ್ತಿಭಾರ ಹಾಕಿದವರು ಪಂಡಿತ ತಾರಾನಾಥರವರು. ಅವರು ಸ್ಥಾಪಿಸಿದ 'ಹಮ್‌ದರ್ದ್ ಪ್ರೌಢ ಪಾಠಶಾಲೆ' ಕನ್ನಡ ಪ್ರಗತಿಗೆ ಬಲವಾದ ಬುನಾದಿ ಹಾಕಿತು. ಅವರ ಮಿತ್ರರಾದ ಪಿ. ಕಿಶನ್‌ರಾಯರೂ ಶಿಷ್ಯರಾದ ಮಾಣಿಕರಾಯರೂ ಈ ಶಾಲೆಯನ್ನು ದೊಡ್ಡ ಸಂಸ್ಥೆಯನ್ನಾಗಿ ಬೆಳಸಿದರು.

ಹೈದರಾಬಾದ್, ರಾಯಚೂರು, ಗುಲ್ಬರ್ಗ ಮೊದಲಾದ ದೊಡ್ಡ ಪಟ್ಟಣಗಳಲ್ಲಿಯೇ ಕನ್ನಡದ ಸ್ಥಿತಿ ಶೋಚನೀಯವಾಗಿದ್ದಾಗ ಬೀದರ್ ಜಿಲ್ಲೆಯನ್ನು ಕೇಳುವವರು ಯಾರು? ಈಗ್ಗೆ ಎಂಟು ಹತ್ತು ವರ್ಷಗಳ ಕೆಳಗೆ ಬಸವ ಕಲ್ಯಾಣ, ಅದರ ಸಮೀಪದಲ್ಲಿರುವ ಉದ್ಗೀರ್, ಲಾತೂರ್ ನಗರಗಳಲ್ಲಿ ಕನ್ನರ ಮಾತನಾಡಿದರೆ ಕನ್ನಡಿಗರಿಗೇ ಅರ್ಥವಾಗುತ್ತಿರಲಿಲ್ಲ. ಈ ದುರಂತ ಸ್ಥಿತಿ ಹೋಗಲಾಡಿಸಲು ವಕೀಲ ಪ್ರಭುರಾಯರು ಮಾಡಿರುವ ಸೇವೆ ಚಿರಸ್ಮರಣೀಯವಾದುದು. ಪ್ರಭು ರಾಯರ ಪ್ರಯತ್ನದಿಂದ ಉದ್ಗೀರ್ ಕನ್ನಡ ಕೋಟೆಯಾಗಿ ಸುತ್ತಮುತ್ತಲಿನ ಪ್ರದೇಶಗಳ ಮೇಲೆ ತನ್ನ ಪ್ರಭಾವ ಬೀರತೊಡಗಿತು. ಬೀದರ್ ಜಿಲ್ಲೆ ಕನ್ನಡಿಗರ ಕೈಬಿಟ್ಟು ಹೋಗುವ ಸಮಯದಲ್ಲಿ ತಮ್ಮ ಸರ್ವಸ್ವವನ್ನೂ ಬಲಿದಾನವಾಗರ್ಪಿಸಿ, ಆ ಜಿಲ್ಲೆಯನ್ನು ಕನ್ನಡ ಪ್ರಾಂತ್ಯಕ್ಕೆ ಉಳಿಸಿ ಕೊಟ್ಟ ಕೀರ್ತಿ ಕರ್ಮಯೋಗಿ ಪ್ರಭುರಾಯರಿಗೆ ಸಲ್ಲಬೇಕು.

ರಬಕವಿ

ಉತ್ತರ ಕರ್ನಾಟಕದ ಮೂಲೆಯಲ್ಲಿರುವ ಈ ತಾಲ್ಲೂಕು ಬೆಳಗಾಂವಿ ಜಿಲ್ಲೆಯ ಹೆಬ್ಬಾಗಿಲಿನಂತಿದೆ. ಏನಕೇನ ಪ್ರಕಾರೇಣ ಬೆಳಗಾಂವಿ ಜಿಲ್ಲೆಯನ್ನು ಕಬಳಿಸಬೇಕೆಂದು ಮಹಾರಾಷ್ಟ್ರದವರು ಮಾಡಿದ ಪ್ರಯತ್ನವನ್ನು ತಡೆಗಟ್ಟಿದವರು ರಬಕವಿಯ ಕನ್ನಡ ಬಂಧುಗಳು. ಚಿಕ್ಕೋಡಿ ರಾಮಣ್ಣಪ್ಪನವರ ಸ್ಫೂರ್ತಿ, ಧನಸಹಾಯ, ಬಾಪೂರೇ, ಅಂಗಡಿ, ಗುಣಕಿ, ಸಾಬೋಜಿಯವರ ನಿರಂತರ ಪರಿಶ್ರಮದಿಂದಾಗಿ ಮಹಾಲಿಂಗಪುರ, ತೇರದಾಳ, ಜಮುಖಂಡಿ, ಮುಧೋಳಗಳಲ್ಲಿ ಕನ್ನಡ ಉಳಿಯಿತು. ಜಮಖಂಡಿಯಲ್ಲಿ ಕನ್ನಡಕ್ಕಾಗಿ ಸತತ ಹೋರಾಟ ನಡಸಿ, ಕನ್ನಡದ ಸ್ಥಾನಮಾನಗಳನ್ನು ಕಾದವರು ಬಸಪ್ಪ ದಾನಪ್ಪ ಜತ್ತಿಯವರು.

ಮುಂಬಯಿ

ಈಗ್ಗೆ ಸುಮಾರು ಮೂರು ದಶಕಗಳ ಹಿಂದೆ ಮುಂಬಯಿಯಲ್ಲಿ ಕನ್ನಡ ಕೇಳುವವರೇ ಇರಲಿಲ್ಲ. ಇಂದು ಮುಂಬಯಿಯ ಪ್ರತಿಯೊಂದು ಕಾಲೇಜಿನಲ್ಲಿಯೂ 'ಕರ್ನಾಟಕ ಸಂಘ'ವಿದೆ. ಊರಿನಲ್ಲಿ ಸುಮಾರು ಅರವತ್ತು ಸಾಂಸ್ಕೃತಿಕ ಸಂಸ್ಥೆಗಳಿವೆ. ವೆಂಕಟೇಶ ಮೂರ್ತಿ, ಬಿ.ಎಸ್.ಸಿ. ಸ್ವಾಮಿ, ನಾರಾಯಣ ಸ್ವಾಮಿ ಇವರ ಪ್ರಯತ್ನದಿಂದ ಕನ್ನಡ ಹೈಸ್ಕೂಲ್ ಸ್ಥಾಪನೆಯಾಯಿತು. ಕನ್ನಡಿಗರಲ್ಲಿ ಜಾಗೃತಿಯುಂಟಾಗಲು ದಿವಾನ್ ಬಹದ್ದೂರ್ ರಾಮಸ್ವಾಮಿ, ಚಂದ್ರಶೇಖರ ಶರ್ಮ, ಬೆಟಗೇರಿ, ಕೃಷ್ಣ ಕುಮಾರ ಕಲ್ಲೂರ್ ಹಗಲಿರುಳು ದುಡಿದರು. ತಮ್ಮ ಅನಾದೃಶ ಸಂಘಶಕ್ತಿಯಿಂದ ಕನ್ನಡ ಸೈನ್ಯವನ್ನೇ ಕಟ್ಟಿ ಪ್ರತಿಯೊಂದು ಚಳುವಳಿಗೂ ಜೀವದುಸಿರು ತುಂಬಿದವರು ಮೊಗ

ವೀರ ಯುವಕರು. ಮುಂಬಯಿಯ ಪ್ರಧಾನ ದೈನಂದಿನ ಪತ್ರಿಕೆಗಳ ಸಂಪಾದಕೀಯ ಮಂಡಲಿಯಲ್ಲಿದ್ದ ಪ್ರಭು, ನಾರಾಯಣಾಚಾರ್, ಪಡುಬಿದ್ರಿ ಮೊದಲಾದವರು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಕನ್ನಡ ಸೇವೆ ಮಾಡಿದ್ದಲ್ಲದೆ ಕೆ. ಎಫ್ ನಾರಿಮನ್, ಸಯ್ಯದ್ ಅಬ್ದುಲ್ಲಾ ಬ್ರೆಲ್ವಿ, ಬಿ. ಜಿ. ಹಾರ್ನಿಮನ್ ಮೊದಲಾದ ಹಿರಿಯ ನಾಯಕರ ಸ್ನೇಹ, ಸಹಾನುಭೂತಿಯನ್ನು ಕನ್ನಡನಾಡಿಗೆ ಒದಗಿಸಿಕೊಟ್ಟರು.

ತಮ್ಮ ವೈದುಷ್ಯದಿಂದ ಕನ್ನಡದ ಕೀರ್ತಿಯನ್ನು ವಿಸ್ತರಿಸಿದ ಕಲಾವಿದರನ್ನೂ ನಾವೀಗ ಸ್ಮರಿಸಿಕೊಳ್ಳಬೇಕು. ಸಂಗೀತ ರತ್ನ ಮಲ್ಲಿಕಾರ್ಜುನ ಮನ್‌ಸೂರ್ ಅವರು ತಮ್ಮ ಪಾಂಡಿತ್ಯ ಬಲದಿಂದ ಕನ್ನಡನಾಡಿಗೆ ಕೀರ್ತಿ ತಂದು, ಇತರ ಪ್ರಾಂತ್ಯಗಳ ಘನ ಸಂಗೀತ ವಿದ್ವಾಂಸರು ಕನ್ನಡನಾಡನ್ನು ಗೌರವಿಸುವಂತೆ ಮಾಡಿದರು. ಪ್ರತ್ಯಕ್ಷವಾಗಿ ಕನ್ನಡ ಪ್ರಸಾರ ಕೈಗೊಂಡು, ಮುಂಬಯಿ, ಡೆಲ್ಲಿ, ಕಲ್ಕತ್ತೆ, ಲಕ್ನೌ ನಗರಗಳಲ್ಲಿ ಹಲವು ಕಛೇರಿಗಳನ್ನು ಮಾಡಿ ದೊರಕಿಸಿದ ಹಣವನ್ನು ಕನ್ನಡ ಸಂಸ್ಥೆಗಳ ಬೆಳವಣಿಗೆಗೆ ವಿನಿಯೋಗಿಸಿದವರು, ಸಂಗೀತವಿದುಷಿ ಹಾನಗಲ್ ಗಂಗೂಬಾಯಿಯವರು. ಇವರ ಗುರುಗಳಾದ ಸವಾಯ್ ಗಂಧರ್ವರು ಮಹಾರಾಷ್ಟ್ರದ ಔದ್ಧತ್ಯವನ್ನು ಮೆಟ್ಟಿ ನಿಂತು ಪುಣೆ ಪಟ್ಟಣದಲ್ಲಿಯೇ ಕನ್ನಡದ ಕೀರ್ತಿಯನ್ನು ವಿಸ್ತರಿಸಿದರು. ಚಿತ್ರಕಲಾ ಕೋವಿದರಾದ ಮಿಣಜಿಗಿ ಮಡಿವಾಳಪ್ಪನವರು ತಮ್ಮ ಅಸಾಮಾನ್ಯ ಕೃತಿಗಳಿಂದ ಇಡಿಯ ಭಾರತದ ಗೌರವ ದೊರಕಿಸಿದರು. ಇವರ 'ರಾಗ–ರಾಗಿಣಿ' ಚಿತ್ರಮಾಲೆ ವಿಲಾಯಿತಿಯ ಪ್ರಸಿದ್ಧ ಕಲಾವಿಮರ್ಶಕರ ಮೆಚ್ಚುಗೆ ಗಳಿಸಿತು.

ಕಲ್ಕತ್ತೆ

೧೯೩೪ರ ಸುಮಾರಿಗೆ 'ಶಾಂತಿನಿಕೇತನ'ಕ್ಕೆ ವ್ಯಾಸಂಗಕ್ಕೆ ಹೋದ ಕೆಲವು ಧಾರವಾಡದ ಗೆಳೆಯರು ಗುರುದೇವ ರವೀಂದ್ರ, ನಂದಾಲಾಲ ಬಸು, ವಿಧುಶೇಖರ ಭಟ್ಟಾಚಾರ್ಯ, ಕ್ಷಿತಿಮೋಹನ ಸೇನ್ ಮೊದಲಾದ ವಿದ್ವನ್ಮಣಿಗಳಿಗೆ ಕನ್ನಡ ನಾಡಿನ ಹಾಗೂ ಸಾಹಿತ್ಯದ ಹಿರಿಮೆಯ ಪರಿಚಯ ಮಾಡಿಕೊಟ್ಟಿದ್ದರು. ಶಾಂತಿನಿಕೇತನದ ಸಂಗೀತ ಶಾಲೆಯ ಪ್ರಾಧ್ಯಾಪಕರಾಗಿದ್ದ ಭೀಮರಾವ್ ಶಾಸ್ತ್ರಿ ಕರ್ನಾಟಕ ಸಂಗೀತದ ಪರಿಚಯ ಮಾಡಿಕೊಟ್ಟರು. ಇಂದು ಇಡಿಯ ಬಂಗಾಳವನ್ನು ವ್ಯಾಪಿಸಿರುವ 'ರವೀಂದ್ರ ಸಂಗೀತ'ದ ಜನಕರೇ ಭೀಮರಾವ್ ಶಾಸ್ತ್ರಿ, ರವೀಂದ್ರರ ಭಾವ ಗೀತೆಗಳನ್ನು ಸಂಗೀತಕ್ಕೆ ಅಳವಡಿಸುವ ಕಾರ್ಯ ಶಾಸ್ತ್ರಿಗಳು ನಿರ್ವಹಿಸಿದರು.

ಕಲ್ಕತ್ತಾ ನಗರದಲ್ಲಿ ಕನ್ನಡಿಗರ ಹಿತ ಸಂರಕ್ಷಣೆ ಮಾಡಿದವರು ಕಲ್ಕತ್ತಾ ಕಾರ್ಪೊರೇಷನ್ನಿನ ಮುಖ್ಯಾಧಿಕಾರಿಗಳಾಗಿದ್ದ ರಾಮಯ್ಯನವರು. ಇವರ ಮನೆ ಕಲ್ಕತ್ತೆಯಲ್ಲಿದ್ದ ಕನ್ನಡಿಗರ, ಕಲ್ಕತ್ತೆಗೆ ಕಾರ್ಯನಿಮಿತ್ತ ಹೋಗುತ್ತಿದ್ದ ಕನ್ನಡಿಗರ ತೌರುಮನೆಯಾಗಿತ್ತು.

ಸಾರ್ವಜನಿಕ ರಂಗದಲ್ಲಿ ವಿಶೇಷ ದುಡಿದು ಕನ್ನಡಕ್ಕಾಗಿ ತಮ್ಮ ಸಮಸ್ತವನ್ನೂ ತ್ಯಾಗಮಾಡಿದವರು ಎ. ನಾರಾಯಣ ಸ್ವಾಮಿ ಅಯ್ಯರ್ (ಸ್ವಾಮಿ ಶಂಕರಾನಂದ). ಕನ್ನಡದ ಬಗ್ಗೆ ಬಂಗಾಳಿ ಸಾಹಿತಿಗಳಲ್ಲಿ ವಿಶ್ವಾಸ ಹುಟ್ಟಿಸುವುದಕ್ಕೆ ನಾರಾಯಣ ಸ್ವಾಮಿ ಅಯ್ಯರ್‌ರವರು ಅಪಾರವಾಗಿ ಶ್ರಮಿಸಿದರು.

ಮದರಾಸ್

ಮದರಾಸಿನ ಕನ್ನಡ ಚಟುವಟಿಕೆಗಳ ಪೋಷಕರಾಗಿದ್ದು,

ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಕನ್ನಡದ ಮುನ್ನಡೆಗೆ ನೆರವು ನೀಡಿದವರು ಡಾಕ್ಟರ್ ಯು. ರಾಮರಾಯರು ಮತ್ತು ಬೆನಗಲ್ ರಾಮರಾಯರು. ಕೌನ್ಸಿಲ್ ಆಫ್ ಸ್ಟೇಟ್ ಸದಸ್ಯರಾಗಿದ್ದಾಗ ಕನ್ನಡ ಪ್ರಾಂತ್ಯದ ಪ್ರಸ್ತಾಪಮಾಡಿ, ಆಗಿನ ಆಳರಸರ ಗಮನಕ್ಕೆ ಕನ್ನಡನಾಡಿನ ಶೋಚನೀಯ ಪರಿಸ್ಥಿತಿಯನ್ನು ತಂದರು. ಬೆನಗಲ್ ರಾಮರಾಯರಿಗಂತೂ 'ಕನ್ನಡವನ್ನುಳಿದು, ಅನ್ಯ ಜೀವನ'ವಿರಲಿಲ್ಲ. ಏಕೀಕರಣ ಮಹಾಮಂತ್ರವೇ ಅವರ ಗಾಯತ್ರಿಯಾಗಿತ್ತು.

ಬಾಗಿಲುಕೋಟೆ

ಕರ್ನಾಟಕ ಕಲ್ಪನೆ ರೂಪು ತಳೆಯುತ್ತಿದ್ದ ಆರಂಭದೆಸೆಯಲ್ಲಿ, ಏಕೀಕರಣ ಸಾಧಿಸುವುದರ ಸಲುವಾಗಿಯೆ 'ಕನ್ನಡಿಗ' ವಾರಪತ್ರಿಕೆ ಸ್ಥಾಪಿಸಿ ಅಪಾರ ಕಷ್ಟನಷ್ಟ ಅನುಭವಿಸಿದವರು ಮಂಗಳವೇಢೆ ಶ್ರೀನಿವಾಸರಾಯರು. ಆ ಕಾಲದ ಉತ್ತರ ಕರ್ನಾಟಕದ ರಾಜಕೀಯದಲ್ಲಿ ಒಂದು ವೈಚಿತ್ರ್ಯವಿತ್ತು. ಉತ್ತರ ಕರ್ನಾಟಕದ ಸಾರ್ವಜನಿಕ ಕಾರ್ಯಕರ್ತರೆಲ್ಲಾ ಕಾಂಗ್ರೆಸ್ ಭಕ್ತರಾಗಿದ್ದರು. ಕಾಂಗ್ರೆಸ್ಸಿನ ಸರ್ವಾಧಿಕಾರಿಗಳಾಗಿದ್ದ ದೇಶಪಾಂಡೆ ಗಂಗಾಧರರಾಯರಿಗೆ ಮಹಾರಾಷ್ಟ್ರ ಮೋಹ; ಏಕೀಕರಣವೆಂದರೆ ಅವರು ಉರಿದು ಬೀಳುತ್ತಿದ್ದರು. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿದ್ದರೂ ಏಕೀಕರಣಕ್ಕಾಗಿ ಟೊಂಕಕಟ್ಟಿ ನಿಂತವರು ಮಂಗಳವೇಡೆ ಶ್ರೀನಿವಾಸರಾಯರು ಮತ್ತು ಜೋರಾಪುರ ಗುರುರಾಯರು.

ಕರ್ನಾಟಕ ಏಕೀಕರಣ ಇತಿಹಾಸ ರಚನೆಯಾಗುವಾಗ ದೇಶಪಾಂಡೆ ಗಂಗಾಧರರಾಯರ ಮತ್ತು ಲಠ್ಠೆಯವರ ಪಾತ್ರವನ್ನು ಕೂಲಂಕಷವಾಗಿ ವಿಮರ್ಶಿಸುವುದು ಅಗತ್ಯ.

ಈ ನಾಡನ್ನು ಕಟ್ಟುವುದಕ್ಕೆ, ಬೆಳಸುವುದಕ್ಕೆ ತ್ರಿಕರಣ ಪೂರ್ವಕವಾಗಿ ಶ್ರಮಿಸಿದ ಅನೇಕ ಹಿರಿಯರು ಇಂದು ಜೀವಂತ ರಾಗಿಲ್ಲ. ಆದರಿಂದು ದಿವ್ಯಪ್ರಭೆಯಿಂದ ಬೆಳಗುತ್ತಿರುವ ಬೆಳಕು ಅವರೆರೆದ ತೈಲದಿಂದ ಬದುಕಿತು ಎಂಬುದನ್ನು ನಾವು ಮರೆಯ ದಿರಬೇಕು.

ಆಧುನಿಕ ಕನ್ನಡ ಸಾಹಿತ್ಯ

೧ ಆಧುನಿಕ

ಕನ್ನಡ ಸಾಹಿತ್ಯಕ್ಕೆ 'ಆಧುನಿಕ' ವಿಶೇಷಣವನ್ನು ಯಾವ ಕಾಲದಿಂದ ಉಪಯೋಗಿಸಬೇಕೆಂಬುದು ಚರ್ಚಾಸ್ಪದವಾದ ವಿಷಯ. ಪಂಪ, ಹರಿಹರ, ಕುಮಾರವ್ಯಾಸರ ಕಾಲಗಳಲ್ಲಿ ಅವರ ಕೃತಿಗಳು ಆಧುನಿಕವೇ ಆಗಿದ್ದವು. ಸಮಕಾಲೀನ ಪ್ರತಿಭಟನೆಯನ್ನು, ಉಪೇಕ್ಷೆಯನ್ನು ಎದುರಿಸುತ್ತಾ ಪ್ರತಿಯೊಬ್ಬ ಕವಿಯೂ 'ಇದು ವಿನೂತನ ಕವಿತೆಯೆಂದು ಜರಿಯಬೇಡಿ' ಎಂದು ಹೇಳಿಕೊಂಡಿದ್ದಾನೆ.

ನಾವೀಗ 'ಆಧುನಿಕ' ಶಬ್ದವನ್ನು ವಿಶೇಷಾರ್ಥದಲ್ಲಿ ಬಳಸುತ್ತಿದ್ದೇವೆ. ಪಂಪ, ಹರಿಹರ, ಕುಮಾರವ್ಯಾಸರು 'ಸಾಮ್ರಾಜ್ಯ ಯುಗ'ದಲ್ಲಿ ಬೆಳೆದವರು. ಇಂದು ಒದಗಿರುವ ಸಮಸ್ಯೆಗಳು ಅಂದು ಒದಗಿರಲಿಲ್ಲ. ಕವಿ ತನ್ನ ಇಷ್ಟದೇವತೆಯನ್ನೊ ದೊರೆಯನ್ನೋ ಮೆಚ್ಚಿಸಲು ಬರೆದರಾಯಿತು; ಇಡಿಯ ಜನಪದವನ್ನು ಅವನು ಲಕ್ಷಿಸಬೇಕಾದ ಅಗತ್ಯವಿರಲಿಲ್ಲ. ಹತ್ತೊಂಭತ್ತನೆಯ ಶತಮಾನದ ಅಂತ್ಯದವರೆಗಿನ ಕನ್ನಡ ಸಾಹಿತ್ಯದ ಮೇಲೆ ಪರಭಾಷೆ, ಸಾಹಿತ್ಯ ಸಂಸ್ಕೃತಿಯ ಪ್ರಭಾವ ಬಿದ್ದಿರಲಿಲ್ಲ. ಉತ್ತರಹಿಂದೂಸ್ಥಾನದ ಭಾಷೆಗಳು, ಪರ್ಶಿಯ, ಅರಾಬಿಕ್ ಭಾಷೆಗಳ ಪ್ರಭಾವಕ್ಕೆ ಒಳಗಾದ ಮೇಲೂ ಕನ್ನಡ ಹಾಗೂ ಇತರ ದ್ರಾವಿಡ ಭಾಷೆಗಳು ತಮ್ಮ ವ್ಯಕ್ತಿತ್ವವನ್ನು ನಿಶ್ಚಲವಾಗಿ ಉಳಿಸಿಕೊಂಡು ಬಂದವು.

ಹತ್ತೊಂಭತ್ತು ಶತಮಾನಗಳ ಕಾಲ ಕನ್ನಡ ಎದುರಿಸದಿದ್ದ ಸಮಸ್ಯೆಯನ್ನು ಈ ಶತಮಾನದ ಆದಿಯಲ್ಲಿ ಎದುರಿಸಬೇಕಾಗಿ

ಬಂತು. ಭಾರತದ ರಾಷ್ಟ್ರಜೀವನದಲ್ಲಿ ಆದ ಮಹಾಕ್ರಾಂತಿಯೇ ಇದರ ಕಾರಣವೆನ್ನಬಹುದು. ಒಂದು ಶತಮಾನಕ್ಕೂ ಮಿಕ್ಕು ಒಳಗೇ ಕವರುತ್ತಿದ್ದ ಭಾರತ ಸ್ವಾತಂತ್ರ್ಯಜ್ವಾಲೆ ೧೯೦೫ರಲ್ಲಿ ಸ್ಫೋಟನವಾಯಿತು. ಲಾರ್ಡ್ ಕರ್ಜನ್ ಸಾಹೇಬರ 'ವಂಗ ವಿಭಜನೆ'ಯ ನೀತಿಯಿಂದಾಗಿ ಇಡಿಯ ಭಾರತದ ರಾಷ್ಟ್ರಚೇತನ ಜಾಗೃತವಾಯಿತು. ಬಂಕಿಂಚಂದ್ರ ಚಟ್ಟೋಪಾಧ್ಯಾಯರ 'ಆನಂದಮಠ'ದಲ್ಲಿ ಸಮಾವೇಶಗೊಂಡಿದ್ದ 'ವಂದೇ ಮಾತರಂ' ಗೀತೆ ಭಾರತದ ರಾಷ್ಟ್ರಗೀತೆಯಾಯಿತು. ರಾಷ್ಟ್ರಚೇತನದ ವಾಣಿಯಾಗಿ ಬಾಳಾಚಾರ್ಯ ಸಕ್ಕರಿಯವರು (ಶಾಂತಕವಿ) **'ವಿದ್ಯಾರಣ್ಯ ಕಾವ್ಯ'** ಬರೆದು ನಾಡಿನಲ್ಲಿ ರಾಷ್ಟ್ರೀಯ ಭಾವನೆ ಬೆಳೆಯಲು ನೆರವಾದರು.

ರಾಷ್ಟ್ರೀಯ ಭಾವನೆಯಿಂದ ಪ್ರಚೋದಿತರಾಗಿದ್ದರೂ, ಕನ್ನಡದ ಸ್ವತಂತ್ರ ಸಾಹಿತ್ಯ ಬೆಳೆಗೆ ಅವಶ್ಯಕವಾಗಿದ್ದ ಆರಂಭದ ಕೃಷಿಮಾಡಿದವರಲ್ಲಿ ಕೆಂಪು ನಾರಾಯಣ (೧೮೩೩), ಮುದ್ದಣ, ಬಸವಪ್ಪಶಾಸ್ತ್ರಿ ಮತ್ತು ತುರಮುರಿ ಶೇಷಗಿರಿರಾಯ ಮುಖ್ಯರಾಗಿ ದ್ದಾರೆ. ಕೆಂಪುನಾರಾಯಣನ 'ಮುದ್ರಾಮಂಜೂಷ' ಗ್ರಂಥ ಕನ್ನಡದ ಗದ್ಯಶೈಲಿಯ ಬೆಳವಣಿಗೆಗೆ ವಿಶೇಷ ಇಂಬ ನ್ನಿತ್ತಿತ್ತು. ಮುದ್ದಣ, ತನ್ನ 'ರಾಮಾಶ್ವಮೇಧ' ಕಾವ್ಯದಲ್ಲಿ 'ಗದ್ಯಂ ಹೃದ್ಯಂ, ಪದ್ಯಂ ವಧ್ಯಂ' ಎಂದು ಸಾರಿ ಗದ್ಯಕ್ಕೆ ಬಲ ವಾದ ಬುನಾದಿಯನ್ನೇ ಕಟ್ಟಿದ. ಬಸವಪ್ಪಶಾಸ್ತ್ರಿ ಮತ್ತು ತುರ ಮುರಿ ಶೇಷಗಿರಿರಾಯರು ಕಾಳಿದಾಸನ 'ಶಾಕುಂತಲ' ನಾಟಕ ವನ್ನು ಕನ್ನಡಕ್ಕೆ ಅನುವಾದ ಮಾಡಿ, ಅದುವರೆವಿಗೆ ಕನ್ನಡಿಗರ ಅನಾದರಕ್ಕೆ ಪಾತ್ರವಾಗಿದ್ದ ನಾಟಕ ಸಾಹಿತ್ಯದ ಬೆಳವಣಿಗೆಗೆ ಅಸ್ತಿಭಾರ ಹಾಕಿದರು.

ಕನ್ನಡನಾಡಿನಲ್ಲಿ ಅಧುನಿಕ ಸಾಹಿತ್ಯ ಯುಗ ಆರಂಭವಾಗುವುದಕ್ಕೆ ಮುನ್ನವೇ ಈ ನಾಲ್ವರು ಅದರ ಕೆಲವು ಲಕ್ಷಣಗಳನ್ನು ಅಸ್ಪಷ್ಟವಾಗಿ ಗುರುತಿಸಿದ್ದರೆಂಬುದು ಗಮನಾರ್ಹವಾದ ವಿಷಯ.

೨ ನವೋದಯ ಕಾಲ (೧೯೧೫–೧೯೩೫)

ಸಾವಿರದ ಒಂಭೈನೂರ ಹದಿನೈದರ ತರುವಾಯ ಬಂದ ಸಾಹಿತ್ಯ ಕೆಲವು ವಿಶಿಷ್ಟ ಲಕ್ಷಣಗಳನ್ನು ಪಡೆದುಕೊಂಡಿತು :

(೧) ಭಾರತ ಸಂಸ್ಕೃತಿಗೆ ಭಿನ್ನವಾಗಿರುವ ವಿಶಿಷ್ಟ ಸಂಸ್ಕೃತಿ ಕನ್ನಡ ನಾಡಿನಲ್ಲಿದೆಯೆಂಬ ಭಾವನೆ; ಭಾರತ ಸಂಸ್ಕೃತಿ ರೂಪುಗೊಳ್ಳಲು ಕನ್ನಡ ನಾಡು ಗಣನೀಯವಾದ ಕಾಣಿಕೆಯನ್ನಿರ್ಸಿದೆ ಎಂಬ ತಿಳುವಳಿಕೆ.

(೨) ಇದುವರೆವಿಗೆ ಕನ್ನಡ ಸಾಹಿತ್ಯದ ಮೇಲೆ ಕಾಣದಿದ್ದ ಐರೋಪ್ಯ ಸಾಹಿತ್ಯ, ಸಂಸ್ಕೃತಿ, ವಿಚಾರಸರಣಿಯ ಪ್ರಭಾವ ಬೀಳುತ್ತ ಬಂದುದು.

(೩) ಪದ್ಯ ಸಾಹಿತ್ಯಕ್ಕಿದ್ದ ಪ್ರಾಧಾನ್ಯ ಕಡಿಮೆಯಾಗಿ ಗದ್ಯಸಾಹಿತ್ಯದ ಬೆಳೆ ಹೆಚ್ಚಿದುದು.

(೪) ಇಂಗ್ಲಿಷಿನಿಂದಲೇ ಸ್ಫೂರ್ತಿ ಪಡೆದರೂ ಸ್ವತಂತ್ರ ನಾಟಕ ಸಾಹಿತ್ಯ ಬೆಳೆದುದು.

(೫) ವಿಚಾರ ಸಾಹಿತ್ಯ, ವೈಜ್ಞಾನಿಕ ಸಾಹಿತ್ಯದತ್ತ ಜನರ ಲಕ್ಷ್ಯ ಹೋದುದು.

೩. ಕರ್ನಾಟಕ ಸಂಸ್ಕೃತಿ

(೧) ದೀರ್ಘಕಾಲದ ದಾಸ್ಯಕ್ಕೆ ಸಿಕ್ಕಿದ್ದ ಕನ್ನಡಿಗರು ಸ್ವಸ್ವರೂಪಜ್ಞಾನಶೂನ್ಯರಾಗಿದ್ದರು. ಇದೇ ತೆರನ ಪರಿಸ್ಥಿತಿಗೆ ಸಿಕ್ಕಿದ ಬಂಗಾಳವನ್ನು ಎಚ್ಚರಿಸಿದವರು ರಾಜಾ ರಾಮಮೋಹನ

ರಾಯ್, ವಿವೇಕಾನಂದ, ಅರವಿಂದರು ಮತ್ತು ಬಂಕಿಂಚಂದ್ರ ಚಟ್ಟೋಪಾಧ್ಯಾಯರು ; ಮಹಾರಾಷ್ಟ್ರವನ್ನು ಎಚ್ಚರಿಸಿದವರು ರಾನಡೆ, ಚಿಪ್ಲೂಣ್‌ಕರ್, ಆಗರ್‌ಕರ್ ಮತ್ತು ಬಾಲ ಗಂಗಾಧರ ತಿಲಕರು ; ತಮಿಳುನಾಡನ್ನು ಎಚ್ಚರಿಸಿದವರು ಎಸ್. ಶ್ರೀನಿವಾಸ ಅಯ್ಯಂಗಾರ್ಯರು, ಸುಬ್ರಹ್ಮಣ್ಯ ಭಾರತಿ; ಆಂಧ್ರ ದೇಶವನ್ನು ಎಚ್ಚರಿಸಿದವರು ಗುರುಜಾಡ ಅಪ್ಪಾರಾಯರು, ವೀರೇಶಲಿಂಗ ಪಂತಲು, ಗಿಡುಗು ರಾಮಮೂರ್ತಿ, ದುಗ್ಗಿರಾಲಾ ಗೋಪಾಲ ಕೃಷ್ಣಯ್ಯನವರು, ಕೊಂಡಾ ವೆಂಕಟಪ್ಪಯ್ಯನವರು; ಕನ್ನಡ ನಾಡನ್ನು ಎಚ್ಚರಿಸಿದವರು ಶಾಂತಕವಿ, ಕಡಪಾ ರಾಘವೇಂದ್ರ ರಾವ್, ಆಲೂರ ವೆಂಕಟರಾವ್, ರೊದ್ದ ಶ್ರೀನಿವಾಸರಾಯರು, ಡೆಪ್ಯುಟಿ ಚೆನ್ನಬಸಪ್ಪನವರು, ನ್ಯಾಯಮೂರ್ತಿ ಸೆಟ್ಲೂರ ಶ್ರೀನಿವಾಸಯ್ಯಂಗಾರ್ಯರು, ಎಂ. ವೆಂಕಟಕೃಷ್ಣಯ್ಯನವರು. ಇದೇ ಕಾಲದಲ್ಲಿ ಆಲೂರ ವೆಂಕಟರಾಯರು ತಮ್ಮ ಅಮೋಘ ಕೃತಿ **'ಕರ್ನಾಟಕ ಗತವೈಭವ'** (೧೯೧೭) ವನ್ನು ಬೆಳಕಿಗೆ ತಂದರು. ಇತಿಹಾಸ, ಸಾಮಾಜಿಕ ಜೀವನ, ಲಲಿತಕಲೆಗಳು, ಸಾಹಿತ್ಯ, ಧರ್ಮವಿಸ್ತಾರದಲ್ಲಿ ಕನ್ನಡನಾಡು ಸುಮಾರು ಎರಡು ಸಾವಿರ ವರ್ಷಗಳು ಸಾಧಿಸಿದ್ದುದನ್ನು ವೆಂಕಟರಾಯರು ಕ್ವಾತ್ರ ಗದ್ಯದಲ್ಲಿ ನಿರೂಪಿಸಿ ಕನ್ನಡಿಗರು ಕಣ್ದೆರೆಯುವಂತೆ ಮಾಡಿದರು. ಈ ಗ್ರಂಥ ಅಣುಪ್ರಮಾಣದಲ್ಲಿರುವ ಕನ್ನಡ ಸಂಸ್ಕೃತಿಯ ವಿಶ್ವ ಕೋಶದಂತಿದೆ. ವೆಂಕಟರಾಯರು ಮೂವತ್ತೊಂಭತ್ತು ವರ್ಷ ಗಳ ಕೆಳಗೆ ಕಂಡ ಕನಸು ಇಂದು ನನಸಾಗುತ್ತಿರುವುದಕ್ಕೆ ಈ ಗ್ರಂಥ ಬಹುಮಟ್ಟಿಗೆ ಕಾರಣವಾಯಿತೆಂದು ನಿಃಸಂಶಯವಾಗಿ ಹೇಳಬಹುದು.

ಕನ್ನಡಿಗರು ಸ್ವಾಭಿಮಾನ್ಯಶೂನ್ಯರಾಗಿ ಪರಭಾಷಾ

ಮೋಹಕ್ಕೆ ಪಕ್ಕಾಗಿದ್ದರು. ಪಂಪ, ರನ್ನ, ಹರಿಹರ, ರತ್ನಾಕರ ವರ್ಣಿ, ಕುಮಾರ ವ್ಯಾಸನ ನಾಡವರು ಇಂಗ್ಲಿಷ್, ಮರಾಟಿ ಭಾಷೆಗಳ ವ್ಯಾಮೋಹಕ್ಕೆ ಸಿಕ್ಕಿ ಕನ್ನಡವನ್ನು ಕಡೆಗಾಣಿಸಿದ್ದರು. ಕನ್ನಡ ಸಾಹಿತ್ಯ-ಸಂಸ್ಕೃತಿಯ ಪರಂಪರೆ ಯಾರಿಗೂ ಕಡಿಮೆ ಯಾದುದಲ್ಲವೆಂಬ ನಂಬಿಕೆ ಕನ್ನಡಿಗರಿಗೇ ಬರಬೇಕಾಗಿತ್ತು. ೧೯೨೪ರಲ್ಲಿ ಪ್ರಕಟವಾದ ಆರ್. ನರಸಿಂಹಾಚಾರ್ಯರ 'ಕರ್ನಾಟಕ ಕವಿಚರಿತ್ರೆ' (ಭಾಗ ೧) ಕನ್ನಡಿಗರಲ್ಲಿ ಆತ್ಮಾಭಿಮಾನ ಹುಟ್ಟಿಸುವುದಕ್ಕೆ ಬಹುಮಟ್ಟಿಗೆ ಸಹಾಯ ಮಾಡಿತು.

ಇಂಗ್ಲಿಷಿನ ಉತ್ತಮೋತ್ತಮ ಕೃತಿಗಳಿಗೆ ಸರಿದೊರೆಯಾಗಿ ನಿಲ್ಲಬಲ್ಲ ಕೃತಿಗಳನ್ನು ಕನ್ನಡದಲ್ಲಿಯೂ ರಚಿಸಬಹುದೆಂಬುದನ್ನು ಎಂ. ಎಸ್. ಪುಟ್ಟಣ್ಣನವರ **'ಮಾಡಿದ್ದುಣ್ಣೋ ಮಾರಾಯ'** (೧೯೧೫) ಕಾದಂಬರಿ ಸಿದ್ಧಮಾಡಿಕೊಟ್ಟಿತು. ಸಾಮಾನ್ಯಜನರ ಜೀವನವನ್ನು ಅವರ ಮನೆಯ ಮಾತಿನಲ್ಲೇ ನಿರೂಪಿಸುವ ಈ ಕಾದಂಬರಿ, ಕನ್ನಡದ ಪ್ರಥಮ ಸ್ವತಂತ್ರ ಕಾದಂಬರಿಯಾದುದಲ್ಲದೆ, ಜನಪದ ಭಾಷೆಯನ್ನು ಸಾಹಿತ್ಯಕ್ಕೆ ಅಳವಡಿಸಿಕೊಳ್ಳುವ ಮಾರ್ಗವನ್ನು ತೋರಿಸಿಕೊಟ್ಟಿತು.

ಹೆಚ್ಚು ಕಡಿಮೆ ಪುಟ್ಟಣ್ಣನವರ ಜಾಡಿನಲ್ಲೇ ನಡೆದ ಶ್ರೀನಿವಾಸರ **'ಕೆಲವು ಸಣ್ಣ ಕಥೆಗಳು'** (೧೯೨೦) ಮಧ್ಯಮ ವರ್ಗದ ಕನ್ನಡಿಗರ ಜೀವನದ ಸುಂದರ ಚಿತ್ರಗಳ ರನ್ನಗನ್ನಡಿಯಾಯಿತು. ಜನಸಾಮಾನ್ಯರ ತಿಳಿವಿಗೆ ಎಟಕುವಂಥ ಭಾಷೆಯನ್ನೇ ಶ್ರೀನಿವಾಸರು ಅಳವಡಿಸಿಕೊಂಡರೂ, ಅದಕ್ಕೊಂದು ಅಪೂರ್ವ ಶೋಭೆ, ಶಕ್ತಿ, ಬಿಗಿಯನ್ನು ತಂದುಕೊಟ್ಟರು. ಶ್ರೀನಿವಾಸರಿಗೆ ದೊರೆತಿದ್ದ ಇಂಗ್ಲಿಷ್ ಶಿಕ್ಷಣ ಅವರ ಪ್ರತಿಭೆಯ ವಿಕಸನಕ್ಕೆ ನೆರವಾಯಿತಾದರೂ, ಅವರ ಕೃತಿಗಳು ಕನ್ನಡದ

ಜಾಯಮಾನವನ್ನು ಎಳ್ಳಷ್ಟೂ ಉಪೇಕ್ಷಿಸಲಿಲ್ಲ.

೪. ಇಂಗ್ಲಿಷಿನ ಪ್ರಭಾವ

(೨) ಇಂಗ್ಲಿಷ್ ಭಾಷೆ ಭಾರತಕ್ಕೆ ಪರದಾಸ್ಯವನ್ನು ತಂದಿತ್ತು. ಅದೇ ಭಾಷೆಯಿಂದಲೇ ಭಾರತದ ದಾಸ್ಯವಿಮೋಚನೆ ಯಾಗಬಾರದೇತಕ್ಕೆ? ರಾಜಾ ರಾಮಮೋಹನರಾಯರು ಈ ದೃಷ್ಟಿಯಲ್ಲಿಯೇ ವಿಚಾರಮಾಡಿ, ಇಂಗ್ಲಿಷ್ ಭಾಷಾ ಪ್ರಸಾರಕ್ಕೆ ಇಂಬುಗೊಟ್ಟಿದ್ದರು. ವಿಶ್ವವನ್ನು ಸಾಮ್ರಾಜ್ಯಶಾಹಿಯ ಹಿಡಿತ ದಿಂದ ಪರದಾಸ್ಯಶೃಂಖಲೆಯಿಂದ ಬಿಡುಗಡೆಮಾಡಬಲ್ಲ ಜಾನ್ ಸ್ಟುಅರ್ಟ ಮಿಲ್, ಎಡ್ಮಂಡ್‌ಬರ್ಕ್, ಪೇನ್ ಇವರ ಕೃತಿಗಳಿದ್ದುದು ಇಂಗ್ಲಿಷಿನಲ್ಲೇ; ವಿಶ್ವದ ಎಲ್ಲ ವಿಚಾರವಾದಿಗಳ ಕೃತಿಗಳೂ ಇಂಗ್ಲಿಷಿನಲ್ಲಿ ದೊರೆಯುತ್ತಿತ್ತು. ಇಂಗ್ಲಿಷ್ ಭಾಷೆಯೊಂದರ ಪರಿಚಯದಿಂದ ವಿಶ್ವದ ಸಮಸ್ತ ವಿಚಾರಧಾರೆಯನ್ನರಿಯಲು ಅವಕಾಶವಿತ್ತೆಂದೇ ರಾಮಮೋಹನರಾಯರು ಈ ಭಾಷೆಯ ಪ್ರಸಾರಕ್ಕೆ ತ್ರಿಕರಣಪೂರ್ವಕವಾಗಿ ದುಡಿದರು. ಇಂಗ್ಲಿಷ್ ಭಾಷೆಯ ಉದ್ದಾಮ ಪಂಡಿತರಾದ ಬಿ. ಎಂ. ಶ್ರೀಕಂಠಯ್ಯ ನವರನ್ನು ಪ್ರೇರೇಪಿಸಿ, ಅವರಿಂದ ಕೆಲವು ದಿವ್ಯ '**ಇಂಗ್ಲಿಷ್ ಗೀತೆ**' ಗಳನ್ನೂ ಅನುವಾದಮಾಡಿಸಿದ ಮನೋಭಾವವೂ ಇದೇ ಆಗಿತ್ತು. ಮೂಲ ಇಂಗ್ಲಿಷ್ ಕವಿಗಳ ಕೃತಿಗಳ ಛಂದಸ್ಸುಗಳಿಗೆ ಸರಿಹೋಲುವ ಕನ್ನಡ ಛಂದಸ್ಸುಗಳನ್ನಾಯ್ದುಕೊಂಡು ಶ್ರೀ ಯವರು ತಮ್ಮ ಇಂಗ್ಲಿಷ್ ಗೀತೆಗಳನ್ನು ರಚಿಸಿ ಆಂಗ್ಲಕಾವ್ಯ ಸಾಹಿತ್ಯದ ಅನರ್ಘ್ಯರತ್ನಗಳು ಇಂಗ್ಲಿಷ್ ಬಾರದ ಕನ್ನಡಿಗನಿಗೂ ದೊರೆಯುವಂತೆ ಮಾಡಿದರು. ಇಂಗ್ಲಿಷಿನವರ ಆಡಳಿತ, ಸಾಮ್ರಾಜ್ಯದಾಹದ ಬಗ್ಗೆ ನಮಗೆ ಅಸಂತೋಷವಿರಬಹುದು. ಆದರೆ ಅವರ ಸಾಹಿತ್ಯ, ಸಂಸ್ಕೃತಿಯ ಬಗ್ಗೆ ಆ ಅಸಂತೋಷ

ತೋರುವ ಕಾರಣವಿಲ್ಲ. ಆವರಿಂದ ನಾವು ಕಲಿಯಬಹುದಾದು ದನ್ನು — ಕಲಿಯಬೇಕಾದುದನ್ನು ಕಲಿತು ನಮ್ಮ ರಾಷ್ಟ್ರದ ಸರ್ವತೋಮುಖ ಬೆಳವಳಿಗೆಗೆ ಉಪಯೋಗಿಸಿಕೊಳ್ಳೋಣ ಎಂಬ ಭವ್ಯಧ್ಯೇಯದಿಂದ ಪ್ರೇರಿತರಾದ ಶ್ರೀಯವರು ಈ ಉಭಯ ರಾಷ್ಟ್ರಗಳ ಮೈತ್ರಿಗೆ ಅಡಿಗಲ್ಲು ಹಾಕಿದರು. ‘ ಕನ್ನಡಿಗರು ಸಂಕುಚಿತ ಮನಸ್ಕರಾಗದೆ ಎಲ್ಲ ರಾಷ್ಟ್ರಗಳ, ಎಲ್ಲ ಭಾಷೆಗಳ ಸಂಸ್ಕೃತಿ ಭಂಡಾರವನ್ನು ತಂದು ತಮ್ಮ ಭಂಡಾರ ದೊಡ್ಡದು ಮಾಡಿಕೊಳ್ಳಬೇಕು. ಆದರೆ ಕಂಡವರ ಭಂಡಾರ ನೋಡಿ ಕೊಂಡು ತೃಪ್ತರಾಗಿ ಕೂಡಬಾರದು. ಆ ಭಂಡಾರಕ್ಕೆ ಸರಿ ದೊರೆಯಾದ, ಮಿಗಿಲಾದ ಭಂಡಾರ ನಿರ್ಮಿಸಿ ತಾವೂ ಹಲವು ನಾಡಿಗೆ ಹಂಚಬೇಕು ’ ಎನ್ನುವುದೇ ಶ್ರೀಯವರ ಸಂದೇಶ ವಾಗಿತ್ತು.

೫. ಗದ್ಯಸಾಹಿತ್ಯದ ಬೆಳೆ

(೩) ಪದ್ಯಕ್ಕೇ ಪಾಧಾನ್ಯಕೊಟ್ಟ ಪ್ರಾಚೀನ ಕನ್ನಡ ಸಾಹಿತ್ಯ ಗದ್ಯವನ್ನು ನಿರ್ಲಕ್ಷಿಸುತ್ತ ಬಂದಿತು. ವಡ್ಡಾರಾಧನೆ (ಸು. ೯೨೫), ಚಾವುಂಡರಾಯ ಪುರಾಣ (೯೭೫) ಕನ್ನಡದ ಅತ್ಯಂತ ಪ್ರಾಚೀನ ಗದ್ಯಗ್ರಂಥಗಳು. ಈ ಗದ್ಯ ಕೂಡ ಸಾಕಷ್ಟು ಬೆಳೆಯಲಿಲ್ಲ. ಬಸವಣ್ಣ (೧೨೮೦), ಚಿಕ್ಕದೇವರಾಯರ (೧೭೦೦) ಕಾಲಗಳಲ್ಲಿ ಗದ್ಯರಚನೆಗೆ ಸ್ವಲ್ಪ ಇಂಬುದೊರಕಿದರೂ ಅದು ಪದ್ಯದಿಂದ ಪ್ರತ್ಯೇಕವಾದ ಅಸ್ತಿತ್ವವನ್ನು ಬೆಳಸಿಕೊಳ್ಳಲಿಲ್ಲ. ಮುಮ್ಮಡಿ ಕೃಷ್ಣರಾಜ ಒಡೆಯರವರ ಕಾಲದಲ್ಲಿ (೧೭೯೪-೧೮೬೮) ಗದ್ಯಕ್ಕೆ ಪ್ರಾಶಸ್ತ್ಯ ದೊರೆತರೂ ಅದು ಸಂಸ್ಕೃತದ ಛಾಯಾನು ವರ್ತಿಯಾಯಿತು. ಕನ್ನಡಿಗರ ಆಶೆ, ಆಕಾಂಕ್ಷೆ, ಧ್ಯೇಯ, ಧೋರಣೆ, ವಿಚಾರ-ವಿಕಾಸಗಳನ್ನು ಪ್ರತಿಬಿಂಬಿಸುವುದಕ್ಕೆ

ಸ್ವತಂತ್ರ ಗದ್ಯಶೈಲಿಯೊಂದು ರೂಪುಗೊಳ್ಳಬೇಕಾಗಿತ್ತು. ಆಲೂರ ವೆಂಕಟರಾಯರು ೧೯೧೭ರಲ್ಲಿಯೇ ಇಂಥ ಪ್ರಯತ್ನ ನಡೆಸಿದರು. ಎಂ. ಎಸ್. ಪುಟ್ಟಣ್ಣ, ಶ್ರೀನಿವಾಸರ ಮನೆಮಾತಿನ ಶೈಲಿಯೂ ರೂಪುತಳೆಯಿತು. ಇದೇ ಕಾಲದಲ್ಲಿಯೇ ಡಿ. ವಿ. ಗುಂಡಪ್ಪನವರು, ಮಹಾದೇವ ಪ್ರಭಾಕರ ಪೂಜಾರರು, ಪಂಜೆ ಮಂಗೇಶರಾಯರು, ಪಂಡಿತ ತಾರಾನಾಥರು, ಎ. ಆರ್. ಕೃಷ್ಣಶಾಸ್ತ್ರಿಗಳು* ವಿಚಾರಪರಿಪ್ಲುತವೂ, ಸಬಲವೂ, ಮೊನಚೂ ಆದ ಗದ್ಯಶೈಲಿಯನ್ನು ರೂಪಿಸಲು ವಿಶೇಷ ಶ್ರಮಿಸಿದರು. ಇವರ ಪ್ರಯತ್ನದಿಂದ ಹೊಸಗನ್ನಡ ಗದ್ಯಶೈಲಿ ಶಾಶ್ವತ ಸ್ವರೂಪ ತಳೆದು ನಿಂತುದಲ್ಲದೆ, ಆಧುನಿಕ ಜೀವನಕ್ಕೆ ಅಗತ್ಯವಾದ ಯಾವದೇ ವಿಷಯವನ್ನು ಸಮಂಜಸವಾಗಿ, ಪರಿಣಾಮಕಾರಿಯಾಗಿ ನಿರೂಪಿಸಲು ಸಮರ್ಥವಾಯಿತು.

೬. ಸ್ವತಂತ್ರ ನಾಟಕ

(೪) ಕನ್ನಡನಾಡಿನಲ್ಲಿ ನಾಟಕ ಅತಿ ಪ್ರಾಚೀನಕಾಲದಿಂದ ಬೆಳೆಯುತ್ತ ಬಂದಿದ್ದರೂ, ನಾಟಕ ಸಾಹಿತ್ಯ ಉಪಲಬ್ಧವಿಲ್ಲವಾಗಿದೆ. ಸಿಂಗರಾರ್ಯನ (೧೭೦೦) ಮಿತ್ರವಿಂದಾಗೋವಿಂದ ಒಂದೇ ನಮಗೆ ದೊರೆತಿರುವ ಪ್ರಾಚೀನ ಕನ್ನಡ ನಾಟಕ. ಇದೂ ಸ್ವತಂತ್ರ ಕೃತಿಯಲ್ಲ ಶ್ರೀಹರ್ಷನ ರತ್ನಾವಳಿ ನಾಟಕದ

---

* ಡಿ. ವಿ. ಗುಂಡಪ್ಪನವರ 'ಜೀವನ ಸೌಂದರ್ಯ ಮತ್ತು ಸಾಹಿತ್ಯ', ಮ. ಪ್ರ. ಪೂಜಾರರ ಬಿಡಿ ಪ್ರಬಂಧಗಳು ; ಪಂಜೆ ಮಂಗೇಶರಾಯರ 'ಕೋಟಿ ಚನ್ನಯ್ಯ'; ಪಂಡಿತ ತಾರಾನಾಥರ 'ಧರ್ಮಸಂಭವ'; ಎ. ಆರ್. ಕೃಷ್ಣಶಾಸ್ತ್ರಿಗಳ 'ಸಂಸ್ಕೃತ ನಾಟಕ'.

ಭಾಷಾಂತರ. ಚಾಮರಾಜ ಒಡೆಯರವರ ಆಸ್ಥಾನ ಕವಿಗಳಾಗಿದ್ದ ಬಸವಪ್ಪಶಾಸ್ತ್ರಿಗಳು, ಸುಬ್ಬಾಶಾಸ್ತ್ರಿಗಳು, ಅನಂತನಾರಾಯಣ ಶಾಸ್ತ್ರಿಗಳು, ಅಯ್ಯಾಶಾಸ್ತ್ರಿಗಳು, ಗಿರಿಭಟ್ಟರ ತಮ್ಮಯ್ಯನವರು ಸಂಸ್ಕೃತ ಇಂಗ್ಲಿಷ್ ಭಾಷೆಗಳ ನಾಟಕಗಳನ್ನು ಕನ್ನಡಕ್ಕೆ ಅನುವಾದಮಾಡಿದರು. ವಿದ್ವಾನ್ ವೆಂಕಟಾಚಾರ್ಯರೂ, ನಂಜನಗೂಡು ಶ್ರೀಕಂಠಶಾಸ್ತ್ರಿಗಳೂ, ಬೆಳ್ಳಾವೆ ನರಹರಿಶಾಸ್ತ್ರಿಗಳೂ ಕೆಲವು ಸ್ವತಂತ್ರ ನಾಟಕಗಳನ್ನು ರಚಿಸಿದರು. ಉತ್ತರ ಕರ್ನಾಟಕದಲ್ಲಿ ವಾಮನರಾವ್ ಮಾಸ್ತರ್ ಅವರು ಗಡಕರಿ, ಖಾಡಿಲ್‌ಕರ್, ಮಾಮಾ ವರೇರ್‌ಕರ್ ಅವರ ಹಲವು ಮರಾಟಿ ನಾಟಕಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಪ್ರದರ್ಶಿಸುತ್ತಿದ್ದರು. ಹೆಚ್ಚು ಕಡಿಮೆ ಮರಾಟಿ ಸಂಪ್ರದಾಯವನ್ನೇ ಅನುಸರಿಸಿ ಗರೂಡ ಸದಾಶಿವರಾಯರು ಹಲವು ಸ್ವತಂತ್ರ ನಾಟಕಗಳನ್ನು ಬರೆದು ಪ್ರದರ್ಶಿಸುತ್ತಿದ್ದರು. ಈ ಬೆಳೆ ಹುಲುಸಾಗಿದ್ದರೂ ಅವುಗಳಲ್ಲಿ 'ಕನ್ನಡತನ' ಕಣ್ಮರೆಯಾಗಿತ್ತು. ಕನ್ನಡಿಗರ ಜೀವನ, ಸಮಸ್ಯೆಗಳನ್ನು ಕಡೆದು ಜನತೆಯ ಮುಂದೆ ನಿಲ್ಲಿಸಬಲ್ಲ ಪ್ರತಿಭಾಶಾಲಿ ನಾಟಕಕಾರನ ಬರುವನ್ನು ನಾಡು ಕುತೂಹಲದಿಂದ ನಿರೀಕ್ಷಿಸುತ್ತಿತ್ತು. ನಿರೀಕ್ಷೆಯನ್ನು ಪೂರೈಸಿದವರು ಕೈಲಾಸಂ. ಅವರ 'ಟೊಳ್ಳು-ಗಟ್ಟಿ' ನಾಟಕ ೧೯೧೯ರಲ್ಲಿ ರಂಗಭೂಮಿಯಲ್ಲಿ ಪ್ರದರ್ಶಿತವಾಗಿ ಪ್ರಕಟವಾಯಿತು. ಟೊಳ್ಳು-ಗಟ್ಟಿಗೆ ದೊರೆತ ಪ್ರೋತ್ಸಾಹ ಭರ್ತ್ಸನೆಗಳೆರಡೂ ಕೈಲಾಸಂ ಅವರ ಪ್ರೇರಕ ಶಕ್ತಿಗಳಾದವು. ೧೯೧೯ ರಿಂದ ೧೯೪೭ರ ವರೆಗೆ, ಸುಮಾರು ಇಪ್ಪತ್ತೆಂಟು ವರ್ಷಕಾಲ ಕೈಲಾಸಂ ಲೇಖನಿ ಧಾರಾವಾಹಿನಿಯಾಗಿ ಪ್ರವಹಿಸಿ ಹಲವಾರು ದೊಡ್ಡ ನಾಟಕಗಳನ್ನು ಸಣ್ಣ ನಾಟಕಗಳನ್ನು ನಾಡಿಗೆ ನೀಡಿತು.

ಕೈಲಾಸಂ ಅವರ ಸಮಕಾಲೀನರಾಗಿ ರಂಗಭೂಮಿಯ ಉತ್ಕರ್ಷಕ್ಕಾಗಿ ಶ್ರಮಿಸಿ ರುದ್ರನಾಟಕಗಳ ಮಾಲೆಯನ್ನೇ ನಾಡಿಗರ್ಪಿಸಿದ ಮತ್ತೊಬ್ಬ ಪ್ರತಿಭಾಶಾಲಿ 'ಸಂಸ'ರು. ಮೈಸೂರು ಇತಿಹಾಸ 'ಸಂಸ'ರ ಪ್ರಯತ್ನದಿಂದ ಅಮರವಾದುದಲ್ಲದೆ, ಪ್ರೌಢವೂ ಪ್ರೋಜ್ವಲವೂ ಆದ ನಾಟಕಶೈಲಿಯೊಂದು ಅವರ ಪ್ರತಿಭೆಯ ಫಲವಾಗಿ ರೂಪು ತಳೆಯಿತು. ಪ್ರಾಚೀನ ಗ್ರೀಕ್ ರುದ್ರನಾಟಕಕಾರರ ಕೃತಿಗಳನ್ನು ನೆನಪಿಸುವ ಸಂಸರ ಕೃತಿಗಳು ಕನ್ನಡನಾಡಿನ ನಾಟಕ ಸಾಹಿತ್ಯಕ್ಕೆ ಮಾತ್ರವಲ್ಲದೆ ಅಖಂಡ ಭಾರತದ ನಾಟಕ ಸಾಹಿತ್ಯಕ್ಕೇ ರತ್ನಪ್ರಾಯವಾಗಿವೆ.

ಕೈಲಾಸಂ, ಸಂಸರ ಸಮಕಾಲೀನರಾಗಿ ನಾಟಕ ಸಾಹಿತ್ಯದ ಬೆಳೆಯನ್ನು ಹೆಚ್ಚಿಸಿದವರು ಶ್ರೀರಂಗ (ಆದ್ಯ ರಂಗಾಚಾರ್ಯ), ಅ. ನ. ಕೃ, ಕಾರಂತ ಮತ್ತು ಸಿ. ಕೆ. ವೆಂಕಟರಾಮಯ್ಯ. ಶ್ರೀರಂಗರ 'ಉದಯ ವೈರಾಗ್ಯ'; ಅ. ನ. ಕೃ ಅವರ 'ಮದುವೆಯೋ-ಮನೆಹಾಳೋ', ಕಾರಂತರ 'ಗರ್ಭಗುಡಿ', ಸಿ. ಕೆ. ವೆಂಕಟರಾಮಯ್ಯನವರ 'ನಮ್ಮ ಸಮಾಜ' ಸಾಮಾಜಿಕ ನಾಟಕಗಳ ಕ್ಷೇತ್ರವನ್ನು ವಿಸ್ತರಿಸಿ, ಆಳವಾದ ಸಮಸ್ಯೆಗಳ ಕಡೆ ನಮ್ಮ ಲಕ್ಷ್ಯವೆಳೆಯಿತು.

ಅಭಿಜಾತ ರಂಗಭೂಮಿಗೆ ಶ್ರೀಯವರು ತಮ್ಮ 'ಅಶ್ವತ್ಥಾಮನ್' ನಾಟಕವನ್ನು ಕಾಣಿಕೆಯಾಗಿತ್ತರು. ಅವರ ಮೇಲ್ಪಂಕ್ತಿಯನ್ನನುಸರಿಸಿ ಕೆ. ವಿ. ಪುಟ್ಟಪ್ಪನವರು ಕೆಲವು ಸರಳರಗಳೆಯ ನಾಟಗಳನ್ನು ರಚಿಸಿದರು. ಕಾರಂತರು ಮತ್ತು ಪು. ತಿ. ನರಸಿಂಹಾಚಾರ್ಯರು 'ಗೀತಾನಾಟಕ'ಗಳ ಬಗ್ಗೆ ಶ್ರಮಿಸಿದರು.

೭ ವಿಚಾರ ವೈಜ್ಞಾನಿಕ ಸಾಹಿತ್ಯ

ಈ ಕಾಲವನ್ನು 'ಧೀರ ಪ್ರಯತ್ನಕಾಲ'ವೆಂದು ನಾವು

ಕರೆಯಬಹುದು. ಅಕ್ಷರಜ್ಞತೆಯೂ, ವಾಚನಾಭಿರುಚಿಗೂ ಸಾಕಷ್ಟು ಬೆಳೆದಿರುವ ಈ ದಿನಗಳಲ್ಲಿಯೇ ಪಾಂಡಿತ್ಯಪೂರ್ಣ ವಾದ ಒಂದು ವೈಜ್ಞಾನಿಕ ಪತ್ರಿಕೆ ನಡೆಸುವುದು ದುಸ್ತರವಾಗಿರು ವಾಗ ಇಂಥ ಒಂದು ಮಹದ್ಪ್ರಯತ್ನವನ್ನು ೯೯೧೮ರಲ್ಲಿ ಮಾಡಿದ ವರು ಬೆಳ್ಳಾವೆ ವೆಂಕಟನಾರಾಯಣಪ್ಪನವರು. ಅವರ 'ವಿಜ್ಞಾನ' ಪತ್ರಿಕೆ ಬಾಳಿದ್ದು ಎರಡುವರ್ಷಕಾಲ. ಎಂಥ ಕ್ಲಿಷ್ಟ ವೈಜ್ಞಾ ನಿಕ ವಿಷಯವನ್ನಾದರೂ ಕನ್ನಡದಲ್ಲಿ ಅಭಿವ್ಯಕ್ತಿಗೊಳಿಸಬಹು ದೆಂದು ವೆಂಕಟನಾರಾಯಣಪ್ಪನವರು ಈ ಅಲ್ಪಾವಧಿಯಲ್ಲಿ ಸಿದ್ಧಮಾಡಿಕೊಟ್ಟರು.

ಸಮಾಜ ವಿಜ್ಞಾನ, ತುಲನಾತ್ಮಕ ಧರ್ಮ ವಿವೇಚನೆ, ಹೈತುಕವಾದಗಳಿಗೆ ಪ್ರಾಗತಿಕ ನಾಡಿನಲ್ಲಿ ಸ್ಥಾನವಿದೆಯೆಂದು ಸ್ಥಾಪಿಸಿದವರು ಪಂಡಿತ ತಾರಾನಾಥರು. ಈ ವಿಷಯಗಳ ಮೇಲೆ ಅವರು 'ಪ್ರೇಮ' ಪತ್ರಿಕೆಯಲ್ಲಿ ಬರೆದಿರುವ ಲೇಖನಗಳು, ಅವರ 'ಧರ್ಮಸಂಭವ' ಗ್ರಂಥ ಕನ್ನಡನಾಡಿನಲ್ಲಿ ನೂತನ ವಿಚಾರ ಕ್ರಾಂತಿಯನ್ನೇ ಹೊಡೆದೆಬ್ಬಿಸಿದವು.

ವಿಚಾರ ಸಾಹಿತ್ಯದ ಬೆಳೆಗೆ ತ್ರಿಕರಣಪೂರ್ವಕವಾಗಿ ಶ್ರಮಿಸಿದವರಲ್ಲಿ ದತ್ತಾತ್ರೇಯ ಕೃಷ್ಣ ಭಾರದ್ವಾಜರನ್ನು ಸ್ಮರಿಸಿ ಕೊಳ್ಳಬೇಕು. ಭಾರತದ ರಾಜಕೀಯ ಇತಿಹಾಸ, ಸ್ವಾತಂತ್ರ ಸಂಗ್ರಾಮೇತಿಹಾಸದ ಕರ್ತೃಗಳೂ, ಗಾಂಧೀಸಾಹಿತ್ಯದ ಅನು ವಾದಕರಲ್ಲಿ ಮೊದಲಿಗರೂ ಆದ ಭಾರದ್ವಾಜರು ದಾಂಪತ್ಯ ವಿಜ್ಞಾನ, ಸಂತಾನ ವಿಜ್ಞಾನ ಗ್ರಂಥಗಳನ್ನು ಬರೆದು ಲೈಂಗಿಕ ವಿಜ್ಞಾನದ ಮೇಲೆ ಕವಿದಿದ್ದ ಭಯ, ಬೀಭತ್ಸತೆ, ಉಪೇಕ್ಷೆಗಳನ್ನು ಹರಿದೊಗೆದರು. ತರುವಾಯ ಲೇಖಕರಾದ ಡಾ॥ ದೊಡ್ಡೇರಿ ವೆಂಕಟಗಿರಿರಾವ್, ಡಾ॥ ಗೋಪಾಲಕೃಷ್ಣ ಮೊದಲಾದವರು

ಲೈಂಗಿಕ ವಿಜ್ಞಾನ ಶಾಸ್ತ್ರಗ್ರಂಥ ರಚನೆಗೆ ತೊಡಗುವುದಕ್ಕೆ ಭಾರದ್ವಾಜರ ಮೇಲ್ಪಂಕ್ತಿಯೇ ಕಾರಣವಾಯಿತು.

ಕನ್ನಡ ನವೋದಯ ರೂಪುಗೊಳ್ಳುವುದಕ್ಕೆ ಪತ್ರಿಕೆಗಳು ಮಾಡಿದ ಸಹಾಯವನ್ನು ನೆನಪಿಸಿಕೊಳ್ಳಬೇಕು. ಎಂ. ವೆಂಕಟ ಕೃಷ್ಣಯ್ಯನವರ **'ಸಂಪದಭ್ಯುದಯ'**, ತಿ. ತಾ. ಶರ್ಮರ **'ವಿಶ್ವಕರ್ಣಾಟಕ'**, ಮುದವೀಡು ಕೃಷ್ಣರಾಯರ **'ಕರ್ನಾಟಕ ವೃತ್ತ ಮತ್ತು ಧನಂಜಯ'**, ಆಲೂರ ವೆಂಕಟರಾಯರ **'ಜಯಕರ್ನಾಟಕ'**, ರಾಜಗೋಪಾಲ ಕೃಷ್ಣರಾಯರ **'ಕೃಷ್ಣ ಸೂಕ್ತಿ'**, ಡಿ.ವಿ. ಗುಂಡಪ್ಪನವರ **'ಕರ್ನಾಟಕ ಜನಜೀವನ'** ನವೋದಯ ಕಾಲದ ಸಾಹಿತ್ಯಪ್ರಕಟನೆಯನ್ನು ಕೈಗೊಂಡು, ಅವುಗಳ ಬಗ್ಗೆ ಜನಾಭಿರುಚಿಯನ್ನು ಬೆಳಸಿದುದಲ್ಲದೆ, ಪ್ರಚಲಿತ ವಿಷಯಾಭಿವ್ಯಕ್ತಿಗೆ ಅತ್ಯವಶ್ಯಕವಾದ ಶೈಲಿಯನ್ನು ನಿರ್ಮಿಸಿದವು.

ನವೋದಯ ಸಾಹಿತ್ಯ ಕಾಲದ ಪೂರ್ವಾರ್ಧದಲ್ಲಿ ನಡೆದ ಪ್ರಯತ್ನದ ಫಲವಾಗಿ ಉತ್ತಮ ಬೆಳೆ ಸಮೃದ್ಧಿಯಾಗಿ ಬರಲಾರಂಭವಾಯಿತು.

೮ ಸಣ್ಣ ಕಥೆ

ಶ್ರೀನಿವಾಸರು, ಪಂಜೆ ಮಂಗೇಶರಾಯರು ಹಲವಾರು ಉತ್ತಮ ಕಥೆಗಳನ್ನು ಬರೆದು, ಈ ಕಲಾಪ್ರಾಕಾರ ಚಿರಸ್ಥಾಯಿಯಾಗಿ ಕನ್ನಡದಲ್ಲಿ ಉಳಿಯುವಂತೆ ಮಾಡಿದರು. ಈ ಇಬ್ಬರು ಲೇಖಕರ ಸುಹೃದಯ ಮನೋಭಾವ, ಲಲಿತ ಮಧುರ ಶೈಲಿ, ಮನವರಳಿಸುವ ಮೃದುಹಾಸ್ಯ, ಸಂಸಾರ ಜೀವನದ ರಸಮಯ ಸನ್ನಿವೇಶಗಳು ಬಹುಮಂದಿ ಕಿರಿಯ ಲೇಖಕರನ್ನು ಆಕರ್ಷಿಸಿ

ದವು. ಆನಂದ, ಶ್ರೀನಾಥ, ಆನಂದಕಂದ, ಗೋಪಾಲಕೃಷ್ಣ ರಾವ್, ರಾಜರತ್ನಂ, ಕೃಷ್ಣಕುಮಾರ ಕಲ್ಲೂರ—ಈ ಹಿರಿಯರ ಮೇಲ್ಪಂಕ್ತಿಯನ್ನನುಸರಿಸಿ ಚಿತ್ತಾಕರ್ಷಕ ಕಥೆಗಳನ್ನು ರಚಿಸಿದರು. ಇದಕ್ಕೆ ಪಾಸಟಿಯಾಗಿ ಆಳವಾದ ಸಮಸ್ಯೆಗಳನ್ನು ಹೃದಯಂಗಮವಾಗಿ ನಿರೂಪಿಸುವ ಸಂಪ್ರದಾಯವೊಂದು ಆರಂಭವಾಯಿತು. ಅ. ನ. ಕೃ, ಕಾರಂತ, ಹ. ಪೀ. ಜೋಶಿ, ಟೇಂಗ್ಸೆ ಗೋವಿಂದರಾಯ, ಪೇಜಾವರ ಸದಾಶಿವರಾಯ ಈ ಸಂಪ್ರದಾಯದ ಪುರಸ್ಕರ್ತರಾದರು. ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರು ಜಾನಪದ ಹಾಸ್ಯದಿಂದ ತುಂಬಿದ ಹಳ್ಳಿಯ ಜನಜೀವನವನ್ನು ತಮ್ಮ ಕಥೆಗಳಲ್ಲಿ ತಂದರು. ಪಡಕೋಣೆ ರಮಾನಂದರಾಯರು ಪಿ. ಜಿ. ವೋಡ್‌ಹೌಸನ ತಿಳಿಹಾಸ್ಯವನ್ನು ನೆನಪಿಗೆ ತರುವಂಥ ಹಾಸ್ಯಕಥೆಗಳನ್ನು ಬರೆದರು. ಪು. ತಿ. ನರಸಿಂಹಾಚಾರ್ಯರು ಅಧ್ಯಾತ್ಮಿಕ ತತ್ತ್ವನಿರೂಪಣೆಗೆ ಸಣ್ಣ ಕಥೆಯ ಸಾಧನವನ್ನುಪಯೋಗಿಸಿಕೊಂಡು ಕೃತಕೃತ್ಯರಾದರು.

ಈ ಎರಡು ದಶಕಗಳ ಕಾಲ (೧೯೧೯-೧೯೩೫) ಸಣ್ಣ ಕಥಾ ಪ್ರಪಂಚದಲ್ಲಿ ಕನ್ನಡ ಕೃತಿಗಳು ತಲೆಯೆತ್ತಿ ನಿಂತವು. ವಿಶ್ವದ ಉತ್ತಮೋತ್ತಮ ಸಣ್ಣಕಥೆಗಳ ಪಂಕ್ತಿಯಲ್ಲಿ ನಿಲ್ಲಬಲ್ಲ ಹಲವು ಕಥೆಗಳು ನಿರ್ಮಾಣವಾದವು.

೯ ಭಾವಗೀತೆ

ಕನ್ನಡ ಕಾವ್ಯಕ್ಕೆ ಭಾವಗೀತೆ ಹೊಸದಲ್ಲ. ಚಂಪೂ, ಷಟ್ಪದಿ, ಸಾಂಗತ್ಯ ಕಾವ್ಯಗಳನ್ನು ರಚಿಸಿರುವ ಪ್ರಾಚೀನ ಕವಿಗಳು ಅನೇಕ ಭಾವಗೀತೆಗಳನ್ನು ತಮ್ಮ ಕೃತಿಗಳಲ್ಲಿ ಸಮಾವೇಶಗೊಳಿಸಿದ್ದಾರೆ. ಇಂಥ ಹಲವು ಗೀತಗಳನ್ನು ಅಭಿನವ ವಿದ್ಯಾನಂದ

(೧೭ನೆಯ ಶತಮಾನ) ತನ್ನ 'ಕಾವ್ಯಸಾರ'ದಲ್ಲಿ ಸಂಗ್ರಹಿಸಿದ್ದಾನೆ. ನವೋದಯ ಸಾಹಿತ್ಯ ಕಾಲದಲ್ಲಿ ಭಾವಗೀತೆಗಳಿಗೆ ಹೆಚ್ಚಿನ ವ್ಯಾಪ್ತಿಯೂ ಪ್ರಾಶಸ್ತ್ಯವೂ ದೊರೆತುದಕ್ಕೆ ಕಾಲ ಗುಣವೂ, ಜನಗಳ ಸಾಹಿತ್ಯಾಭಿರುಚಿಯೂ ಕಾರಣಗಳಾದವು. ಮೊವಲಿನಂತೆ ಜನ ಪುರಸತ್ತಾಗಿ ಕುಳಿತು, ಪಂಪಭಾರತ, ಕುಮಾರವ್ಯಾಸ ಭಾರತ, ರಾಜಶೇಖರವಿಳಾಸ, ಚನ್ನಬಸವ ಪುರಾಣದಂಥ ದೊಡ್ಡ ಪ್ರಮಾಣದ ಗ್ರಂಥಗಳನ್ನು ಅಭ್ಯಾಸಿಸುವುದು ಸಾಧ್ಯವಿಲ್ಲವಾಯಿತು. ಅತ್ಯಲ್ಪವೇಳೆಯಲ್ಲಿ ಮನಸ್ಸಿನ ಮೇಲೆ ಪರಿಣಾಮವನ್ನುಂಟುಮಾಡುವ ಭಾವನೆ, ವಿಚಾರವನ್ನು ಅಚ್ಚೊತ್ತುವ ಕಿರುಪ್ರಮಾಣದ ಕಾವ್ಯದ ಅಗತ್ಯವಿತ್ತು. ಈ ವೇಳೆಗಾಗಲೇ ಸಾಹಿತ್ಯರಂಗಕ್ಕೆ ಉತ್ಸಾಹದಿಂದಿಳಿದಿದ್ದ ಕಿರಿಯ ಲೇಖಕರ ಬಳಗವೊಂದು ಸಿದ್ಧವಾಗಿತ್ತು. ಅವರು ಇಂಗ್ಲಿಷಿನ ಸಾನೆಟ್, ಫ್ರೀವರ್ಸ್, ಬ್ಲ್ಯಾಂಕ್‌ವರ್ಸ್, ಓಡ್ಸ್ ಮೊದಲಾದ ಛಂದಸ್ಸುಗಳನ್ನು ಕನ್ನಡದಲ್ಲಿ ಪ್ರಯೋಗಿಸಿನೋಡಲು ಆತುರರಾಗಿದ್ದರು. 'ವಿನೂತನ ಕವಿತೆ' ಯಾಗಿದ್ದ ಭಾವಗೀತೆಗೆ ಅತ್ಯವಶ್ಯಕವಾಗಿ ಬೇಕಾಗಿದ್ದ ಪಾಂಡಿತ್ಯದ ಹಿನ್ನೆಲೆ, ಭಾವಪುಷ್ಟಿ, ಅಭಿವ್ಯಕ್ತಿ ಕೌಶಲ್ಯ, ಛಂದೋಪ್ರಯೋಗ ಪ್ರಾವೀಣ್ಯತೆಗಳನ್ನೊದಗಿಸಿಕೊಟ್ಟವರು ಡಿ. ವಿ. ಗುಂಡಪ್ಪನವರು. ಇವರ 'ನಿವೇದನ' ಕೇವಲ ಕಾವ್ಯವಲ್ಲ, ಕವಿಗಳ ಕಾವ್ಯ. ಮಹಾಕಾವ್ಯದ ಅನೇಕ ಲಕ್ಷಣಗಳನ್ನೊಳಗೊಂಡಿರುವ ಈ ಸಣ್ಣ ಕೃತಿ ಕನ್ನಡ ಕಾವ್ಯ ಪ್ರಪಂಚದ ಒಂದು ಮೈಲಿಗಲ್ಲು. ಜೀವನದ ಸಮಸ್ತ ಆವಿಷ್ಕಾರವನ್ನು ಸುಪ್ತ ಹಾಗೂ ವ್ಯಕ್ತ ಸೌಂದರ್ಯವನ್ನು, ಮಾನವನ ಹೃದಯಾಂತರಾಳದಲ್ಲಿ ನೆಲಸಿರುವ ಭಕ್ತಿಭಾವವನ್ನು ಕವಿ ಅನ್ಯಾದೃಶವಾಗಿ ವರ್ಣಿಸಿದ್ದಾರೆ. ಅವರ 'ಮಂಕುತಿಮ್ಮನ ಕಗ್ಗ'

ಈ ಶತಮಾನದ ಅಮರಕೃತಿ. ಅನೇಕ ಜನ್ಮಗಳ ಅನುಭವ, ಪರಿಪಕ್ವ ವಿಚಾರಸರಣಿ, ಧ್ವನಿಪ್ರಧಾನವಾದ ನುಡಿಜಾಣ್ಮೆ, ಜೀವನದ ಸರ್ವದೋಷಗಳನ್ನರಿತು ಅದನ್ನು ಕೆಚ್ಚಿನಿಂದ ಎದುರಿಸ ಬಲ್ಲ ಧೀಶಕ್ತಿ ಈ ಮಹಾಕಾವ್ಯದಲ್ಲಿ ಲಾಸ್ಯವಾಡುತ್ತಿದೆ.

ಮಂಜೇಶ್ವರದ ಗೋವಿಂದ ಪೈ ಆಧುನಿಕ ಮಹಾಕವಿಗಳ ಪಂಕ್ತಿಗೆ ಸೇರತಕ್ಕವರು. ಗೇರುಸೊಪ್ಪೆಯ ಜಲಪಾತದಂತೆ ಧುಮ್ಮಿಕ್ಕುವ ಅವರ ಕಾವ್ಯ ತನ್ನ ಧೀರ ಗಂಭೀರ ನಡೆಯಿಂದ ಓದುಗನನ್ನು ಬೆರಗುಗೊಳಿಸುತ್ತದೆ. ಕವಿ 'ವೈಶಾಖಿ' 'ಗೊಲ್ಗೋಥ' ಎಂಬೆರಡು ನೀಳ್ಗವಿತೆಗಳಲ್ಲಿ ಮೇರುಸದೃಶರಾದ ಇಬ್ಬರು ಮಹಾಪುರುಷರ ಪರಿಚಯಮಾಡಿಕೊಟ್ಟಿದ್ದಾರೆ. ಕವಿ ದೊಡ್ಡವನಾದರೇ ಕಾವ್ಯ ದೊಡ್ಡದಾಗಲು ಸಾಧ್ಯ ಎಂಬ ಸತ್ಯ ವನ್ನು ನಿತ್ಯವನ್ನಾಗಿಸಿರುವ ಈ ಕೃತಿಗಳು ವಿಶ್ವಕಾವ್ಯಮಾಲೆ ಯಲ್ಲಿ ಕನ್ನಡಕಾವ್ಯಕ್ಕೆಡೆಮಾಡಿಕೊಟ್ಟಿವೆಯೆಂದು ಧಾರಾಳವಾಗಿ ಹೇಳಬಹುದು. ಕೆ. ವಿ. ಪುಟ್ಟಪ್ಪನವರದು ಬಹುಮುಖ ಪ್ರತಿಭೆ. ಅವರು ವರ್ಡ್ಸ್‌ವರ್ತನ ಸಂಪ್ರದಾಯದ ಗೀತಾಕಾರರು. ಪುಟ್ಟಪ್ಪ ನವರು ಪ್ರಕೃತಿಪ್ರಿಯರು. ತಮ್ಮ ದಿವ್ಯಪ್ರತಿಭೆಯಿಂದ ಆಕೆಯ ವಿವಿಧ ವಿಲಾಸ, ರಾಗ, ಸೌಂದರ್ಯವನ್ನು ಪುಟ್ಟಪ್ಪನವರು ಚಿತ್ರಿಸಿದ್ದಾರೆ. ಜಡಪ್ರಕೃತಿ ಕೂಡ ಅವರ ಶಬ್ದವಿಲಾಸಕ್ಕೆ ಕುಣಿ ದಾಡುತ್ತದೆ. ಅನುಭವ ಮತ್ತು ಕ್ರಾಂತಿ ಎರಡೂ ಪುಟ್ಟಪ್ಪ ನವರ ಕಾವ್ಯದ ಹೆಗ್ಗುರುತುಗಳಾಗಿವೆ. ಪ್ರಕೃತಿಯ ಹಲವು ತೆರನ ವೈಭವಕ್ಕೆ ಕವಿ ಮನಸೋಲುವಂತೆ ಆಕೆಯ ಹಲವು ಕುಂದುಕೊರತೆಗಳನ್ನೂ ಗಮನಿಸುತ್ತಾನೆ. ಜನತೆಯ ಮನೋ ದೌರ್ಬಲ್ಯಗಳನ್ನೆದುರಿಸಿ, ಅವರ ಧಾರ್ಮಿಕ ಅಂಧಶ್ರದ್ಧೆ, ಸಂಕು ಚಿತಮನೋಭಾವಗಳನ್ನು ಖಂಡಿಸುವುದರಲ್ಲಿ ಪುಟ್ಟಪ್ಪನವರು

ಹಿಂದೆಮುಂದೆ ನೋಡುವುದಿಲ್ಲ. ಸೌಂದರ್ಯಾರಾಧಕನಾದ ಕವಿ ಸತ್ಯಪ್ರಿಯನೂ ಹೌದೆನ್ನುವುದನ್ನು ಪುಟ್ಟಪ್ಪನವರು ತಮ್ಮ ಕಾವ್ಯ ದಲ್ಲಿ ತೋರಿದ್ದಾರೆ. ಕನ್ನಡದ ಕಾವ್ಯವನದಲ್ಲಿ ಪುಟ್ಟಪ್ಪನವರ ವಾಣಿ ವಿನೂತನ ನಾದಸೌರಭದಿಂದ ಕೂಡಿದೆ. ವಿ. ಸೀತಾ ರಾಮಯ್ಯನವರ ಕಾವ್ಯ ನಿರ್ಮಲಗಂಗೆಯಂತೆ ಓತಪ್ರೋತವಾಗಿ ಹರಿಯುತ್ತದೆ. ಅವರ ಗೀತೆಗಳು ಸಾಣೆಗೊಂಡ ರತ್ನಗಳಂತಿವೆ. ಪರಿಶುದ್ಧ ಭಾವನೆ, ಸ್ಪಷ್ಟವಿಚಾರಗಳು ಒಡೆದು ಮೂಡಿವೆ. ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿ ನಮ್ಮನ್ನು ಕಾಡು ತ್ತಿರುವ ಹಲವು ಸಮಸ್ಯೆಗಳನ್ನು ಕಂಡು ಕವಿಯ ಮನಸ್ಸು ನೊಂದಿದೆ. ಪುಟ್ಟಪ್ಪನವರ ಕಾವ್ಯದಲ್ಲಿ ಆಶಾವಾದ ಕಂಡು ಬಂದರೆ ಸೀತಾರಾಮಯ್ಯನವರ ಕಾವ್ಯದಲ್ಲಿ ನಿರಾಶಾವಾದ ಮೂಡಿದೆ. ನಮ್ಮನ್ನು ದಾಸ್ಯಪಂಕದಲ್ಲಿ ಕೆಡವಿರುವ ಮೂವತ್ತು ಮೂರು ಕೋಟಿ ದೇವತೆಗಳು ನಾಶವಾಗಬೇಕು ಎಂದು ಕವಿ ಘೋಷಿಸುತ್ತಾನೆ. ಈ ದೇವತೆಗಳ ಬದಲು 'ಮಾನವತೆ' ಆಳ ಬೇಕೆಂಬುದೇ ಕವಿಯ ಆಶಯ. ಮಾನವತೆಯ ಆಧಿಪತ್ಯ ಸಾಧ್ಯವೇ ಎಂಬ ಶಂಕೆಯೂ ಕವಿಯನ್ನು ಬಾಧಿಸುತ್ತಿದೆ. ವಿ. ಸೀ. ಯವರು ಹಲವು ವೀರಗೀತೆಗಳನ್ನೂ ಬರೆದಿದ್ದಾರೆ. ಅವರ ರಾಷ್ಟ್ರಗೀತೆಗಳು ಶಕ್ತಿಯುತವಾಗಿಯೂ ಭಾವನಾಪ್ರಧಾನ ವಾಗಿಯೂ ಇವೆ. ಪು. ತಿ. ನರಸಿಂಹಾಚಾರ್ಯರು ಲಲಿತ ಗೀತಾಕಾರರು. ಇವರ ಗೀತೆಗಳಲ್ಲಿ ಕರುಣಾರಸಕ್ಕೆ ಪ್ರಾಧಾನ್ಯ. ಹರಿದಾಸರ ಸಂಪ್ರದಾಯಕ್ಕೆ ನೂತನ ರೂಪುಗೊಟ್ಟು ನರಸಿಂಹಾ ಚಾರ್ಯರು ಜನಮನದಲ್ಲಿ ಭಕ್ತಿ, ನಂಬಿಕೆ, ಆಸೆಯನ್ನು ತುಂಬಿ ದ್ದಾರೆ. ರಾಜರತ್ನಂ ಒಂದು ವಿಶಿಷ್ಟಮಾರ್ಗವನ್ನನುಸರಿಸಿದರು. ಉಮರ್ ಖಯ್ಯಂನಂತೆ ಮದ್ಯದ ಉಪಮಾನ ಬಳಸಿಕೊಂಡು

ಸಾಮಾನ್ಯ ಜನರ ಕಷ್ಟಸುಖಗಳನ್ನು ಜೀವನದರ್ಶನವನ್ನು ಚಿತ್ರವತ್ತಾಗಿ ಬಣ್ಣಿಸಿದರು. ಕಾವ್ಯಕ್ಕೆ ಜನಪದ ರೂಢಿಭಾಷೆಯನ್ನು ಬಳಸಿಕೊಂಡವರಲ್ಲಿ ಇವರೇ ಮೊದಲಿಗರು.*

ಆಧುನಿಕ ಕನ್ನಡ ಕಾವ್ಯದ ಇನ್ನೊಬ್ಬ ಪ್ರತಿಭಾವಂತ ಕವಿ ಬೇಂದ್ರೆ. ಅವರ ಆರಂಭದ ಕೃತಿಗಳಲ್ಲಿ ಕಂಡುಬರುವ ಭಾವನಾವೇಶ, ರಸಸಿದ್ಧಿ ವಿಸ್ಮಯವನ್ನುಂಟುಮಾಡುತ್ತವೆ. ಕಿರುದರ್ಪಣದಲ್ಲಿ ಹಿರಿಗಜವನ್ನಡಗಿಸಬಲ್ಲ ಯಾಕ್ಷಣಿಕ ಬೇಂದ್ರೆ. ಭಾವದ ಗಾಢಿ, ನಿರಾಭರಣಸುಂದರಿಯಂತಿರುವ ಭಾಷೆಯ ಮೋಡಿ, ಎರಡೂ ಹಾಲು ಸಕ್ಕರೆಯಂತೆ ಬೆರೆತು ಅಪೂರ್ವ ಅನಂದವನ್ನೊದಗಿಸುತ್ತದೆ. ಜಾನಪದ ಗೀತೆಗಳ ನಿಸರ್ಗರಮಣೀಯ ಛಂದೋವಿಲಾಸ ಬೇಂದ್ರೆಯವರ ಕಾವ್ಯದಲ್ಲಿ ಮಯೂರ ನಾಟ್ಯವಾಡುತ್ತದೆ. ಬೇಂದ್ರೆಯವರ ಈಚಿನ ಕಾವ್ಯ ಅಧ್ಯಾತ್ಮದ ಕಡೆ ಹೆಚ್ಚು ಒಲಿಯುತ್ತಿದೆ. ಅರವಿಂದ ಯೋಗಿಗಳ ಪೂರ್ಣಯೋಗದ ಪ್ರಭಾವ ಬೇಂದ್ರೆಯವರ ಕಾವ್ಯದಮೇಲೆ ಸುಸ್ಪಷ್ಟವಾಗಿ ಮೂಡಿದೆ.

ಕಡೆಂಗೋಡ್ಲು ಶಂಕರಭಟ್ಟರು ಕಥನ ಕವನಗಳಲ್ಲಿ ಅಪೂರ್ವ ಜಾಣ್ಮೆ ಸಾಧಿಸಿದರು. ಅವರ 'ಮಾದ್ರಿಯ ಚಿತೆ', 'ಹೊನ್ನಿಯ ಮದುವೆ' ಮತ್ತು ನೀಳ್ಗವಿತೆ 'ನಲ್ಮೆ', ಭಾವಸಿದ್ಧಿ ಭಾಷಾಸಿದ್ಧಿಗಳಿಗೆ ಹೆಸರಾಗಿವೆ.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿಯೂ ಕವಯಿತ್ರಿಯರ ಸಂಖ್ಯೆ ವಿಪುಲವಾಗಿಲ್ಲ. ಹದಿನೈದು ಶತಮಾನಗಳ ಸಾಹಿತ್ಯ ಶೋಧಿಸಿ ನೋಡಿದರೆ ನಮ್ಮ ಕಣ್ಣುಮುಂದೆ ನಿಲ್ಲುವವರು

---

* "ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ"—ಅ. ನ. ಕೃ. (ಪುಟ೩)

ನಾಲ್ವರೇ—ಕಂತಿ, ಮಹಾದೇವಿಯಕ್ಕ, ಹೆಳವನಕಟ್ಟೆ ಗಿರಿಯಮ್ಮ ಮತ್ತು ಸಂಚಿ ಹೊನ್ನಮ್ಮ. ಈ ಪಂಕ್ತಿಯಲ್ಲೇ 'ಭಾರತಿ' (ಸೌ॥ ತಿರುಮಲೆ ರಾಜಮ್ಮ) ಯವರಿಗೆ ಸ್ಥಾನ ಕೊಡಬೇಕು. ಅವರ 'ತಪಸ್ವಿನಿ', 'ಅಹಲ್ಯೆ' ಕಾವ್ಯನಾಟಕಗಳೂ, ಬಿಡಿಕವನಗಳೂ, ರಾಷ್ಟ್ರಗೀತೆಗಳೂ ಮೇಲ್ಮಟ್ಟದವುಗಳಾಗಿ ಕನ್ನಡದ ಹಿರಿಮೆ ಹೆಚ್ಚಿಸಿವೆ.

೧೦ ಕಾದಂಬರಿ

ಕನ್ನಡದ ಚಂಪೂ, ಷಟ್ಪದಿ, ಸಾಂಗತ್ಯ ಕಾವ್ಯಗಳನ್ನು ನಾವು ಕಾದಂಬರಿಗಳೆಂದು ಪರಿಗಣಿಸುವುದಾದರೆ ಕನ್ನಡ ಕಾದಂಬರಿಯ ಇತಿಹಾಸವನ್ನು ಪಂಪಭಾರತದ ಕಾಲಕ್ಕೇ ಒಯ್ಯಬೇಕಾಗುತ್ತದೆ. ಆದರೆ ಕಾದಂಬರಿ ಇಂದು ತಳೆದಿರುವ ಸ್ವರೂಪವನ್ನು ಲೆಕ್ಕಿಸುವುದಾದರೆ ಅದು ಇಪ್ಪತ್ತನೆಯ ಶತಮಾನದ ಶಿಶು. ಕೆಂಪುನಾರಾಯಣ ೧೮೨೩ರಲ್ಲಿಯೇ 'ಮುದ್ರಾ ಮಂಜೂಷ' ಬರೆದರೂ ಅದು ಅಚ್ಚಿನ ಮುಖಕಂಡು ಓದುಗರ ಕೈಸೇರಲು ಒಂದು ಶತಮಾನ ಕಾಯಬೇಕಾಯಿತು.

ಈ ಶತಮಾನದ ಆದಿಯಲ್ಲಿ ಕಾದಂಬರಿ ರಂಗದಲ್ಲಿ ಹೆಚ್ಚು ಕೃಷಿಮಾಡಿದವರು ಬಿ. ವೆಂಕಟಾಚಾರ್ಯರು ಮತ್ತು ಗಳಗನಾಥರು. ವೆಂಕಟಾಚಾರ್ಯರು ಬಂಕಿಂಚಂದ್ರ ಚಟ್ಟೋಪಾಧ್ಯಾಯರ ಬಂಗಾಳಿಕೃತಿಗಳನ್ನು ಗಳಗನಾಥರು ಹರಿನಾರಾಯಣ ಆಪ್ಟೆಯವರ ಮರಾಟಿ ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡಿದರು. ಈ ಇಬ್ಬರೂ ಸ್ವತಂತ್ರ ಕಾದಂಬರಿಕಾರರಲ್ಲದಿದ್ದರೂ, ಇವರ ಕೃತಿಗಳಿಂದಲೇ ಕನ್ನಡಿಗರ ವಾಚನಾಭಿರುಚಿ ಬೆಳೆಯಿತೆಂಬುದು ನಿರ್ವಿವಾದ. ವೆಂಕಟಾಚಾರ್ಯ—ಗಳಗ

ನಾಥರ 'ಭಾಷಾಂತರ ಯುಗ'ದಲ್ಲಿ ಸ್ವತಂತ್ರ ಕಾದಂಬರಿ ಬರೆಯುವ ಎದೆಗಾರಿಕೆ ತೋರಿದವರು ಎಂ. ಎಸ್. ಪುಟ್ಟಣ್ಣನವರು ಮತ್ತು ಕೆರೂರು ವಾಸದೇವಾಚಾರ್ಯರು. ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಾರಾಯ', 'ಮುಸುಕು ತೆಗೆಯೆ ಮಾಯಾಂಗನೆ' ಇಂದಿಗೂ ಹೊಸತೆನಿಸಿವೆ. ವಾಸುದೇವಾಚಾರ್ಯರ 'ಇಂದಿರಾ'—ಸಮಕಾಲೀನ ಉತ್ತರ ಕರ್ನಾಟಕದ ಜೀವನವನ್ನು ಬಹಳ ಸಾರಸ್ಯವಾಗಿ ಪ್ರತಿಬಿಂಬಿಸಿದೆ. ಅವರ 'ಭ್ರಾತೃಘಾತಕ ಅವರಂಗಜೇಬ' ಬರಲಿದ್ದ ಐತಿಹಾಸಿಕ ಕಾದಂಬರಿಕಾರರಿಗೆ ಹೆದ್ದಾರಿ ಕಲ್ಪಿಸಿಕೊಟ್ಟಿತು.

ಪುಟ್ಟಣ್ಣನವರೂ, ಕೆರೂರು ವಾಸುದೇವಾಚಾರ್ಯರೂ ಬಿತ್ತಿದ ಬೆಳೆ ಫಲಿಸಲು ಹದಿನೈದು ವರ್ಷಗಳು ಬೇಕಾದವು. ೧೯೧೫ರಿಂದ ೧೯೩೦ ರವರೆಗೆ ಕನ್ನಡ ಸಾಹಿತಿಗಳ ಲಕ್ಷ್ಯ ಹೆಚ್ಚಾಗಿ ಕಾದಂಬರಿಯತ್ತ ಹೋಗಲಿಲ್ಲ.

೧೯೩೦ರಾನಂತರ ಕನ್ನಡ ಸಾಹಿತ್ಯದಲ್ಲಿ ಕಾದಂಬರಿಯ ಯುಗವೇ ಆರಂಭವಾಯಿತು. ಕಾರಂತ, ದೇವುಡು, ಬೆಟಗೇರಿ ಕೃಷ್ಣಶರ್ಮ, ಅ.ನ.ಕೃ. ಕನ್ನಡ ಕಾದಂಬರಿಯ ಹೆಚ್ಚಿನ ಬೆಳೆಗೆ ಕಾರಣರಾದರು. ಕಾರಂತರ 'ಚೋಮನ ದುಡಿ-ಮರಳಿಮಣ್ಣಿಗೆ'; ಅ.ನ.ಕೃ. ಅವರ 'ಸಂಧ್ಯಾರಾಗ—ಮಂಗಳಸೂತ್ರ— ನಟಸಾರ್ವಭೌಮ', ದೇವುಡು ಅವರ 'ಅಂತರಂಗ', ; ಬೆಟಗೇರಿ ಕೃಷ್ಣಶರ್ಮರ 'ರಾಜಯೋಗಿ', ವಿ. ಕೃ. ಗೋಕಾಕರ 'ಇಜ್ಜೋಡು' ಮೊದಲಾದ ಸಿದ್ಧಕೃತಿಗಳು ಕಾದಂಬರಿಯ ಭವಿಷ್ಯವನ್ನು ಉಜ್ಜ್ವಲಗೊಳಿಸಿದವು.

೧೧. ವಿಮರ್ಶೆ

ಇದೇ ಕಾಲದಲ್ಲಿಯೇ ವಿಮರ್ಶಾಶಾಸ್ತ್ರ ಕುರಿತ ಲಕ್ಷಣ

ಲಕ್ಷ್ಯಗ್ರಂಥಗಳೂ ಪ್ರಕಟವಾಗಿ ಓದುಗರಿಗೆ ಅಭಿರುಚಿಗೆ ಪುಟ ಗೊಟ್ಟವು. ಡಿ. ವಿ. ಗುಂಡಪ್ಪನವರ 'ಜೀವನ ಸೌಂದರ್ಯ ಮತ್ತು ಸಾಹಿತ್ಯ'; ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರ 'ವಿಮರ್ಶೆ' (ಹಲವು ಭಾಗಗಳು); ಎ. ಆರ್. ಕೃಷ್ಣಶಾಸ್ತ್ರಿಗಳವರ 'ಸಂಸ್ಕೃತ ನಾಟಕ—ಭಾಸಕವಿ'; ಅ.ನ.ಕೃ. ಅವರ 'ರಾಜಾ ರವಿವರ್ಮ'—'ಸಾಹಿತ್ಯ ಮತ್ತು ಜೀವನ' (ಹಲವು ಭಾಗಗಳು) ಪ್ರಕಟವಾದುದಲ್ಲದೆ ಎಸ್. ವಿ. ರಂಗಣ್ಣ, ವಿ. ಸೀತಾರಾಮಯ್ಯ, ವಿ. ಕೃ. ಗೋಕಾಕರು, ರಂ. ಶ್ರೀ. ಮುಗುಳಿ 'ಪ್ರಬುದ್ಧ ಕರ್ನಾಟಕ'—'ಜಯ ಕರ್ನಾಟಕ' ಪತ್ರಿಕೆಗಳಲ್ಲಿ ಉತ್ತಮೋತ್ತಮ ಲೇಖನಗಳನ್ನು ಬರೆದರು.

೧೨. ಸಂಸ್ಥೆಗಳು

ಆಧುನಿಕ ಕನ್ನಡ ಸಾಹಿತ್ಯ ಬೆಳೆಯನ್ನು ನಾವು ಗಮನಿಸುವಾಗ ಅವುಗಳ ಹಿಂದಣ ಪ್ರೇರಕಶಕ್ತಿಗಳಾಗಿ ನಿಂತು, ಕಿರಿಯ ಲೇಖಕರಿಗೆ ಮಾರ್ಗದರ್ಶನಮಾಡಿ, ಅವರ ಕಿಶೋರಶಕ್ತಿ ವಿಕಾಸವಾಗಲು ನೆರವಾದ ಸಂಸ್ಥೆಗಳು ಮತ್ತು ಮಹನೀಯರನ್ನು ಸ್ಮರಿಸಿಕೊಳ್ಳಬೇಕು. ಬೆಂಗಳೂರು ಸೆಂಟ್ರಲ್ ಕಾಲೇಜಿನ 'ಕರ್ನಾಟಕ ಸಂಘ'ವನ್ನು ನವೋದಯ ಸಾಹಿತ್ಯದ ಮಹಾಮನೆಯೆಂದು ಕರೆಯಬೇಕು. ಎ. ಆರ್. ಕೃಷ್ಣಶಾಸ್ತ್ರಿಗಳವರು, ದಿವಂಗತ ಟಿ. ಎಸ್. ವೆಂಕಣ್ಣಯ್ಯನವರು ಈ ಸಂಸ್ಥೆಯ ಚಾಲಕರಾಗಿ ಹಲವಾರು ಲೇಖಕರನ್ನು ಬೆಳಕಿಗೆ ತಂದರು. ಲಲಿತ ಸಾಹಿತ್ಯ, ಕಲಾ ವಿಮರ್ಶೆ, ಸಾಹಿತ್ಯ ವಿಮರ್ಶೆ, ವೈಜ್ಞಾನಿಕ ಸಾಹಿತ್ಯ ವಿಪುಲವಾಗಿ ಬೆಳೆಯಲು ಅವಶ್ಯಕವಾದ ಆರಂಭದ ಕೃಷಿಯನ್ನು ಅದ್ವಿತೀಯವಾಗಿ ಮಾಡಿದರು. ನವೋದಯ ಸಾಹಿತ್ಯದ ವ್ಯಾಪ್ತಿ

ಹಾಗೂ ಕಲಾಸಿದ್ಧಿ ಈ ಇಬ್ಬರು ಕನ್ನಡ ತಪಸ್ವಿಗಳ ನಿಷ್ಕಾಮ ಕರ್ಮದ ಫಲವೆಂದು ಧಾರಾಳವಾಗಿ ಹೇಳಬಹುದು.

ಇದೇ ತರನ ಉದ್ಯಮವನ್ನು ಧಾರವಾಡದಲ್ಲಿ ಕೈಗೊಂಡು 'ಗೆಳೆಯರ ಗುಂಪು' ಎಂಬ ಹೆಸರಿನಲ್ಲಿ ತರುಣ ಲೇಖಕರ ತಂಡವನ್ನು ಕಟ್ಟಿದವರು ದ.ರಾ. ಬೇಂದ್ರೆ. ಮಂಗಳೂರಿನಲ್ಲಿ ಪಂಜೆ ಮಂಗೇಶರಾಯರು 'ಬಾಲ ಸಾಹಿತ್ಯ ಮಂಡಳಿ' ಸ್ಥಾಪಿಸಿ ಹಲವು ಉದಯೋನ್ಮುಖ ಲೇಖಕರ ಭವಿಷ್ಯವನ್ನು ರೂಪಿಸಿದರು.

ಬೆಂಗಳೂರಿನ 'ತುಂಟರ ತಂಡ' ಸ್ವತಂತ್ರ ಸಾಹಿತ್ಯ ವಿಕಾಸಕ್ಕೆ ನೆರವು ನೀಡಿತು. ಕನ್ನಡದಲ್ಲಿ ಲ್ಯಾಂಬ್, ಅಡಿಸನ್, ಡಿಕ್ವೆನ್ಸಿ ಮಾದರಿಯ ಪ್ರಬಂಧಗಳು ಹುಟ್ಟಿಕೊಳ್ಳುವುದಕ್ಕೆ ತುಂಟರ ತಂಡ ತುಂಬ ದುಡಿಮೆಮಾಡಿತು. ತಿ. ತಾ. ಶರ್ಮ, ಕೋ. ಸಂಪದ್ಗಿರಿರಾಯರು, ಟಿ. ಪಿ. ಕೈಲಾಸಂ ಈ ತಂಡದ ಪುರಸ್ಕರ್ತರಾಗಿದ್ದರು.

ತುಂಟರ ತಂಡದ ಧ್ಯೇಯಗಳನ್ನೇ ಧಾರವಾಡದಲ್ಲಿ ಸಾಧಿಸಿದ ಸಂಸ್ಥೆ 'ಮಂಗ ಮಠ'. ಕನ್ನಡದಲ್ಲಿ ಲಘುಗೀತೆ, ಲಘು ಹರಟೆ ಬರುವುದಕ್ಕೆ ಈ ಸಂಸ್ಥೆ ವಿಶೇಷ ಪ್ರಯತ್ನಮಾಡಿತು. ತುಂಟರ ತಂಡರ ಆಧಾರಸ್ತಂಭವಾಗಿದ್ದವರು ದಿ. ಪ್ರೊ. ಅ.ತು. ಸಾಸನೂರ್, ಅವರು.

೧೩. ನವೋದಯ ಸಾಹಿತ್ಯ ಕಾಲದ ಕೆಲವು ಲಕ್ಷಣಗಳು

ನವೋದಯ ಕಾಲದ ಸಾಹಿತ್ಯದ ಕೆಲವು ಮುಖ್ಯ ಲಕ್ಷಣಗಳನ್ನು ಹೀಗೆ ವಿವರಿಸಬಹುದು :

(೧) ಈ ಕಾಲದ ಸಾಹಿತ್ಯ ಸಾಧಾರಣ ಮಧ್ಯಮ ವರ್ಗವನ್ನು ಪ್ರತಿಬಿಂಬಿಸಿತು.

(೨) ಇಂಗ್ಲಿಷಿನ ಪ್ರಭಾವಕ್ಕೆ ಸಿಕ್ಕಿದ್ದರೂ ಆ ಪ್ರಭಾವ ದಿಂದ ದೂರ ನಿಂತು ಭಾರತೀಯ ಸಂಸ್ಕೃತಿಗೂ ಕನ್ನಡ ಜನ ಜೀವನಕ್ಕೂ ಅನುಗುಣವಾದ ಸಾಹಿತ್ಯ ನಿರ್ಮಿಸಬೇಕೆಂಬ ಪ್ರಯತ್ನ ನಡೆಯಿತು.

(೩) ಲಲಿತ ಸಾಹಿತ್ಯದ ಜತೆಯಲ್ಲಿ ವಿಚಾರ ಪ್ರಬೋಧಕ ಸಾಹಿತ್ಯ ಬೆಳಸಬೇಕೆಂಬ ಆಕಾಂಕ್ಷೆ ಕಂಡುಬಂದಿತು.

(೪) ಈ ಕಾಲದ ಸಾಹಿತ್ಯೋಪಾಸಕರು ದೇಶಾಭಿಮಾನಿಗಳಾಗಿದ್ದರೂ ದೇಶಾಭಿಮಾನ ಪ್ರೇರಕವೂ ಸ್ವಾತಂತ್ರ್ಯಪೂರಕವೂ ಆದ ಸಾಹಿತ್ಯದ ಕಡೆ ಅವರ ಲಕ್ಷ್ಯ ಹೆಚ್ಚಾಗಿ ಹೋಗಲಿಲ್ಲ.

(೫) ಆಧುನಿಕ ಜೀವನಾವಶ್ಯಕತೆಯನ್ನು ಪೂರೈಸಬಲ್ಲ ಬಗೆಬಗೆಯ ಗದ್ಯಶೈಲಿಯ ಆವಿಷ್ಕಾರವಾಯಿತು.

೧೪. ಪ್ರಗತಿಶೀಲ ಕಾಲ

ಸುಮಾರು ಮೂರು ದಶಕಕಾಲ ಅಭೂತಪೂರ್ವ ಸೇವೆ ಮಾಡಿದ ನವೋದಯ ಸಾಹಿತ್ಯವೂ ಒಂದು ಸಮಯಾಚಾರಕ್ಕೆ ಒಳಪಟ್ಟಿತು. ೧೯೪೨ರ ಆಗಸ್ಟ್ ವಿಪ್ಲವದಂಥ ಮಹತ್ವದ ವಿಷಯವೂ ಬಂಗಾಳ, ಕೇರಳ, ಬಿಜಾಪುರಗಳ ಘೋರ ಕ್ಷಾಮವೂ ಬಹುಮಂದಿ ಸಾಹಿತಿಗಳ ಅಂತಃಕರಣ ಕಲಕಲಿಲ್ಲ. ಸಾಹಿತಿಯಾದವನೂ ರಾಷ್ಟ್ರಿಕನಲ್ಲವೇ ? ಅವನಿಗೆ ಸಾಮಾಜಿಕ ಹೊಣೆಗಾರಿಕೆಯೇ ಇಲ್ಲವೇ ? ದೇಶದ ಮುಖವನ್ನೇ ಬದಲಿಸುವಂಥ, ಪುನರೇತಿಹಾಸವನ್ನೇ ನಿರ್ಮಾಣ ಮಾಡುತ್ತಿದ್ದ ಘಟನೆಗಳು ನಡೆಯುತ್ತಿದ್ದರೂ ಸಾಹಿತಿ ತನ್ನ ದಂತದರಮನೆಯಲ್ಲಿಯೇ ಚಂದ್ರೋದಯದ ಸೊಬಗನ್ನಾಸ್ವಾದಿಸುತ್ತ, ಚೆನ್ನೆಯರ ಚೆಲು

ವಿನ ವಿಭ್ರಮ ವಿಲಾಸದಲ್ಲಿ ಮೈಮರೆಯಬೇಕೇ ಎನ್ನುವ ಪ್ರಶ್ನೆ ಉದ್ಭವಿಸಿತು. ಈ ಪ್ರಶ್ನೆಗೆ ಉತ್ತರ ರೂಪವಾಗಿ 'ಪ್ರಗತಿಶೀಲ ಚಳುವಳಿ' ಆರಂಭವಾಗಿ, ಸಾಹಿತ್ಯ ಜನಜೀವನದ ರನ್ನಕನ್ನಡಿಯಾಗಬೇಕಲ್ಲದೆ, ಜನತೆಯ ದುಃಖ ಸಮಸ್ಯೆಗಳನ್ನು ಪರಿಹರಿಸಬಲ್ಲ ಸಾಧನವೂ ಆಗಬೇಕೆಂಬ ತತ್ವ ಪ್ರತಿಪಾದಿತವಾಯಿತು. ಈ ಕಾಲದ ಸಾಹಿತ್ಯವನ್ನು ನಾವು 'ಸಾಮಾಜಿಕ ಪರಿಜ್ಞಾನ ಸಾಹಿತ್ಯ' * ವೆಂದು ಕರೆಯಬಹುದು. ಪ್ರಗತಿಶೀಲರ ತತ್ವಕ್ಕೆ ವಿರುದ್ಧವಾಗಿ ಸಂಪ್ರದಾಯ ಸಾಹಿತಿಗಳು 'ಶುದ್ಧ ಸಾಹಿತ್ಯ'ದ ವಾದವನ್ನೆಬ್ಬಿಸಿ, ಸಾಹಿತ್ಯ ಪ್ರತಿನಿತ್ಯದ ಸಮಸ್ಯೆಗಳಿಂದ ದೂರ ನಿಂತು, ತ್ರಿಕಾಲಾಬಾಧಿತ ಸತ್ಯವನ್ನಷ್ಟೇ ಪ್ರತಿಪಾದಿಸಬೇಕೆಂದು ಹೇಳಿದರು.

ಪ್ರಗತಿಶೀಲ ಚಳುವಳಿ ಜೀವಂತವಾಗಿದ್ದ ನಾಲ್ಕು ವರ್ಷಗಳು (೧೯೪೨-೪೬) ಮಹೋನ್ನತವಾದ ಸಾಹಿತ್ಯಸೃಷ್ಟಿಯಾಗಿದಿದ್ದರೂ, ಸಾಹಿತ್ಯದ ಕ್ಷೇತ್ರ ವಿಶಾಲವಾಯಿತು. ಮುಂದೆ ಕನ್ನಡ ಸಾಹಿತ್ಯಕ್ಕೆ ಹಲವು ಉತ್ತಮ ಕಾಣಿಕೆಗಳನ್ನರ್ಪಿಸಲಿದ್ದ ಅನೇಕ ಲೇಖಕರನ್ನು ಬೆಳಕಿಗೆ ತಂದಿತು. ಮಧ್ಯಮವರ್ಗಕ್ಕೇ ಅಡಕವಾಗಿದ್ದ ಲೇಖಕರು ಸಾಮಾನ್ಯರು, ಶ್ರಮಜೀವಿಗಳು, ರೈತರು, ವಿದ್ಯಾರ್ಥಿಗಳ ಜೀವನಗಳನ್ನು ಚಿತ್ರಿಸಲಾರಂಭಿಸಿದರು. ಇವರು ಪ್ರಕಟಿಸಿದ ಪ್ರಗತಿಶೀಲ ಸಾಹಿತ್ಯ, ಮ್ಯಾಕ್ಸಿಮ್ ಗಾರ್ಕಿ, ಭಾರತಶಕ್ತಿ, ನನ್ನನ್ನು ನಾನೇ ಕಂಡೆ, ರಸಋಷಿ ಇತ್ಯಾದಿ ಗ್ರಂಥಗಳು ಜೀವನಸಾಹಿತ್ಯವಾದವನ್ನು ಚೆನ್ನಾಗಿ ಪ್ರತಿಪಾದಿಸಿವವು.

---

* Literature of Social Consciousness.

೧೫. ಸ್ವಾತಂತ್ರ್ಯೋತ್ತರ ಸಾಹಿತ್ಯ

೧೯೪೭ರ ಆಗಸ್ಟ್ ತಿಂಗಳು ಹದಿನೈದನೆಯ ತಾರೀಖು ಭಾರತ ಪರದಾಸ್ಯನೊಗವನ್ನು ಕೆಳಗಿಳುಹಿತು. ಸ್ವಾತಂತ್ರ್ಯ ಸೂರ್ಯೋದಯದ ಪ್ರಭೆಯನ್ನು ನೋಡಲಾರದೆ ಹಲವು ಸಾಹಿತಿಗಳು ಕಣ್ಣುಮುಚ್ಚಿಕೊಂಡರು. ಇಂಗ್ಲೀಷರನ್ನುಳಿದು ಅನ್ಯ ಬಂಧುಗಳಿಲ್ಲವೆಂದು ನೆರೆನಂಬಿದ್ದ ಈ ಸಾಹಿತಿಗಳು ಇಂಗ್ಲೀಷರ ನಿಷ್ಕ್ರಮಣದಿಂದ ಭಾರತ ಸ್ವಯೂಥಕಲಹಗಳಿಗೀಡಾಗಿ ನಾಶವಾಗುತ್ತದೆಂದು ಭಾವಿಸಿದರು. ಅವರ ಭವಿಷ್ಯ ಕೆಲ ಮಟ್ಟಿಗೆ ನಿಜವಾಯಿತು. ಸ್ವಯೂಥಕಲಹಗಳಾದವು. ದೇಶ ಇಬ್ಭಾಗವಾಯಿತು—ಆದರೆ ನಾಶವಾಗಲಿಲ್ಲ. ಭಾರತ ತನ್ನ ಅನಂತ ಸಮಸ್ಯೆಗಳನ್ನು ಧೀಶಕ್ತಿಯಿಂದ ಎದುರಿಸಲಾರಂಭಿಸಿ ಪ್ರಾಗತಿಕ ರಾಷ್ಟ್ರಗಳ ಮೆಚ್ಚುಗೆಗೆ ಪಾತ್ರವಾಯಿತು. ಪ್ರಥಮ ಪಂಚವಾರ್ಷಿಕ ಯೋಜನೆ—ದ್ವಿತೀಯ ಪಂಚವಾರ್ಷಿಕ ಯೋಜನೆಗಳು ಕಾರ್ಯೋನ್ಮುಖವಾಗಿ ದೇಶದ ಸರ್ವತೋಮುಖ ಪ್ರಗತಿಯನ್ನು ಸಾಧಿಸಲಾರಂಭಿಸಿದವು.

೧೬. ಸಾಹಿತ್ಯದ ನೂತನ ಆವಿಷ್ಕಾರ

ಸ್ವಾತಂತ್ರ್ಯಪ್ರಭೆ ಪರ್ಯಾಯವಾಗಿ ಸಾಹಿತ್ಯಲೋಕದ ಮೇಲೂ ತನ್ನ ಬೆಳಕು ಬಿತ್ತಲಾರಂಭಿಸಿತು.

(ಅ) ಕಾದಂಬರಿ

ಈ ಕಾಲದ ಸಾಹಿತ್ಯವನ್ನು ಕಾದಂಬರಿ ಸಂಪೂರ್ಣವಾಗಿ ಕಬಳಿಸಿತು. ಮಿಕ್ಕ ಸಾಹಿತ್ಯ ಪ್ರಕಾರಗಳಲ್ಲಿ ಕಂಡುಬರದ ಉತ್ಸಾಹ, ಸಿದ್ಧಿ ಕಾದಂಬರಿಯಲ್ಲಿ ಕಂಡುಬಂದಿತು. ಕಾರಂತ, ಅ.ನ.ಕೃ. ಅವರ ಲೇಖನ ಬಿಡುವಿಲ್ಲದೆ ಕಾದಂಬರಿಗಳನ್ನು ಸೃಷ್ಟಿ

ಸಿತು. ತ.ರಾ.ಸು., ಬಸವರಾಜ ಕಟ್ಟೀಮನಿ, ಇನಾಂದಾರ್, ಕೃಷ್ಣಮೂರ್ತಿ ಪುರಾಣಿಕ, ಮಿರ್ಜಿ ಅಣ್ಣಾರಾಯ, ನಿರಂಜನ, ತ್ರಿವೇಣಿ, ಅನುಪಮಾ, ವ್ಯಾಸರಾಯ ಬಲ್ಲಾಳ, ರಾಮಮೂರ್ತಿ ಕೆ. ವಿ. ಅಯ್ಯರ್, ಕುಲಕರ್ಣಿ ಬಿಂದುಮಾಧವ, ಸೀತಾರಾಮ ಶಾಸ್ತ್ರಿ, ಕುವೆಂಪು, ಮಾಸ್ತಿ, ದೇವುಡು, ಬೀಚಿ, ಮೈಸೂರು ಶೇಷಗಿರಿರಾವ್, ಕೃ.ನ.ಮೂರ್ತಿ, ಮ.ನ.ಮೂರ್ತಿ, ಕೊರಟಿ ಶ್ರೀನಿವಾಸರಾವ್, ತ್ರಿವಿಕ್ರಮ, ಮೊದಲಾದ ಲೇಖಕರು ಕಾದಂಬರಿಯ ಬೆಳೆಯನ್ನು ಹೆಚ್ಚಿಸುತ್ತ ಬಂದರು.

ವಾಹಿನಿ ಪ್ರಕಾಶನ ಸಂಸ್ಥೆಯವರು ೧೯೫೩ ರಲ್ಲಿ ಆರಂಭಿಸಿದ ಸುಲಭ ಬೆಲೆಯ ಕೈಹೊತ್ತಗೆಗಳು ಕಾದಂಬರಿಯ ಬೆಳೆಗೆ ವಿಶೇಷ ಇಂಬನ್ನಿತ್ತಿತು. ಇವರ ಮೊದಲನೆಯ ಪ್ರಕಟನೆ 'ಗೃಹಲಕ್ಷ್ಮಿ'ಗೆ ಸಿಕ್ಕಿದ ಅಭೂತಪೂರ್ವ ಪ್ರೋತ್ಸಾಹ ಹಲವು ಪ್ರಕಾಶಕರ ಸಾಹಸೋದ್ಯಮಕ್ಕೆ ಅಸ್ತಿಭಾರ ಹಾಕಿತು.

(ಆ) ಸಣ್ಣ ಕಥೆ

ನವೋದಯ ಸಾಹಿತ್ಯ ಕಾಲದೊಂದಿಗೆ ಬೆಳೆದ ಸಣ್ಣ ಕಥೆಗಳು ಹೇಳಹೆಸರಿಲ್ಲವಾಯಿತೆಂದರೆ ತಪ್ಪಾಗಲಿಕ್ಕಿಲ್ಲ. ಆ ಕಾಲದಲ್ಲಿ ಸಣ್ಣ ಕಥೆಗಳ ಸೌಧ ಕಟ್ಟಿದ ಶ್ರೀನಿವಾಸ, ಆನಂದ, ಅ.ನ.ಕೃ., ರಾಜರತ್ನಂ, ಬೆಟಗೇರಿ ಮೊದಲಾದ ಲೇಖಕರು ಸಣ್ಣ ಕಥೆಯನ್ನು ಕಡೆಗಾಣಿಸುತ್ತ ಬಂದರು. ಮಾಸ ಪತ್ರಿಕೆಗಳಿಗೆ ಬರೆಯುತ್ತಿದ್ದ ಹೊಸ ಲೇಖಕರು ಆ ಮಟ್ಟಕ್ಕೆ ಬರಲಿಲ್ಲ. ಒಂದು ಕಾಲದಲ್ಲಿ ವಿಶೇಷ ವೈಭವದಿಂದ ವರ್ಧಿಸಿದ ಈ ಸಾಹಿತ್ಯ ಪ್ರಕಾರ ಕನ್ನಡ ಸಾಹಿತ್ಯಲೋಕದಿಂದ ಅಳಿಸಿಹೋಗದಂತೆ ದೇವರಾಯ, ಅಶ್ವತ್ಥ, ರಮಾನಂದ ಘಾಟಿ ಮೊದಲಾದ ಲೇಖಕರು ಪ್ರಯತ್ನಿಸುತ್ತಿದ್ದಾರೆ.

(ಇ) ಕಾವ್ಯ

ಕಾವ್ಯ ಸಾಹಿತ್ಯಕ್ಕೆ ಕನ್ನಡದಲ್ಲಿ ಹೆಚ್ಚು ಪ್ರೋತ್ಸಾಹವಿಲ್ಲದಿದ್ದರೂ ಅದರ ಬೆಳೆ ಅವ್ಯಾಹತವಾಗಿ ಸಾಗಿತು. ಬೇಂದ್ರೆ, ಕುವೆಂಪು, ಗೋಕಾಕ, ಪು. ತಿ. ನರಸಿಂಹಾಚಾರ್ಯರು ಈ ವೃಕ್ಷಕ್ಕೆ ಸತತವಾಗಿ ನೀರೆರೆಯುತ್ತ ಬಂದರು. ನವ್ಯಕಾವ್ಯ ಪಂಥವೊಂದು ಆರಂಭವಾಗಿ ಗೋಪಾಲಕೃಷ್ಣ ಅಡಿಗ, ರಾಮಚಂದ್ರಶರ್ಮ, ಚನ್ನವೀರ ಕಣವಿ, ಅನಂತಮೂರ್ತಿ ಮೊದಲಾದ ಕಿರಿಯ ಕವಿಗಳನ್ನು ಬೆಳಕಿಗೆ ತಂದಿತು.

(ಈ) ನಾಟಕ

ನಾಟಕ ಸಾಹಿತ್ಯ ರಚನೆಯಲ್ಲಿಯೂ ಹೆಚ್ಚಿನ ಪ್ರಗತಿ ಕಂಡು ಬಂದಿಲ್ಲ. ಪರ್ವತವಾಣಿ, ರಾಜಾರಾವ್, ಕ್ಷೀರಸಾಗರ ಹಾಸ್ಯರಸಪ್ರಧಾನವಾದ ಲಘು ನಾಟಕಗಳನ್ನೇ ಬರೆಯುತ್ತ ಬಂದರು. ಎ. ಎಸ್. ಮೂರ್ತಿ ಕೆಲವು ಗಂಭೀರ ಸಮಸ್ಯೆಗಳನ್ನೆತ್ತಿಕೊಂಡು ನಾಟಕಗಳನ್ನು ರಚಿಸುವ ಪ್ರಯತ್ನ ಮಾಡಿದ್ದಾರೆ. ಪ್ರದರ್ಶನ ಹಾಗೂ ಪ್ರಕಟನಾನುಕೂಲ ಒದಗುವವರೆಗೆ ನಾಟಕ ಸಾಹಿತ್ಯ ಬೆಳೆಯುವುದು ಕಠಿಣವಾಗಿದೆ.

(ಉ) ಜೀವನ ಚರಿತ್ರೆ, ಆತ್ಮಕಥೆ

ಜೀವನ ಚರಿತ್ರೆಗಳ ಬೆಳೆ ಹುಲುಸಾಗಿದ್ದರೂ ಅವು ಗುಂಡಪ್ಪನವರು, ಕೆ. ವಿ. ಪುಟ್ಟಪ್ಪ, ಸಿ. ಕೆ. ವೆಂಕಟರಾಮಯ್ಯ, ರಾಜರತ್ನಂ, ಅ.ನ.ಕೃ. ಇವರ ಪ್ರಯತ್ನಗಳಿಗೆ ಸರಿದೊರೆಯಾಗಿಲ್ಲ. ಕೇವಲ ಪಠ್ಯಪುಸ್ತಕ ಸಮಿತಿಯನ್ನೇ ಲಕ್ಷ್ಯದಲ್ಲಿಟ್ಟುಕೊಂಡು ಬರೆಯಲ್ಪಡುತ್ತಿರುವ ಜೀವನ ಚರಿತ್ರೆಗಳಲ್ಲಿ ವಿಷಯ ಸಂಗ್ರಹ

ವಾಗಲಿ, ಕಲಾದಕ್ಷತೆಯಾಗಲಿ, ಪಾತ್ರಸ್ಫುಟತೆಯಾಗಲಿ ಕಂಡು ಬರುತ್ತಿಲ್ಲ.

ಕಾರಂತರು, ಜಿ. ಪಿ. ರಾಜರತ್ನಂ ತಮ್ಮ ಕೆಲವು ವರ್ಷಗಳ ಅನುಭವಗಳನ್ನು ಬರೆದ ಮೇಲೆ ಯಾರೂ ಆ ರಂಗದಲ್ಲಿ ಕೃಷಿ ಮಾಡಲಿಲ್ಲ. ಈಚೆಗೆ ನವರತ್ನ ರಾಮರಾಯರು ತಮ್ಮ 'ಕೆಲವು ನೆನಪುಗಳು' ಬರೆದು ಈ ಕೊರತೆಯನ್ನು ತಕ್ಕಮಟ್ಟಿಗೆ ಹೋಗಲಾಡಿಸಿದರು. ರಾಮರಾಯರ ಗ್ರಂಥ ಒಬ್ಬ ಸುಸಂಸ್ಕೃತ ಜೀವಿಯ ಜೀವನಯಾತ್ರೆಯ ವರ್ಣನೆಯಾಗಿರುವುದಲ್ಲದೆ ಅರ್ಧ ಶತಮಾನದ ನಮ್ಮ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಜೀವನದ ರನ್ನಗನ್ನಡಿಯಾಗಿದೆ.

ಕರ್ನಾಟಕ ಸಂಗೀತದ ಆಚಾರ್ಯಪುರುಷರಾದ ವಾಸುದೇವಾಚಾರ್ಯರು ತಮ್ಮ ಸಂಗೀತ ನೆನಪುಗಳನ್ನೂ, ಸಮಕಾಲೀನ ಸಂಗೀತ ವಿದ್ವಾಂಸರ ಕೆಲವು ಸ್ವಾರಸ್ಯ ಸಂಗತಿಗಳನ್ನೂ ವಿವರಿಸುವ 'ನಾ ಕಂಡ ಕಲಾವಿದರು' ಗ್ರಂಥ ಬರೆದು ಈ ಬಗೆಯ ಸಾಹಿತ್ಯದ ಕೊರತೆಯನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಿದ್ದಾರೆ.

(ಊ) ಅನುವಾದ

ಕನ್ನಡದಲ್ಲಿ ಅನುವಾದ ಸಾಹಿತ್ಯಕ್ಕೆ ಯಾವ ಕೊರತೆಯಿಲ್ಲದಿದ್ದರೂ ಮೂಲ ಲೇಖಕನ ಕೃತಿಗೆ ಅಪಚಾರವೆಸಗದಿರುವ ಕೃತಿಗಳು ವಿರಳ. ಶರತ್‌ಚಂದ್ರ ಚಟ್ಟೋಪಾಧ್ಯಾಯ, ರವೀಂದ್ರನಾಥರ ಹಲವು ಕೃತಿಗಳು ಕನ್ನಡಕ್ಕೆ ಅನುವಾದಗಿದ್ದರೂ ಅವು ಮೂಲ ಲೇಖಕರ ಬಗ್ಗೆ ಹೆಚ್ಚು ಆದರ ಹುಟ್ಟಿಸುವಂತಿಲ್ಲ.

ಡಿ. ವಿ. ಗುಂಡಪ್ಪನವರ 'ಈಶಾವಾಸ್ಯ', 'ಪುರುಷಸೂಕ್ತ', ಡಾ. ಕೃಷ್ಣಮೂರ್ತಿಯವರ 'ಧ್ವನ್ಯಾಲೋಕ' ಕನ್ನಡಕ್ಕೆ

ವಿಶೇಷ ಗೌರವ ತಂದಿರುವ ಅನುವಾದ ಗ್ರಂಥಗಳಾಗಿವೆ.

(ಎ) ಪ್ರಬಂಧ

ಕನ್ನಡಕ್ಕೆ ಹೊಸದಾದ ಪ್ರಬಂಧ ಸಾಹಿತ್ಯ ಈ ಎರಡು ದಶಕಗಳಲ್ಲಿ ವಿಪುಲವಾಗಿ ಬೆಳೆದಿದೆ. ನವೋದಯ ಸಾಹಿತ್ಯ ಕಾಲದಲ್ಲಿಯೇ ಪಂಜೆ ಮಂಗೇಶರಾಯರು, ಪ್ರೊ. ಅ. ತು. ಸಾಸನೂರವರು, ತಿ. ತಾ. ಶರ್ಮರು ಕೆಲವು ಪ್ರಯೋಗಗಳನ್ನು ನಡೆಸಿದರು. ಆದರೆ ಈ ಸಾಹಿತ್ಯ ಪ್ರಕಾರವನ್ನು ಮೇಲ್ಮಟ್ಟಕ್ಕೆ ಒಯ್ದು ವಿಚಾರ ವಿಹಾರಗಳೆರಡನ್ನೂ ಸಮನ್ವಯಗೊಳಿಸಿದ ಕೀರ್ತಿ ಎಸ್. ವಿ. ರಂಗಣ್ಣ, ಎ. ಎನ್. ಮೂರ್ತಿರಾವ್, ವಿ. ಸೀತಾರಾಮಯ್ಯ ಅವರಿಗೆ ಸೇರಬೇಕು.

(ಏ) ಹರಟೆ

ಕನ್ನಡದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತಿಳಿಹಾಸ್ಯ ಸಾಹಿತ್ಯ ಬೆಳೆಯುವುದಕ್ಕೆ ಕೈಲಾಸಂ ಸ್ಫೂರ್ತಿಯೇ ಮೂಲಕಾರಣ. ಹುಟ್ಟಾ ಹರಟೆಮಲ್ಲ ಕೈಲಾಸಂ ಆವರ 'ತಾವರೆಕೆರೆ'ಯಲ್ಲಿ ಹಾಸ್ಯ ಗಂಗಾಪ್ರವಾಹದಂತೆ ಹರಿದಿದೆ ತರುವಾಯ ಬೇಂದ್ರೆ, ಅ. ನ. ಕೃ., ನಾಡಿಗೇರ, ಬೀಚಿ, ಗದಗ್‌ಕರ್, ರಾ. ಶಿ., ಕಸ್ತೂರಿ ನಾಡಿಗೇರ ಗೋವಿಂದ, ಕುಡ್ವಿ ವಾಸದೇವ ಶೆಣೈ, ಕಾರಂತ, ಬುಳ್ಳ ಮೊದಲಾದ ಲೇಖಕರು ಹರಟೆಗಳ ವಿಶೇಷ ಬೆಳೆಗೆ ಕಾರಣರಾದರು.

(ಐ) ಇತರ ಗ್ರಂಥಗಳು

ಕುವೆಂಪು ಅವರ 'ರಾಮಾಯಣ ದರ್ಶನ'; ಎ. ಆರ್. ಕೃಷ್ಣಶಾಸ್ತ್ರಿಗಳವರ 'ಮಹಾಭಾರತ ಸಂಗ್ರಹ'; ಡಾ. ನರಸಿಂಹಯ್ಯನವರ 'ವೈಜ್ಞಾನಿಕ ಗ್ರಂಥಗಳು'; ರಂ.ಶ್ರೀ.

ಮುಗಳಿಯವರ 'ಕನ್ನಡ ಸಾಹಿತ್ಯ ಚರಿತ್ರೆ'; ಡಾ. ಎಸ್. ಶ್ರೀಕಂಠಶಾಸ್ತ್ರಿಗಳವರ 'ಭಾರತೀಯ ಸಂಸ್ಕೃತಿ'; ತೀ. ನಂ. ಶ್ರೀಕಂಠಯ್ಯನವರ ಭಾರತೀಯ ಕಾವ್ಯಮೀಮಾಂಸೆ'; ಡಿ. ವಿ. ಗುಂಡಪ್ಪನವರ 'ಸಂಸ್ಕೃತಿ'; ಮಿರ್ಜಿ ಅಣ್ಣಾರಾಯರ 'ಜೈನಧರ್ಮ'; ಅ.ನ.ಕೃ. ಅವರ 'ಸಾಹಿತ್ಯ ಮತ್ತು ಕಾಮ ಪ್ರಚೋದನೆ'; ಶ್ರೀ ಕೃಷ್ಣಯೋಗಿಗಳ 'ಭಗವದ್ಗೀತಾರ್ಥಸಾರ' —ಈ ದಶಕದಲ್ಲಿ ಪ್ರಕಟವಾಗಿರುವ ಉತ್ತಮ ಗ್ರಂಥಗಳು.

೧೭. ಕೊನೆಯ ಮಾತು

ಕನ್ನಡದಲ್ಲಿ ಈಗ ಬಂದಿರುವ ಬೆಳೆ ಇತರ ಪ್ರಾಂತ್ಯ ಸಾಹಿತ್ಯಗಳಿಗೆ ಯಾವರೀತಿಯಲ್ಲಿಯೂ ಕಡಮೆಯಿಲ್ಲದಿದ್ದರೂ ಕನ್ನಡಿಗರು ತೃಪ್ತರಾಗಿ ಕೈಕಟ್ಟಿ ಕೂಡಬಾರದು. ಬೆಳೆಯುತ್ತಿರುವ ಈ ನಾಡಿನ ಎಲ್ಲ ಅವಶ್ಯಕತೆಗಳನ್ನೂ ಪೂರೈಸಬಲ್ಲ ವಿವಿಧ ಸಾಹಿತ್ಯದ ರಚನೆಗೆ ಹೆಚ್ಚು ಮನಸ್ಸುಕೊಡಬೇಕು. ಲಲಿತ ಸಾಹಿತ್ಯದೊಂದಿಗೆ ಹೆಚ್ಚಿನ ಪ್ರಮಾಣದಲ್ಲಿ ವಿಚಾರ-ವಿಜ್ಞಾನ ಸಾಹಿತ್ಯವೂ, ವಿಮರ್ಶೆಯೂ ಬೆಳೆಯಬೇಕು. ವಿಶ್ವಸಾಹಿತ್ಯದ ಅನರ್ಘ್ಯರತ್ನಗಳನ್ನೆಲ್ಲಾ ತಂದುಕೊಂಡು ಕನ್ನಡಿಗರು ತಮ್ಮ ಭಂಡಾರ ಹೆಚ್ಚಿಸಿಕೊಳ್ಳಬೇಕಲ್ಲದೆ, ವಿಶ್ವ ಸಾಹಿತ್ಯ ಭಂಡಾರ ತುಂಬಬಲ್ಲ ರತ್ನಗಳನ್ನು ಕೊಡಲು ತಾವು ಸಮರ್ಥರಾಗಬೇಕು.

ಕನ್ನಡದ ಸಣ್ಣ ಕತೆಗಳು

ಲೋಕಪ್ರಿಯ ಸಾಹಿತ್ಯ ಪ್ರಕಾರಗಳಲ್ಲಿ ಸಣ್ಣ ಕಥೆಯು ಒಂದು. ಕಥೆ ಹೇಳುವುದು, ಕಥೆ ಕೇಳುವುದು, ಮಾನವನ ಹುಟ್ಟು ಗುಣಗಳಾಗಿವೆ. ಕಥೆಗಳಿಂದ ಮನೋರಂಜನೆಯನ್ನಲ್ಲದೆ ಮನೋವಿಕಾಸವನ್ನೂ ಸಾಧಿಸಲು ಪೂರ್ವಜರು ಪ್ರಯತ್ನಿಸಿದರು. ಉಪನಿಷತ್ತುಗಳಲ್ಲಿ ಬರುವ ಮನೋಜ್ಞ ಕಥೆಗಳೂ ಹಳೆಯ ಹಾಗೂ ಹೊಸ ಒಡಂಬಡಿಕೆಗಳಲ್ಲಿ ಬರುವ ಸಹಜ ಸುಂದರ ಕಥೆಗಳೂ, ಹಜರತ್ ರೂಮಿಯ 'ಮಾಸ್ನವಿ'ಯಲ್ಲಿ ಬರುವ ಸಾಂಕೇತಿಕ ಕಥೆಗಳೂ ಉಪದೇಶ ಭಾಗವನ್ನು ಸಫಲಗೊಳಿಸಿವೆ. ಶ್ರೀ ರಾಮಕೃಷ್ಣಪರಮಹಂಸರ ಕಥೆಗಳು ವೇದಾಂತದ ನಿಗೂಢ ತತ್ವಗಳನ್ನು ಪಾಮರರಿಗೂ ಮನವರಿಕೆಯಾಗುವಂತೆ ನಿರೂಪಿಸಿವೆ.

ಕನ್ನಡಿಗರು ಬಹಳ ಹಿಂದಿನಿಂದಲೂ ಸಣ್ಣ ಕಥೆಯ ರೂಪವನ್ನು ಬಳಸಿಕೊಂಡು ಅದರಲ್ಲಿ ಅಪೂರ್ವ ಸಿದ್ಧಿಯನ್ನು ದೊರಕಿಸಿಕೊಂಡರು. ಕ್ರಿ. ಶ. ಹನ್ನೊಂದನೆಯ ಶತಮಾನಕ್ಕೆ ಸೇರಿದ ಶಿವಕೋಟ್ಯಾಚಾರ್ಯ ಕೃತ 'ವಡ್ಡಾರಾಧನೆ' ಗ್ರಂಥದ ೧೯ ಕಥೆಗಳು ಕ್ರಿ. ಶ. ಹನ್ನೆರಡನೆಯ ಶತಮಾನದವನಾದ ನಯಸೇನನ 'ಧರ್ಮಾಮೃತ'ದಲ್ಲಿನ ಹದಿನಾಲ್ಕು ಮಹಾಪುರುಷರ ಕಥೆಗಳು, ಹದಿಮೂರನೆಯ ಶತಮಾನದವನಾದ ಹರಿಹರನ ರಗಳೆಯಲ್ಲಿ ನಿರೂಪಿತವಾಗಿರುವ ಕಥೆಗಳು, ಹದಿನಾರನೆಯ ಶತಮಾನದವನಾದ ಲಕ್ಷ್ಮೀಶನ 'ಜೈಮಿನಿ ಭಾರತ'ದಲ್ಲಿ ಬರುವ ಹಲವು ಕಥಾ ಪ್ರಸಂಗಗಳು ಕನ್ನಡಿಗರ ಕಥನ ಕಲಾನೈಪುಣ್ಯದ ಸಾಕ್ಷ್ಯಗಳಾಗಿವೆ.

ಕಥನ ಕಲೆಯ ಕ್ಷೇತ್ರ ವಿಸ್ತಾರಗೊಂಡು ಅದಕ್ಕೆ ಈಗಿರುವ ಸ್ವರೂಪ ಬಂದುದು ಈ ಶತಮಾನದ ಆದಿಯಲ್ಲಿ ಸಂಸ್ಕೃತ, ಕನ್ನಡ ಭಾಷೆಗಳಲ್ಲಿಯಲ್ಲದೆ ಇಂಗ್ಲೀಷಿನಲ್ಲಿಯೂ ತಜ್ಞತೆಯನ್ನು ದೊರಕಿಸಿಕೊಂಡಿದ್ದ ಕೆಲವು ಸಾಹಿತಿಗಳು, ವಸ್ತು, ಶೈಲಿ, ನಿರೂಪಣೆಗಳೆಲ್ಲದರಲ್ಲಿಯೂ ಪರಿಣಾಮಕಾರಿಯಾದ ಮಾರ್ಪಾಟುಗಳನ್ನು ಮಾಡಿದರು. ಆರಂಭದ ದೆಸೆಯಲ್ಲಿ ಈ ನಿಟ್ಟಿನಲ್ಲಿ ಪಂಜೆ ಮಂಗೇಶರಾಯರೂ, ಎಂ. ಎಸ್. ಕಾಮತರೂ, ಕೆರೂರು ವಾಸುದೇವಾಚಾರ್ಯರೂ ವಿಶೇಷವಾಗಿ ಶ್ರಮಿಸಿದರು. ೧೯೨೦ ರಲ್ಲಿ ಪ್ರಕಟವಾದ ಶ್ರೀನಿವಾಸರ 'ಸಣ್ಣ ಕಥೆಗಳು' ಗ್ರಂಥದಿಂದ ಆಧುನಿಕ ಸಾಹಿತ್ಯ ಪ್ರಪಂಚದಲ್ಲಿ ಸಣ್ಣ ಕಥೆಗಳ ಸ್ಥಾನ ಭದ್ರವಾಯಿತು. ರಂಗಪ್ಪನ ಜೀವನಾನುಭವ ಮಾಲಿಕೆಯಲ್ಲಿ ಶ್ರೀನಿವಾಸರು ನಿತ್ಯಜೀವನದ ಸಾಮಾನ್ಯ ಘಟನೆಗಳನ್ನು ಕಲೆಯ ಕುಂದಣದಲ್ಲಿಟ್ಟು, ಅವುಗಳ ಸುಪ್ತ ಸೌಂದರ್ಯ ಪ್ರಕಾಶಿಸಲು ಅನುಕೂಲ ಮಾಡಿಕೊಟ್ಟರು. ಶ್ರೀನಿವಾಸರ ಜಾಡನ್ನೇ ಹಿಡಿದು ಆನಂದ, ಸಿ. ಕೆ. ವೆಂಕಟರಾಮಯ್ಯ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಶ್ರೀನಾಥ, ಆನಂದಕಂದ ಮೊದಲಾದ ಲೇಖಕರು ಸಣ್ಣ ಕಥೆಗಳ ಬೆಲೆ, ಬೆಳೆಯನ್ನು ಹೆಚ್ಚಿಸಿದರು. ಕಿರಿದರೊಳು ಪಿರಿದು ಮರ್ಥಮನರಿಪ ರಾಜರತ್ನಂ ಅವರ 'ಹನಿಗಳು' ಕಥಾ ಸಾಹಿತ್ಯಕ್ಕೆ ಅಪೂರ್ವ ಕಾಣಿಕೆಯಾಯಿತು. ಶಿವರಾಮ ಕಾರಂತರು, ಅ.ನ.ಕೃ. ಸಮಸ್ಯಾತ್ಮಕ ವಸ್ತುಗಳನ್ನೂ ನಿಗೂಢ ಸಮಸ್ಯೆಗಳನ್ನೂ ಕಥನ ಕಲೆಗೆ ಅಳವಡಿಸಿಕೊಂಡರು. ಹೆಣ್ಣಿನ ದೃಷ್ಟಿಯಿಂದ ಜೀವನದ ಸಮಸ್ಯೆಗಳನ್ನು, ಸಂವಿಧಾನಗಳನ್ನು ನೋಡಿದ ಸೌಭಾಗ್ಯವತಿಯರಾದ ಶಾಮಲಾದೇವಿ, ಕೊಡಗಿನ ಗೌರಮ್ಮ, ಪಡುಕೋಣೆ ಸೀತಾದೇವಿ, ವಾಣಿ ಉತ್ತಮ

ಕಥೆಗಳನ್ನು ಬರೆದರು.

೧೯೨೦-೧೯೪೫-ಈ ಇಪ್ಪತ್ತೈದು ವರ್ಷಗಳನ್ನು ಕನ್ನಡ ಸಣ್ಣ ಕಥೆಗಳ 'ಉಚ್ಛ್ರಾಯ ಕಾಲ'ವೆಂದು ಪರಿಗಣಿಸಬಹುದು. ೧೯೪೫ರ ತರುವಾಯ ಸಣ್ಣ ಕಥೆಗಳ ಸಂಖ್ಯೆ ಬೆಳೆಯಿತಾದರೂ ಸತ್ತ್ವ ಊರ್ಜಿತವಾಗಲಿಲ್ಲ. ವಿಕಾಸವೂ ಆಗಲಿಲ್ಲ. ಸಣ್ಣ ಕಥೆಗಳ ಸ್ಥಾನವನ್ನು ಕಾದಂಬರಿಗಳು ಆಕ್ರಮಿಸಿಕೊಂಡುದೂ ೨೦ ರಿಂದ ೪೫ ರವರೆಗೆ ಸಣ್ಣ ಕಥೆಗಳ ಪ್ರಾದುರ್ಭಾವಕ್ಕೆ ಅನನ್ಯ ಶ್ರದ್ಧೆಯಿಂದ ದುಡಿದ ಶ್ರೇಷ್ಠ ಲೇಖಕರು, ಇತರ ಸಾಹಿತ್ಯ ಪ್ರಕಾರಗಳತ್ತ ಮನಸ್ಸುಗೊಟ್ಟುದೂ ಕಾರಣಗಳಾಗಿರಬಹುದು ಕನ್ನಡ ಸಣ್ಣ ಕಥೆಗಳ ಸದ್ಯದ ಸ್ಥಿತಿ ಅಷ್ಟು ಆಶಾದಾಯಕವಾಗಿಲ್ಲವೆಂದು ಒಪ್ಪಿಕೊಳ್ಳಬೇಕಾಗಿದೆ.

ಸಣ್ಣ ಕಥೆ ಶಬ್ದ ಗುಣ ಸೂಚಕವೇ ವಿನಾ ಗಾತ್ರ ಸೂಚಕವಲ್ಲ. ಸಣ್ಣ ಕಥೆ ಅತಿ ಸಣ್ಣದಾಗಿಯೂ ಇರಬಹುದು, ಅತಿ ದೊಡ್ಡದಾಗಿಯೂ ಇರಬಹುದು. ಮೋಪಸಾ, ಗಾರ್ಕಿ, ಸಾಮರ್‌ಸೆಟ್‌ಮೂಮ್ ಬರೆದಿರುವ ಕೆಲವು ಕಥೆಗಳು ನೂರಾರು ಪುಟಗಳ ವ್ಯಾಪ್ತಿಯನ್ನು ಪಡೆದಿದ್ದರೂ ಅವುಗಳನ್ನು ಸಣ್ಣ ಕಥೆಗಳೆಂದೇ ಪರಿಗಣಿಸಬೇಕು. ಸಣ್ಣ ಕಥೆ ಸಣ್ಣದಿರಲಿ, ದೊಡ್ಡದಿರಲಿ ಅದು ಜೀವನದ ಸಮಗ್ರ ದರ್ಶನವನ್ನಾಗಲಿ, ಅನುಭವವನ್ನಾಗಲಿ ನಿರೂಪಿಸಲೆತ್ನಿಸದೆ, ಜೀವನದ ಒಂದೇ ಘಟನೆ, ಒಂದೇ ಅನುಭವ, ಒಂದೇ ಚಿತ್ರವನ್ನು ನಮ್ಮ ಚಿತ್ತದ ಮೇಲೆ ಅಚ್ಚೊತ್ತುತ್ತದೆ. ಕಾದಂಬರಿ, ಬಹುಮುಖ ಜೀವನವನ್ನು ಅದರ ವಿವಿಧ ವೃತ್ತಿ ಪ್ರವೃತ್ತಿಗಳನ್ನು ಲಕ್ಷಿಸಿದರೆ, ಸಣ್ಣ ಕಥೆ ಕೋಲ್ಮಿಂಚಿನಂತೆ ಒಂದೇ ಎಳೆಯನ್ನು ಗುರುತಿಸಿ, ಅದರತ್ತ ನಮ್ಮ ಲಕ್ಷ್ಯ ಬೀಳುವಂತೆ ಮಾಡುತ್ತದೆ. ಕಾದಂಬರಿಕಾರ

ವಿಸ್ತಾರವಾದ ವೇಶ್ಯವನ್ನು ತನ್ನ ಮುಂದಿಟ್ಟುಕೊಂಡು, ಹಲವು ಕುಂಚಗಳನ್ನು ಉಪಯೋಗಿಸಿ, ಹಲವು ಬಣ್ಣಗಳನ್ನು ಪ್ರಯೋಗಿಸಿ ತನ್ನ ಗುರಿ ಸಾಧಿಸುತ್ತಾನೆ. ಕಾದಂಬರಿಕಾರನ ಸ್ವಾತಂತ್ರ್ಯವಾಗಲಿ, ವಿಶಾಲ ಕ್ಷೇತ್ರವಾಗಲಿ ಸಣ್ಣ ಕಥೆಗಾರನಿಗಿರುವುದಿಲ್ಲ. ಅವನೊಂದು ಮಿತಿಗೆ ಬದ್ಧನಾಗಿ ಅವ್ಯಕ್ತವೂ ಕ್ಷಣಭಂಗುರವೂ ಆದ ಅನುಭವಕ್ಕೆ ಶಾಶ್ವತ ರೂಪಕೊಡುತ್ತಾನೆ.

ಇಷ್ಟು ಅಲ್ಪಾವಧಿಯಲ್ಲಿ, ಕಿರುಪ್ರಮಾಣದಲ್ಲಿ ರಚಿತವಾದ ಕೃತಿ ಓದುಗನ ಮೇಲೆ ಯಾವ ಪರಿಣಾಮವನ್ನುಂಟುಮಾಡಬಲ್ಲದು? ಸಾಕಷ್ಟು ವಿಸ್ತೃತ ವಿಶ್ಲೇಷಣೆ, ನಿರೂಪಣೆಗಳಿಲ್ಲದಿದ್ದ ಮೇಲೆ ಓದುಗ ಅದರ ರಸಾಸ್ವಾದನ ಮಾಡುವುದಾದರೂ ಹೇಗೆ ಎಂಬ ಸಂದೇಹ ಹುಟ್ಟುತ್ತದೆ.

ಕಾದಂಬರಿಕಾರನ ಕೃತಿಯನ್ನು 'ಪ್ರಭು ಸಮ್ಮಿತಿಗೆ' ಹೋಲಿಸಬಹುದು. ಹೇಳಬೇಕಾದುದೆಲ್ಲವನ್ನೂ ಅರಸ ಹೇಳಿ ಮುಗಿಸುತ್ತಾನೆ—ಅವನ ಅಣತಿಯನ್ನು ಎದುರಿಸುವುದಾಗಲೀ ಅದಕ್ಕೆ ಪ್ರತಿಯಾದ ಅಣತಿಯನ್ನು ಸೂಚಿಸುವುದಾಗಲೀ ಸಾಧ್ಯವಿಲ್ಲ. ತಾನು ನಿರ್ದೇಶಿಸುವ ಕ್ಷೇತ್ರ, ಅದರಲ್ಲಿ ವ್ಯವಹರಿಸುವ ವ್ಯಕ್ತಿಗಳು, ಅವರ ಕಷ್ಟ ಸುಖ, ರಾಗ ದ್ವೇಷ. ಆಸೆಯಾಮಿಷಗಳ ಪೂರ್ಣ ಚಿತ್ರವನ್ನು ಕಾದಂಬರಿಕಾರ ನಮ್ಮ ಕೈಯಲ್ಲಿಡುತ್ತಾನೆ. ಸಣ್ಣ ಕಥೆಗಾರ ಹೆಚ್ಚು ಸರಳಜೀವಿ. ಕಾದಂಬರಿಕಾರನಂತೆ ಅವನು ಸರ್ವಾಧಿಕಾರಿಯಲ್ಲ—ಸಾಮ್ಯವಾದಿ. ಪ್ರಮೇಯಂತವನು, ಓದುಗನ ಭಾವ ಪ್ರಚೋದನೆಗೊಳಿಸಿ ಹಿಂದೆ ಸರಿಯುತ್ತಾನೆ. ನೂರು ಆಡಬೇಕಾದ ಕಡೆ ಒಂದು ಮಾತನಾಡಿ ಸಾವಿರ ಹೇಳಬೇಕಾದ ಕಡೆ ಒಂದು ವಿಷಯ ಹೇಳಿ, ಉಳಿದುದೆಲ್ಲವನ್ನೂ ಓದುಗನ ಧ್ಯಾನ, ಚಿಂತನೆ, ಕಲ್ಪನೆಗಳಿಗೊಪ್ಪಿಸಿ

ಬಿಡುತ್ತಾನೆ. ಅದಕ್ಕೆ ಅವನ ಕೃತಿಯನ್ನು ನಾವು 'ಕಾಂತಾ ಸಮ್ಮಿತಿ'ಗೆ ಹೋಲಿಸುತ್ತಿರುವುದು. ಸಣ್ಣ ಕಥೆಯಲ್ಲಿ ನಾವು ಹೆಚ್ಚಾಗಿ ನಿರೀಕ್ಷಿಸುವುದು ವಸ್ತು ಪ್ರಾಧಾನ್ಯವನ್ನಲ್ಲ—ತಂತ್ರ ನೈಪುಣ್ಯವನ್ನು. ವಸ್ತು ವೈಪುಲ್ಯವುಳ್ಳ ಸಣ್ಣ ಕಥೆ ಕಿರುಕಾದಂಬರಿಯಾಗುತ್ತದೆ. ಒಂದು ದೃಶ್ಯ, ಅನುಭವ, ವ್ಯಕ್ತಿಯನ್ನಷ್ಟೇ ಚಿತ್ರಿಸುವ ಕಥೆಗಾರ ಅತ್ಯಲ್ಪ ವೇಳೆಯಲ್ಲಿ ನಮ್ಮ ಚಿತ್ತವನ್ನು ಸೆರೆಹಿಡಿಯಲು ಸಮರ್ಥನಾಗಿರಬೇಕು

ಸಣ್ಣ ಕಥೆಗಳಲ್ಲಿ ಸಿದ್ಧಿಯನ್ನು ದೊರಕಿಸಿಕೊಳ್ಳುವುದು ಸುಲಭಸಾಧ್ಯವಲ್ಲ ಎಂಬುದು—ಸ್ವತಃಸಿದ್ಧವಾದರೂ ಈ ಕಲಾ ಪ್ರಕಾರದಲ್ಲಿ ಪೂರ್ಣ ಸಿದ್ಧಿಯನ್ನು ದೊರಕಿಸುವ ಪ್ರಯತ್ನ ಹೆಚ್ಚಾಗಬೇಕೆಂದು ನಾವು ಸೂಚಿಸದಿರಲಾರೆವು. ಕಾಲು ಶತಮಾನದ ಪ್ರಯತ್ನದಿಂದ ಸಾಧಿತವಾದ ಕಲಾಸಿದ್ಧಿಯನ್ನು ಪ್ರಯತ್ನಶೀಲತೆಯ ಅಭಾವ, ಅಶ್ರದ್ಧೆ, ಅಲ್ಪತೃಪ್ತಿಗಳಿಂದ ಕಳೆದುಕೊಂಡಲ್ಲಿ ನಾವು ದೋಷಭಾಗಿಗಳಾಗುತ್ತೇವೆ.

ಇಂದಿನ ಕನ್ನಡ ಕಥಾ ಸಾಹಿತ್ಯ

ಇಂದು ನಾವು ತಿಳಿದಂತೆ ಕಥಾ ಸಾಹಿತ್ಯವು ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯು ನಮಗೆ ಬಿಟ್ಟುಕೊಟ್ಟ ಆಸ್ತಿ. ಕಳೆದ ಶತಮಾನದ ಆರಂಭದಲ್ಲಿ ಬಂಗಾಳ ಬ್ರಿಟಿಷ್ ನಾಗರೀಕತೆಯ ಸಂಘರ್ಷಣೆಗೊಳಗಾಗಿ ಮಾರ್ಗವನ್ನು ಕಲ್ಪಿಸಿಕೊಟ್ಟಿತು. ಬಂಕಿಮಚಂದ್ರ ಚಟ್ಟೋಪಾಧ್ಯಾಯರ ಮೊತ್ತ ಮೊದಲ ಪ್ರಯತ್ನ ಭಾರತೀಯ ಸಾಹಿತ್ಯದ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಆರಂಭಿಸಿತು. ಭಾರತದ ಪ್ರಮುಖ ಭಾಷೆಗಳಲ್ಲೆಲ್ಲಾ ಪುನರುಜ್ಜೀವನವನ್ನು ತಂದಿತು. ಆಂಧ್ರದಲ್ಲಿ ವೀರೇಶಲಿಂಗಂ, ಮಹಾರಾಷ್ಟ್ರದಲ್ಲಿ ಹರಿನಾರಾಯಣ ಆಪ್ಟೆ ಮತ್ತು ಮೈಸೂರಿನಲ್ಲಿ ಬಿ. ವೆಂಕಟಾಚಾರ್ಯರು, ಬಂಕಿಮ ಬಾಬುಗಳು ತೋರಿಸಿದ ದಾರಿಯಲ್ಲಿ ನಡೆದರು.

ಈ ಶತಮಾನದ ಮೊದಲನೆಯ ಎರಡು ದಶಕಗಳಲ್ಲಿ ವೆಂಕಟಾಚಾರ್ಯರ ಮತ್ತು ಗಳಗನಾಥರ ಭಾಷಾಂತರ ಕೃತಿಗಳದೇ ಮೇಲುಗೈಯಾಗಿತ್ತು. ಎರಡನೆಯ ದಶಕದ ಕೊನೆಯಲ್ಲಿ ಗುಲವಾಡಿ, ಪುಟ್ಟಣ್ಣ ಮತ್ತು ಕೆರೂರು ವಾಸುದೇವಾಚಾರ್ಯ ಇವರು ಕೊಂಚಮಟ್ಟಿನ ಪ್ರಯತ್ನಗಳನ್ನು ನಡೆಸಿದರು. ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹಾರಾಯ' ಕೃತಿಯು ಬಹುದಿನದ ಬೇಡಿಕೆಯನ್ನು ಈಡೇರಿಸಿತು. ಪ್ರಪ್ರಥಮವಾಗಿ, ಸ್ವಸ್ವಾತ್ಮಕ ಸಾಹಿತ್ಯ ಜನತೆಯ ಕೈಗೆ ದೊರೆಯಿತು.

ಆಧುನಿಕ ಅರ್ಥವ್ಯಾಪ್ತಿಯಲ್ಲಿ, ಕಾದಂಬರಿ ಕನ್ನಡಿಗರಿಗೆ ಹೊಸದೆನಿಸಿದರೂ, ಅವರಿಗೆ ಕಾದಂಬರಿ ಪ್ರಕಾರವು ಪೂರ್ಣವಾಗಿ ಅಪರಿಚಿತವೆನಿಸಿರಲಿಲ್ಲ. ಹಲವು ಪ್ರಾಚೀನ (ಕ್ಲಾಸಿಕ್)

ಸಾಹಿತ್ಯ ನಿರ್ಮಾಪಕರು ಹುಟ್ಟು ಕತೆಗಾರರಾಗಿದ್ದರು. ಅವರ ಕೃತಿಗಳನ್ನು ಹೊಸಗನ್ನಡ ಗದ್ಯದಲ್ಲಿ ಅಳವಡಿಸಿದರೆ, ಅವು ಕಾದಂಬರಿಗಳಂತೆ ಓದಿಸಿಕೊಂಡು ಹೋಗುತ್ತವೆ. ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯವನ್ನು ಪ್ರಾಚೀನ ಪಂಥ, ಪುನರುಜ್ಜೀವನ ಪಂಥ ಮತ್ತು ಆಧುನಿಕ ಪಂಥ—ಎಂದು ಮೂರು ವಿಭಾಗ ಮಾಡಬಹುದು.

ಪ್ರಾಚೀನ ಪಂಥಕ್ಕೆ ಸೇರಿದವರು ತುಂಬ ಧಾರ್ಮಿಕ ಸ್ವಭಾವದವರು. ಅವರು ತಮ್ಮ ಧರ್ಮ ತತ್ವಗಳ ನಂಬಿಕೆಗಳನ್ನು ಜನಪ್ರಿಯವಾಗುವಂತೆ ಪ್ರತಿಪಾದಿಸಲು ಕಾದಂಬರಿಯನ್ನವಲಂಬಿಸಿದರು. ಪುನರುಜ್ಜೀವನ ಪಂಥದವರು ಸುತ್ತಮುತ್ತಲಿನ ಜಗತ್ತನ್ನು ನೋಡಿ ಕ್ರಾಂತಿಕಾರಕ ಮಾರ್ಗಗಳನ್ನು ಹಿಡಿದರು. ತಮ್ಮ ಸೃಷ್ಟ್ಯಾತ್ಮಕ ಪ್ರತಿಭೆಯನ್ನು ನೀತಿಬೋಧೆಗಾಗಿ ವಿನಿಯೋಗಮಾಡಿದರು. ಕೆಂಪುನಾರಾಯಣನ "ಮುದ್ರಾ ಮಂಜೂಷ" ವನ್ನು (೧೮೨೩) ಇದಕ್ಕೆ ಉದಾಹರಣೆಯಾಗಿ ಕೊಡಬಹುದು.

ಸ್ಪಷ್ಟವಾಗಿ ಧರ್ಮೋಪನ್ಯಾಸದ ಹಿಡಿತದಿಂದ ಸಾಹಿತ್ಯವನ್ನು ವಿಮೋಚನಗೊಳಿಸಿ ಜೀವನದ ಹೊಸ ಹಾದಿ ಮತ್ತು ಅದರ ವಿವಿಧ ಮಾರ್ಗಗಳನ್ನು ಪ್ರತಿಪಾದಿಸುವ ಕೆಲಸ ಆಧುನಿಕ ಪಂಥದವರ ಪಾಲಿಗೆ ಬಂದಿತು.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಮತ್ತೊಂದು ಕೊರತೆಯಿತ್ತು ಜೀವನದ ಸಾಮಾಜಿಕ ದೃಷ್ಟಿಕೋಣದ ಕಡೆಗೆ ಅದು ಏನೇನೂ ಗಮನಹರಿಸಲಿಲ್ಲ. ಅವರ ದೃಷ್ಟಿಯಲ್ಲಿ ಜೀವನಕ್ಕೆ ಎರಡನೆಯ ಸ್ಥಾನ ದೊರೆತಿದ್ದಿತು, ಮತ ವಿಚಾರಗಳೇ ಅದರ ಪರಮ ಗುರಿಯಾಗಿದ್ದವು. ಮತ ಹಾಗೂ ಮತೀಯ ನಂಬಿಕೆಯು

ಪ್ರಭಾವಶಾಲೀ ಹಿಡಿತದಿಂದ ಸಾಹಿತ್ಯವನ್ನು ಬಿಡಿಸುವುದು ಆಧುನಿಕ ಪಂಥದವರ ಸಾಧನೆಯಾಯಿತು.

ಪುಟ್ಟಣ್ಣ ಮತ್ತು ಕೆರೂರು ವಾಸುದೇವಾಚಾರ್ಯರು ಮಂತಾದ ಆಧುನಿಕ ಸಾಹಿತ್ಯದ ಆರಂಭ ಲೇಖಕರು ತಮ್ಮ ಕೃತಿಗಳಲ್ಲಿ ಜೀವನವನ್ನು ಪ್ರತಿಬಿಂಬಿಸಲು ಧೀರ ಪ್ರಯತ್ನಗಳನ್ನು ನಡೆಸಿದರು. ಆದರೆ ಅವರ ಕೃತಿಗಳು, ಅವರ ವ್ಯಾಪ್ತಿಯನ್ನು ಮಿತಗೊಳಿಸುವಂತಹ ವಿಶಿಷ್ಟ ಸಮಾಜಕ್ಕೆ ಸೇರಿದವಾಗಿದ್ದವು. ಜೀವನದ ಸ್ವತಂತ್ರ ಹಾಗೂ ಪೂರ್ಣ ಅಭಿವೃದ್ಧಿಗೆ ಅವರು ಸಂಪ್ರದಾಯ ರೀತಿಯಲ್ಲಿ ಬೆಳೆದುದೂ ಸಹ ಅಡ್ಡಿಯನ್ನುಂಟು ಮಾಡಿತು.

ಕಾರಂತ ಮತ್ತು ಅ. ನ. ಕೃ. ಈ ಇಬ್ಬರು ಲೇಖಕರು ಈ ಶತಮಾನದ ೩೦ ರಲ್ಲಿ ಕಾದಂಬರಿ ರಚನೆಗೆ ತೊಡಗಿ ಕನ್ನಡ ಕಾದಂಬರಿಗಳಿಗೆ ನಿರಂತರವಾದ ಪ್ರಾಮುಖ್ಯ ಸ್ಥಾನವನ್ನು ಗಳಿಸಿ ಕೊಟ್ಟರು. ಈ ಇಬ್ಬರು ನಾಟಕಕಾರರು ಹಾಗೂ ಪ್ರಯೋಗ ಪರೀಕ್ಷಕರು ತಮ್ಮ ವಿಶಾಲ ಅನುಭವವನ್ನು, ಸೂಕ್ಷ್ಮವೀಕ್ಷಣೆಯನ್ನು ತಮ್ಮ ಕಾದಂಬರಿಗಳಲ್ಲಿ ತಂದರು. ಕಾರಂತರ ಶೈಲಿಯು ಜನತೆಯ ಆಡುವ ಭಾಷೆಯನ್ನು ಪ್ರತಿಬಿಂಬಿಸುತ್ತದೆ. ಅವರ ಭಾಷೆಯು ಅವರ ಮೂಲೋದ್ದೇಶಕ್ಕೆ ತಕ್ಕುದಾಗಿದ್ದು ಓಜಸ್ಸು ಮತ್ತು ಹುರುಪನ್ನು ನೀಡುತ್ತದೆ.

ಅ. ನ. ಕೃ. ರವರ ವ್ಯಾಪ್ತಿಯು ಇನ್ನೂ ವಿಶಾಲವಾಗಿರುವುದು. ಅವರ ಸಮೃದ್ಧ ಬರವಣಿಗೆಯು ನಮ್ಮ ರಾಷ್ಟ್ರೀಯ ಹಾಗೂ ಸಾಮಾಜಿಕ ಜೀವನದ ಎಲ್ಲಾ ಪ್ರಮುಖ ದೃಷ್ಟಿಕೋಣಗಳನ್ನು ಸರಿಸುಮಾರಾಗಿ ವ್ಯಾಪಿಸಿದೆ. ಕುಶಲಕಲೆ, ಸಾಂಸ್ಕೃತಿಕ ಪರಂಪರೆ, ನವ ವಿಶ್ವರಚನೆಯಲ್ಲಿ ಭಾರತದ ಪಾತ್ರ ಇತ್ಯಾದಿ

ಹಲವು ವಸ್ತುಗಳನ್ನು ಅ. ನ. ಕೃ. ರವರು ಬಳಸಿಕೊಂಡಿರುವರು. ಅ. ನ. ಕೃ. ರವರು ಸರಳವಾದ ಉಲ್ಲಾಸಕರವಾದ ಸತ್ಯಪೂರ್ಣವಾದ ಹಾಗೂ ಓದುಗರನ್ನು ತದೇಕಚಿತ್ತರನ್ನಾಗಿ ಮಾಡುವ ಶೈಲಿಯಲ್ಲಿ ಬರೆಯುವರು.

ಈ ಇಬ್ಬರು ಲೇಖಕರ ಮೊದಲು ಕಥಾ ಸಾಹಿತ್ಯ ಕ್ಷೇತ್ರದಲ್ಲಿ ಕನ್ನಡ ಗದ್ಯವು ಇನ್ನೂ ಶೈಶವಾವಸ್ಥೆಯಲ್ಲಿಯೇ ಇದ್ದಿತೆಂಬುದನ್ನ ಜ್ಞಾಪಕದಲ್ಲಿಟ್ಟುಕೊಂಡಿರುವುದು ಮುಖ್ಯ. ಆಗ ಲೇಖಕರಿಗೆ ತಾವು ಅನುಸರಿಸಬೇಕಾದ ಮಾದರಿಗಳೇ ಇರಲಿಲ್ಲ. ಸೃಷ್ಟ್ಯಾತ್ಮಕ ಸಾಹಿತ್ಯದ ತೀವ್ರ ಸವಾಲನ್ನು ಎದುರಿಸಬೇಕಾಗಿತ್ತು. ಕಾರಂತ ಮತ್ತು ಅ. ನ. ಕೃ. ಈ ಸವಾಲನ್ನು ಎದುರಿಸಿದರು. ಮುಂದೆ ಬರುವ ಸಾಹಿತಿಗಳಿಗೆ ಅವರು ಮಾರ್ಗದೀವಿಗೆಗಳಾಗಿರುವರು.

*ತ. ರಾ. ಸು., ಕಟ್ಟೀಮನಿ, ಕೃಷ್ಣಮೂರ್ತಿ ಪುರಾಣಿಕ ತಮ್ಮ ಕೃತಿಗಳಿಂದ ನಮ್ಮ ಗಮನ ಸೆಳೆದಿದ್ದಾರೆ. ಚಿದ್ರದುರ್ಗದ ಇತಿಹಾಸವನ್ನವಲಂಬಿಸಿದ ತ. ರಾ. ಸು. ಅವರ ಕಾದಂಬರಿಗಳು ಸಮಾಜ ವೈಪರೀತ್ಯವನ್ನು ಬಯಲಿಗೆಳೆಯುವ ಕಟ್ಟೀಮನಿಯವರ ಕಾದಂಬರಿಗಳು, ಸಂಸಾರ ಜೀವನವನ್ನು ಚಿತ್ರಿಸುವ ಪುರಾಣಿಕರ ಕಾದಂಬರಿಗಳು ಕನ್ನಡ ಕಥಾಸಾಹಿತ್ಯದ ಬೆಳೆಯನ್ನು ಹೆಚ್ಚಿಸಿವೆ.

ಪ್ರಾಮುಖ್ಯವೆನಿಸಿದ ಒಂದೊಂದು ಕಾದಂಬರಿಯನ್ನಿತ್ತಿರುವ ಕು.ವೆಂ.ಪು., ಗೋಕಾಕ್ ಮತ್ತು ಚನ್ನಬಸವೇಶ್ವರ ಇವರುಗಳ ಹೆಸರನ್ನು ಇಲ್ಲಿ ಉಲ್ಲೇಖಿಸಬಹುದು. ಕು.ವೆಂ.ಪು. ರವರ ಕಾವ್ಯ ಕಾದಂಬರಿ, 'ಕಾನೂರು ಸುಬ್ಬಮ್ಮ', ಗೋಕಾಕರ 'ಇಜ್ಜೋಡು', ಚನ್ನಬಸವೇಶ್ವರರ 'ಕಳಾಪ್ರಪೂರ್ಣ' ಇವು ಜೀವನ ಹಾಗೂ ಪ್ರಕೃತಿಯ ವ್ಯಾಪಕ ಸಮೀಕ್ಷೆಗಳಾಗಿವೆ.

ಬೀಚಿಯವರ ಹಾಸ್ಯ ಪ್ರತಿಭೆ ಅವರ 'ಸತೀ ಸೂಳೆ', 'ಸರಸ್ವತಿ ಸಂಹಾರ' ಮತ್ತು 'ಖಾದಿ ಸೀರೆ' ಗಳಲ್ಲಿ ಪೂರ್ಣವಾಗಿ ಅಭಿವ್ಯಕ್ತ ಗೊಂಡಿವೆ. ನಿರಂಜನರು ಸಮೃದ್ಧ ಬರೆಹಗಾರರು.

ಮಹಿಳಾ ಲೇಖಕರಲ್ಲಿ ತ್ರಿವೇಣಿ, ಅನುಪಮಾ ಇವರ ಹೆಸರುಗಳನ್ನು ಹೇಳಬಹುದು. ಅವರ ಸತತ ಪ್ರಯತ್ನಗಳು ನಮ್ಮ ಅನೇಕ ಸಾಮಾಜಿಕ ಸಮಸ್ಯೆಗಳನ್ನು 'ಮಹಿಳೆಯರ ದೃಷ್ಟಿಕೋಣ'ದಲ್ಲಿ ದರ್ಶನ ಮಾಡಿಸುತ್ತವೆ.

ಕನ್ನಡ ಜನತೆ, ಕಾದಂಬರಿ ಕ್ಷೇತ್ರದಲ್ಲಿ ಸಾಧಿಸಲಾಗಿರುವ ಸಾಧನೆಗಾಗಿ ಹೆಮ್ಮೆ ಪಟ್ಟುಕೊಳ್ಳುವುದು ಸಮಂಜಸವಾಗಿರುವುದು. ಅವುಗಳ ವ್ಯಾಪ್ತಿ ಹಾಗೂ ಗುಣಾಂಶಗಳು ಉತ್ತಮ ಮಟ್ಟವನ್ನೇರಿದೆ. ಮಹತ್ಸಾಧನೆಯ ಭವಿಷ್ಯವನ್ನು ತೋರಿಸಿ ಕೊಟ್ಟಿವೆ.

ವಿವರಣೆ

ಅಖಿಲ ಭಾರತ ಆಕಾಶವಾಣಿ ಕೇಂದ್ರದವರು ೧೯೫೭ ರ ಏಪ್ರಿಲ್ ೫ ರಿಂದ ೭ ರ ವರೆಗೆ ದೆಹಲಿಯಲ್ಲಿ ನಡೆಸಿದ ದ್ವಿತೀಯ ಸಾಹಿತ್ಯ ಸಮಾರೋಹಕ್ಕೆ 'ಇಂದಿನ ಕಥಾ ಸಾಹಿತ್ಯದ (ಕನ್ನಡ)' ಬಗ್ಗೆ ನಾನು ಬರೆದು ಕಳುಹಿಸಿದ ಲೇಖನ. ಭಾರತೀಯ ಭಾಷೆಗಳೆಲ್ಲದರ ಕಥಾ ಸಾಹಿತ್ಯ ಪರಿಚಯ ಮಾಡಿಕೊಡುವ ಆ ಸಮಾರೋಹದಲ್ಲಿ ಕನ್ನಡಕ್ಕೆ ಮೀಸಲಾಗಿದ್ದುದು ಐದೇ ನಿಮಿಷ. ಈ ಅವಧಿಯಲ್ಲಿ ಕನ್ನಡದ ಕಥಾಸಾಹಿತ್ಯದ ವಿಸ್ತೃತ ನಿರೂಪಣೆಯಾಗಲಿ, ಎಲ್ಲ ಕಥೆಗಾರರ ನಾಮೋಲ್ಲೇಖನವಾಗಲಿ ಸಾಧ್ಯವಿಲ್ಲವಷ್ಟೆ! ಕನ್ನಡ ಕಥಾ ಸಾಹಿತ್ಯದ ಹೆಗ್ಗುರುತುಗಳನ್ನಷ್ಟೇ ನಾನು ನಿರ್ದೇಶಿಸಿ, ಹೊಸ ಹಾಗೂ ಹಳೆಯ ಲೇಖಕರು ಕೆಲವರ ಹೆಸರನ್ನು ಮಾತ್ರ ಉಲ್ಲೇಖಿಸಿದೆ. ಇದು ಅನವಶ್ಯಕ ಚರ್ಚೆಗೆ

ಅವಕಾಶಕೊಟ್ಟಿತು. ಬೆಂಗಳೂರಿನ ಒಂದು ದೈನಂದಿನ ಪತ್ರಿಕೆ, ಒಂದು ವಾರಪತ್ರಿಕೆ ನನ್ನ ಅವಹೇಳನಕ್ಕೆ ಹಲವಾರು ಕಾಲಂಗಳನ್ನು ಮೀಸಲಾಗಿಟ್ಟವು. ಕೆಲವು ನಿವೃತ್ತ ಸಾಹಿತಿಗಳು ಭರ್ತ್ಸನೆಯ ಕಾಯಕ ಕೈಗೊಂಡು, ಮನಸದಣಿಯುವಷ್ಟು ನನ್ನನ್ನು ಬಯ್ದು ತೃಪ್ತಿಪಟ್ಟುಕೊಂಡರು. ನಾನು ಹಲವರ ಹೆಸರು ಹೇಳಲಿಲ್ಲವೆಂಬುದೇ ದೊಡ್ಡ ಆರೋಪ. ಇದೇ ವಿಷಯವನ್ನು ಕುರಿತು, ಬೇರೆ ಸಂದರ್ಭಗಳಲ್ಲಿ ನಾನು ಬರೆದಿರುವ ಲೇಖನಗಳಲ್ಲಿ ಹೆಸರಿಸಬಹುದಾದವರೆಲ್ಲರ ಹೆಸರುಗಳನ್ನು ನಾನು ಉಲ್ಲೇಖಿಸಿರುವುದನ್ನು ಓದುಗರು ಗಮನಿಸಬಹುದು.

ಈ ಲೇಖನವನ್ನು ನಾನು ಬರೆದುದು ಇಂಗ್ಲೀಷಿನಲ್ಲಿ. ಅನುವಾದಮಾಡಿ ಪತ್ರಿಕೆಗಳಲ್ಲಿ ಪ್ರಕಟನೆಗೆ ಕಳಿಸಿದವರು 'ಪ್ರೆಸ್ ಇನ್‌ಫರ್ಮೇಷನ್ ಬ್ಯೂರೋ' ಅಧಿಕಾರಿಗಳು. ಲೇಖನದ ಪ್ರತಿ ಮಾಡಿದ ಬೆರಳಚ್ಚುಗಾರರು (Typist) ಅಜಾಗರೂಕತೆಯಿಂದ ಒಂದು ವಾಕ್ಯವೃಂದವನ್ನು ಬಿಟ್ಟುಬಿಟ್ಟರು. ಆ ವಾಕ್ಯವೃಂದವನ್ನು ಲೇಖನದಲ್ಲಿ ಸೇರಿಸಿರುವುದಲ್ಲದೆ, ಅದರ ಮೂಲವನ್ನು ಕೆಳಗೆ ಕಾಣಿಸಿದ್ದೇನೆ.

---

* "Tarasu, Kattimani and Puranik are three other novelists who come for serious consideration. Tarasu with his cycle of historical novels based on the tumultuous period of Chitradurga History, Kattimani with his merciless exposure of socical and religious Tartuffs and Puranik with his simple domestic stories have enriched kannada fiction."

ನವರತ್ನ ರಾಮರಾಯರು

ಕೆಲವು ಮಹನೀಯರ ವ್ಯಕ್ತಿತ್ವ ಅವರ ಕೃತಿಗಳಿಗಿಂತ ಹಿರಿದಾಗಿರುತ್ತದೆ. ಅವರ ಅಗಾಧ ಚೈತನ್ಯದ ಒಂದಂಶವಷ್ಟೇ ಅವರ ಕೃತಿಗಳಲ್ಲಿ ಅಭಿವ್ಯಕ್ತವಾಗುವುದು. ವಿವೇಕಾನಂದರು, ಅರವಿಂದರು, ಗಾಂಧೀಜಿ, ಜವಾಹರಲಾಲ್ ಇವರ ಜೀವನ, ಕೃತಿಯನ್ನು ನಾವು ಹೋಲಿಸಿ ನೋಡಿದರೆ ಈ ಅಂಶ ವಿದಿತ ವಾಗುತ್ತದೆ.

ನವರತ್ನ ರಾಮರಾಯರು ಈಗ್ಗೆ ನಾಲ್ಕು ವರ್ಷಗಳ ಹಿಂದೆ ಪ್ರಕಟಿಸಿದ 'ಕೆಲವು ನೆನಪುಗಳು' ಕನ್ನಡ ಸಾರಸ್ವತ ಪ್ರಪಂಚ ದಲ್ಲಿ ಒಂದು ಮೈಲಿಗಲ್ಲು; ಕನ್ನಡ ವಾಗ್ದೇವಿಯ ಮಕುಟಮಣಿ. ಆ ಕೃತಿ ಕೂಡ ರಾಮರಾಯರ ತುಂಬುಜೀವನದ ಪೂರ್ಣ ಕಲ್ಪನೆ ಯನ್ನು, ಸಮಗ್ರ ಚಿತ್ರವನ್ನು ಕೊಡಲಾರದಾಗಿದೆ.

ರಾಮರಾಯರ ಎಂಭತ್ತೆರಡು ವರ್ಷ ಬಾಳ್ವೆಯಲ್ಲಿ ಅವರು ಗಳಿಸಿರುವ ಅನುಭವ, ಎಳೆಹರೆಯದಿಂದಲೂ ಜೀವನವನ್ನು ಧೈರ್ಯವಾಗಿ ಎದುರಿಸುವ ದಾರ್ಢ್ಯ, ಆತ್ಮಗೌರವ ರಕ್ಷಣೆಗಾಗಿ ಸಕಲವನ್ನೂ ಬಲಿದಾನವಾಗಿ ಅರ್ಪಿಸುವ ಧೀರಕ್ಷತ್ರಿಯ ಮನೋ ಭಾವ ಇವುಗಳೇ ಶ್ರೇಷ್ಠ ಕಾದಂಬರಿಯಂತೆ ಮನೋಹರವಾಗಿವೆ.

ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿಯೂ ಮದರಾಸು ಲಾ ಕಾಲೇಜಿನಲ್ಲಿಯೂ ಶಿಕ್ಷಣ ಮುಗಿಸಿದ ರಾಯರು ಕೆಲವು ಕಾಲ ಸೇಲಮ್ಮಿನಲ್ಲಿ ವಕೀಲ ವೃತ್ತಿಮಾಡಿ ೧೯೦೪ರಲ್ಲಿ ಮೈಸೂರು ಸರ್ಕಾರದ ಪ್ರೊಬೇಷನರಿ ಅಮಲ್ದಾರರಾಗಿ ಸೇರಿ, ಕಾಲಕ್ರಮೇಣ ಅಸಿಸ್ಟೆಂಟ್ ಕಮೀಷನರ್, ಡೆಪ್ಯುಟಿ ಕಮೀಷ

ನರ್, ಡೆವಲೆಪ್‌ಮೆಂಟ್ ಸೆಕ್ರೆಟರಿ ಸ್ಥಾನಗಳನ್ನಲಂಕರಿಸಿ, ಕೊನೆಗೆ ಇಂಡಸ್ಟ್ರೀಸ್ ಮತ್ತು ಕಾಮರ್ಸ್ ಇಲಾಖೆಯ ಡೈರೆಕ್ಟ ರಾಗಿದ್ದು ೧೯೩೩ರಲ್ಲಿ ಕೆಲಸದಿಂದ ನಿವೃತ್ತರಾದರು.

ಮೈಸೂರಿನ ವಿಶ್ವವಿಖ್ಯಾತಿಗೆ ಕಾರಣವಾಗಿರುವ ರೇಷ್ಮೆ ಕೈಗಾರಿಕೆಯ ಪುರೋಭಿವೃದ್ಧಿಗೆ ರಾಯರು ಸಲ್ಲಿಸಿದ ಸೇವೆ ಅತ್ಯಮೋಘವಾದುದು. ಇವರು ಅಸಿಸ್ಟೆಂಟ್ ಕಮೀಷನರ್ ಆಗಿದ್ದಾಗಲೇ ರೇಷ್ಮೆ ಕೈಗಾರಿಕೆಯ ಜೀರ್ಣೋದ್ಧಾರ ಕೆಲಸಕ್ಕೆ ಸರ್ಕಾರದವರು ನೇಮಿಸಿದ್ದರು. ಮೈಸೂರಿನ ಲಕ್ಷಾಂತರ ಜನ ರಿಗೆ ಜೀವನಮಾರ್ಗ ಕಲ್ಪಿಸಿದ ರೇಷ್ಮೆಕೈಗಾರಿಕೆ ಕಾರಣಾಂತರ ಗಳಿಂದ ಅಧೋಗತಿಗಿಳಿದಿತ್ತು—ಹೊರಗಿನಿಂದ ಬಂದ ನಿಪುಣರೂ ರೋಗದ ನಿಧಾನ ಮಾಡಿ, ಚಿಕಿತ್ಸಾಕ್ರಮ ಸೂಚಿಸಲು ಅಸಮರ್ಥ ರಾದರು. ರಾಮರಾಯರು ಈ ಕೈಗಾರಿಕೆಯ ಆರ್ಥಿಕ, ವೈಜ್ಞಾನಿಕ ಸಮಸ್ಯೆಗಳನ್ನು ವಿಚಾರಮಾಡಿ, ವೃತ್ತಿಕಾರರ ಕಷ್ಟ ಸುಖಗಳನ್ನರಿತು, ಕೈಗಾರಿಕೆಯ ಪ್ರಗತಿಗೂ ಭದ್ರತೆಗೂ ಆವಶ್ಯಕ ವಾದ ಸೂಚನೆಗಳನ್ನಿತ್ತರು. ಮೈಸೂರು ಸರ್ಕಾರದವರು ರೇಷ್ಮೆ ಇಲಾಖೆಯೊಂದನ್ನು ಹುಟ್ಟುಹಾಕಿ, ರಾಮರಾಯರನ್ನೇ ಅದರ ಮುಖ್ಯಾಧಿಕಾರಿಗಳನ್ನಾಗಿ ನೇಮಿಸಿದರು. ರಾಮರಾಯರ ಹತ್ತುವರ್ಷಗಳ ಸತತ ಪ್ರಯತ್ನದ ಫಲವಾಗಿ ರೇಷ್ಮೆ ಕೈಗಾರಿಕೆ ಚಿರಸ್ಥಾಯಿಯಾಗಿ ಉಳಿದುದಲ್ಲದೆ, ಮೈಸೂರಿನ ಖ್ಯಾತಿಯನ್ನು ವಿಶ್ವದಾದ್ಯಂತ ಪಸರಿಸುವ ಸಾಧನವಾಯಿತು. ಮೈಸೂರಿನ ಪಿಂಗಾಣಿ ಕಾರ್ಖಾನೆಯ ಸ್ಥಾಪಕರೂ ರಾಮರಾಯರೇ!

೧೯೩೩ರಲ್ಲಿ ರಾಮರಾಯರು ಕೆಲಸದಿಂದ ನಿವೃತ್ತರಾದ ಮೇಲೆ ಮೈಸೂರು ಸಿಲ್ಕ್ ಫಿಲೇಚರ್ಸ್ ಸಂಸ್ಥೆಯನ್ನು ಸ್ಥಾಪಿಸಿ ಅದರ ಅಧ್ಯಕ್ಷರಾಗಿ ಗಣನೀಯ ಸೇವೆ ಸಲ್ಲಿಸಿದರು. ಕೇಂದ್ರ

ಸರ್ಕಾರ ನೇಮಿಸಿದ 'ಸಿಲ್ಕ್‌ಪ್ಯಾನಲ್' ಅಧ್ಯಕ್ಷರಾಗಿದ್ದ ರಾಮ ರಾಯರ ಪ್ರಯತ್ನದಿಂದಲೇ 'ಸೆಂಟ್ರಲ್ ಸಿಲ್ಕ್ ಬೋರ್ಡ್' ಸ್ಥಾಪನೆಯಾದುದು.

ಮೈಸೂರಿನ ದಿವಾನರಾಗಿದ್ದ ಸರ್. ಮಿರ್ಜಾ ಇಸ್ಮಾಯಿಲರು 'ರೌಂಡ್ ಟೇಬಲ್ ಕಾನ್ಫರೆನ್ಸ್'ಗೆ ಲಂಡನ್ನಿಗೆ ಹೋದಾಗ ರಾಮರಾಯರನ್ನು ಸಲಹೆಗಾರರಾಗಿ ಜತೆಯಲ್ಲಿ ಕರೆದುಕೊಂಡು ಹೋಗಿದ್ದರು.

ಶ್ರೀಯುತರು ದೀರ್ಘಕಾಲದ ಸೇವೆಯನ್ನು ಮೆಚ್ಚಿಕೊಂಡ ಆಳಿದ ಮಹಾಸ್ವಾಮಿಯವರಾದ ಶ್ರೀಮನ್ನಾಲ್ಮಡಿ ಕೃಷ್ಣರಾಜ ಒಡೆಯರವರು, ಇವರಿಗೆ 'ರಾಜಸೇವಾಪ್ರಸಕ್ತ' ಬಿರುದನ್ನು ದಯಪಾಲಿಸಿ ಗೌರವಿಸಿದರು.

ಸರ್ಕಾರಿ ನೌಕರಿಯಲ್ಲೇ ಜೀವಮಾನ ಸವೆಸಿದರೂ, ರಾಮರಾಯರಷ್ಟು ಆಳವಾಗಿ ಸಾಹಿತ್ಯಾಭ್ಯಾಸ ಮಾಡಿರುವವರು ಶಿಕ್ಷಣ ಕ್ಷೇತ್ರದಲ್ಲಿಯೂ ದೊರೆಯುವುದು ವಿರಳ. ವಿಶ್ವದ ಹಲವಾರು ಕವಿಗಳ ಮೇಲೆ ಅಧಿಕಾರವಾಣಿಯಿಂದ ರಾಯರು ಮಾತನಾಡಲು ಸಮರ್ಥರಾಗಿದ್ದಾರೆ.

ಈಗ್ಗೆ ಸುಮಾರು ಮೂವತ್ತು ವರ್ಷಗಳ ಹಿಂದೆ ರಾಮರಾಯರ 'ಲಕ್ಷ್ಮಣರಾಯನ ಭಾಗ್ಯ' ಎನ್ನುವ ಕಥೆ 'ಪ್ರಬುದ್ಧ ಕರ್ಣಾಟಕ' ಪತ್ರಿಕೆಯಲ್ಲಿ ಪ್ರಕಟವಾಯಿತು. ಅದನ್ನು ನನ್ನ 'ಕಾಮನ ಬಿಲ್ಲು' (೧೯೩೩) ಕತಾಸಂಗ್ರಹದಲ್ಲಿ ಪ್ರಕಟಿಸಿ

"ಕನ್ನಡ ಕಥಾ ಪ್ರಪಂಚವು ಪರೀಕ್ಷೆಯಲ್ಲಿ ತೇರ್ಗಡೆ ಹೊಂದದ ಹುಡುಗರು, ಶೃಂಗಾರವನ್ನರಿಯದ ತರುಣರು, ಕಣ್ಣಿಲ್ಲದ ಭಿಕ್ಷುಕರು—ಇವರ ಕಥೆಗಳಿಂದ ಕುಸಿಯುತ್ತಿದ್ದಾಗ 'ಲಕ್ಷ್ಮಣರಾಯನ ಭಾಗ್ಯ' ದಂತಹ ವಸ್ತುವಿನ ಕಡೆಗೆ ನವರತ್ನ

ರಾಮರಾಯರು ಬರಹಗಾರರ ಗಮನವನ್ನು ಸೆಳೆದರು. ಇದೂ ಒಂದು ಹಳ್ಳಿಯ ಕಥೆ—ನಾವೇ ಅನೇಕಸಾರೆ ಜನರ ಬಾಯಿಂದ ಕೇಳಿಯೂ ಇರಬಹುದು. ಆದರೆ ಬರಹಗಾರರು ಪುನರುಜ್ಜೀವನಗೊಳಿಸಿರುವ ಗಾಢವಾತಾವರಣ, ನರಬಲಿ ಪದ್ಧತಿಯ ಹೃದ್ವೇಧಕ ಚಿತ್ರ, ಲಕ್ಷ್ಮಣರಾಯ, ದಸ್ತಗಿರಿ ಸಾಹೇಬರು ಮೊದಲಾದ ಪಾತ್ರಗಳು ಒಬ್ಬ ಪ್ರತಿಭಾವಂತ ಶಿಲ್ಪಿಯ ಕುಶಲ ಕಲೆಯೆಂದು ಓದುಗರಿಗನಿಸದಿರದು."

ಎಂದು ಅಭಿಪ್ರಾಯಪಟ್ಟಿ.

'ಲಕ್ಷಣರಾಯನ ಭಾಗ್ಯ' ಕಥೆಯನ್ನೊಳಗೊಂಡ ರಾಮರಾಯರ ಕಥಾಸಂಗ್ರಹವೊಂದು ಈಚೆಗೆ ಪ್ರಕಟವಾಗಿದೆ.

ರಾಮರಾಯರು ಕನ್ನಡ ಸರಸ್ವತಿಯ ಕೊರಳಿಗೆ ಅರ್ಪಿಸಿರುವ ಮುಕ್ತಾಹಾರ 'ಕೆಲವು ನೆನಪುಗಳು' ಗ್ರಂಥ. ಆ ತಲೆಮಾರಿನ ಜನ ಆಡುತ್ತಿದ್ದ ಸಕಲಭಾಷಾ ಸಂಮಿಶ್ರವಾದ ಕನ್ನಡದಲ್ಲಿ ಬರೆಯಲ್ಪಟ್ಟಿರುವ ಈ ಗ್ರಂಥ ರಾಮರಾಯರ ವಿಶಾಲಾನುಭವ, ಸೂಕ್ಷ್ಮದರ್ಶನ, ಹಾಸ್ಯಪ್ರಿಯತೆ, ಜೀವನಾನುರಾಗಗಳ ದ್ಯೋತಕವಾಗಿರುವುದಲ್ಲದೆ ಮೂರು ದಶಕಗಳ ನಮ್ಮ ಜನರ ಬಾಳ್ವೆ, ಆಗುಹೋಗುಗಳು, ಸಂಸ್ಕೃತಿಯ ಕೈಪಿಡಿಯಂತಿದೆ. ಹುಟ್ಟು ಕಥೆಗಾರರಾದ ರಾಮರಾಯರು, ಅಧಿಕಾರಿಗಳ ದೌರ್ಜನ್ಯದ ಕಥೆಗಳನ್ನೇ ಹೇಳಲಿ, ಊರಹಿರಿಯರ ಆಸೆಯಾಮಿಷಗಳ ಇತಿವೃತ್ತವನ್ನೇ ನಿರೂಪಿಸಲಿ ಓದುಗರನ್ನು ಸೆರೆಹಿಡಿಯುತ್ತಾರೆ.

'ಸಂಸ್ಕೃತಿ' ಶಬ್ದದ ವ್ಯಾಖ್ಯೆ ಮಾಡುತ್ತಾ ರಾಮರಾಯರು ಒಂದು ಕಡೆ ಹೀಗೆ ಅಪ್ಪಣೆ ಕೊಡಿಸಿದ್ದಾರೆ :

"ಸಂಸ್ಕೃತಿ ಎಂಬುದು ಆತ್ಮ ವ್ಯವಸಾಯದ ಫಲ.... ಸಂಸ್ಕೃತಿಯೆಂದರೆ ಮನುಷ್ಯನು ತನ್ನಲ್ಲಿರುವ ಉತ್ತಮೋತ್ತಮ

ಗುಣಗಳನ್ನು ಅಭಿವೃದ್ಧಿಗೆ ತರುವುದಕ್ಕೂ, ಕೀಳುಗುಣಗಳನ್ನು ಹತೋಟಿಗೆ ತರುವುದಕ್ಕೂ ಎಡಬಿಡದೆ ಮಾಡುತ್ತಿರುವ ಪ್ರಯತ್ನದ ಫಲ. ಸಂಸ್ಕೃತಿ ಆತ್ಮಕ್ಷೇತ್ರದ ಆಬಾದು ಸ್ಥಿತಿ"

ಆತ್ಮಕ್ಷೇತ್ರದ ಆಬಾದು ಯಾವ ಬಗೆಯಲ್ಲಿ ಸಾಗುತ್ತದೆ ಎಂಬುದರ ಸಾಕ್ಷೀರೂಪವಾಗಿರುವ ಮಹೋನ್ನತ ಕೃತಿ 'ಕೆಲವು ನೆನಪುಗಳು'.

ರಾಮರಾಯರು 'ಸರಕು' ಕೆಲವು ನೆನಪುಗಳಿಗೇ ಮುಗಿದಿಲ್ಲ. ಈ ಗ್ರಂಥ ಅವರ ಅನುಭವ ಭಂಡಾರದ ಪೂರ್ವಾರ್ಧ. ಉತ್ತರಾರ್ಧವನ್ನೂ ಬರೆದು ರಾಮರಾಯರು ಕನ್ನಡಿಗರನ್ನು ಕೃತಾರ್ಥರನ್ನಾಗಿಸಬೇಕು.

ಎಂಬತ್ತೆರಡು ವರ್ಷ ಪ್ರಾಯದ ಈ ವಯೋವೃದ್ಧ, ಜ್ಞಾನವೃದ್ಧ ಹಿರಿಯರು ಚಿರಕಾಲ ಬಾಳಿ ಬದುಕಿ ತಮ್ಮ ನಗೆಸಂಜೀವಿನಿಯನ್ನು ಇನ್ನಷ್ಟು-ಮತ್ತಷ್ಟು-ನಾಡವರಿಗೆ ಹಂಚಲಿ ಎಂದು ಹಾರೈಸುತ್ತೇನೆ.

ಕಲೆಯಲ್ಲಿ ಹೂ-ಬಳ್ಳಿ

ನಾಯಿಗಳನ್ನು ಮಕ್ಕಳನ್ನು ಪ್ರೀತಿಸದಿದ್ದವನು ನಂಬಿಕೆ ಗರ್ಹನಲ್ಲ ಎಂಬುದು ಜನಜನಿತವಾಗಿ ಹಬ್ಬಿರುವ ತಿಳುವಳಿಕೆ. ಇವುಗಳ ಜತೆಗೆ ಹೂ-ಬಳ್ಳಿಗಳನ್ನೂ ಸೇರಿಸಿಕೊಳ್ಳಬಹುದು. ಮಾನವೀಯ ಜೀವನದಲ್ಲಿ--ಅದರಲ್ಲಿಯೂ ಭಾರತೀಯರ ಜೀವನ ದಲ್ಲಿ ಹೂ ಬಳ್ಳಿಗಳು ಹಾಸು ಹೊಕ್ಕಾಗಿ ಹೊಂದಿಕೊಂಡಿವೆ. ಕೆಟ್ಟದ್ದು-ಒಳ್ಳೆಯದು ಎರಡಕ್ಕೂ ಹೂ ಅತ್ಯಗತ್ಯ; ಮಗುವಿನ ನಾಮಕರಣಕ್ಕೂ ಹೂವು ಬೇಕು, ಸ್ಮಶಾನಯಾತ್ರೆಗೂ ಹೂವು ಬೇಕು. 'ಯಾತರದು ಹೂವೇನು, ನಾತರದು ಸಾಲದೇ ; ಹೇನು ಬಲ್ಲುದೆ ಮುಡಿದ ಹೂವಿನ ಪರಿಮಳವ? ಹೂಮಾರಿದ ಅಂಗಡಿಯಲ್ಲಿ ಹುಲ್ಲು ಮಾರಿದಂತೆ ; ಹೂಮಾರಿದ ಊರಿನಲ್ಲಿ ಹುರಿಮಾರಬಾರದು ; ಬಾಡಿದ ಹೂ ನಾಡಿನವರಿಗೇಕೆ?' ಮೊದ ಲಾದ ಗಾದೆಗಳು ಹೂವಿನ ಪ್ರಾಶಸ್ತ್ಯವನ್ನು ಎತ್ತಿತೋರಿಸಿವೆ.

ಪ್ರಕೃತಿ ಶೋಭೆಯ ನಿಜಧಾಮವೆನಿಸಿರುವ ಭಾರತ ವರ್ಷದಲ್ಲಿ ಹೂವು ರಸಿಕ ಮನರಂಜಿನಿಯಾಗಿದ್ದುದಲ್ಲದೆ, ಭಾರ ತೀಯರ ದರ್ಶನ ದೃಷ್ಟಿಯ ಸಂಕೇತವೂ ಆಗಿತ್ತು. ಭಾರತೀಯ ಕಾವ್ಯಗಳಂತೂ ಮಾನವ ಜೀವನವನ್ನು ಅನುಲಕ್ಷಿಸಿರುವಷ್ಟೇ ಸೂಕ್ಷ್ಮವಾಗಿ, ಗಾಢವಾಗಿ, ಹೂವಿನ ಬಾಳು-ಬದುಕನ್ನೂ ಗಮ ನಿಸಿವೆ. ಕವಿಸಾರ್ವಭೌಮ ಕಾಳಿದಾಸ ಹೂ ಬಳ್ಳಿಗಳೊಂ ದಿಗೇ ಬೆಳೆದಿದ್ದ ಮುಗ್ಧಮಧುರೆ ಶಕುಂತಲೆಯ ವಿಲಾಸ, ವಿಭ್ರಮವನ್ನು ಬಣ್ಣಿಸುತ್ತಾ, ಅವಳೇ ನೀರೆರೆದು ಬೆಳೆಸಿದ್ದ ನವ ಮಲ್ಲಿಕಾಲತೆಗೂ ಅವಳಿಗೂ ಇದ್ದ ದಿವ್ಯಾನುಬಂಧವನ್ನು ಹೃದ ಯಂಗಮವಾಗಿ ಬಣ್ಣಿಸಿದ್ದಾನೆ. ಹೂವನ್ನೇ ನಿಮಿತ್ತ ಮಾಡಿ

ಕೊಂಡ ರಸಿಕಚಕ್ರಿ ಕಾಳಿದಾಸ 'ಕುಮಾರ ಸಂಭವ' ದಲ್ಲಿ ಆಧ್ಯಾತ್ಮಿಕಾನಂದಾನುಭೂತಿ ಪಡೆದಿದ್ದಾನೆ. ಕಮಲಮುಖಿಯೂ ಕಮಲನಯನೆಯೂ ಆದ ಗಿರಿಜಾದೇವಿ ತಪಸ್ಸಿಗೆ ಕುಳಿತಿದ್ದಾಳೆ. ಅವಳ ಸಿರಿಮುಡಿಯಲ್ಲಿ ನವಪದ್ಮಪುಷ್ಪಗಳು ವಿರಾಜಿಸುತ್ತಿವೆ. ಭುವನ ಮೋಹಿನಿಯಾದ ಭುವನೇಶ್ವರಿ ಉಗ್ರನಿಯಮಗಳನ್ನಾಚರಿಸುತ್ತಾ ತಪೋಮಗ್ನಳಾಗಿದ್ದಾಳೆ, ಅವಳ ಆಹಾರವೆಲ್ಲಾ ಕಮಲದ ಹೂ, ದಂಟುಗಳು. ಕಮಲ ಸೌರಭದಿಂದ ಆಕರ್ಷಿತವಾದ ಮರಿದುಂಬಿಗಳು ಅವಳ ತುಟಿ, ಗಲ್ಲಗಳಿಗೆ ಮುದ್ದಿಡುವೆಯಂತೆ-ಅವೂ ಕಮಲಗಳೆಂಬ ಭ್ರಾಂತಿಯಿಂದ; ಕಾಳಿದಾಸನಲ್ಲದೆ ಇನ್ನು ಯಾರು ಇಂಥ ಚಿತ್ರ ಕೊಡಬಲ್ಲರು.

ಹೂಗಳಲ್ಲಿ ಭಾರತೀಯರಿಗೆ ಅತ್ಯಂತ ಪ್ರೀತ್ಯಾಸ್ಪದವಾದವು—ಮಲ್ಲಿಕಾ, ಚಂಪಕಾ, ಬಕುಳ, ಕೇತಕಿ, ಇರವಂತಿ, ಪದ್ಮ. ಇವುಗಳಲ್ಲಿ ಪದ್ಮಪುಷ್ಪ ಭಾರತ ಸಂಸ್ಕೃತಿಯಲ್ಲಿ ವಿಶಿಷ್ಟ ಸ್ಥಾನ ಪಡೆದಿರುವುದಲ್ಲದೆ, ಭಾರತೀಯರ ಸಂಸ್ಕೃತಿಯ ಸಂಕೇತವಾಗಿ ವಿರಾಜಿಸಿದೆ.

ಸೃಷ್ಟಿಯ ಅಸ್ತಿಭಾರವೇ ಪದ್ಮಪುಷ್ಪವೆಂದು ಋಗ್ವೇದ ಸಾರಿದೆ. ಪದ್ಮವೇ ಭೂಮಿಯ ಸಂಕೇತವೆಂದೂ, ನೀರಿನ ಮೇಲೆ ಪಸರಿಸಿರುವ ಪದ್ಮದಲ್ಲಿಯೇ ಅಗ್ನಿಹುಟ್ಟುವುದೆಂದೂ ಸಂಹಿತೆಗಳು ತಿಳಿಸಿವೆ. ಸ್ವರ್ಗದ ಬೆಳಕಿನ ಮೊತ್ತವೇ ಪದ್ಮಪುಷ್ಪವೆಂದು ಪಂಚವಿಂಶ ಬ್ರಾಹ್ಮಣ ಅಭಿಪ್ರಾಯ ಪಟ್ಟಿದೆ.

ಪರಿಶುದ್ಧತೆ, ತೇಜಸ್ಸು, ಬೆಳಕುಗಳ ಸಂಕೇತವಾಗಿ ಪದ್ಮಪುಷ್ಪ ವೇದಗಳ ಕಾಲದಲ್ಲಿಯೇ ಅಂಗೀಕರಿಸಲ್ಪಟ್ಟಿತೆಂಬುದು ನಿರ್ವಿವಾದ. ಶ್ರೀಲಕ್ಷ್ಮಿಗೂ ಪದ್ಮಪುಷ್ಪಕ್ಕೂ ನಿಕಟ ಸಂಬಂಧ

ಕ್ರಿ. ಪೂ. ಎರಡನೆಯ ಶತಮಾನದಲ್ಲಿಯೇ ಏರ್ಪಟ್ಟಿತು. ಶ್ರೀ ಸೂಕ್ತದಲ್ಲಿ ಲಕ್ಷ್ಮಿಯನ್ನು ಪದ್ಮಿನಿ, ಪದ್ಮೇಸ್ಥಿತಾ, ಪದ್ಮವರ್ಣ, ಪದ್ಮಸಂಭವೆ, ಪದ್ಮಾಕ್ಷಿ, ಪದ್ಮದಲಾಯತಾಕ್ಷಿ, ಪದ್ಮಉರು, ಪದ್ಮಾನನಾ ಎಂದು ಸಂಬೋಧಿಸಲಾಗಿದೆ.

ಬೌದ್ಧಯುಗದಲ್ಲಿಯೂ ಪದ್ಮ ಪುಷ್ಪ ಪರಿಶುದ್ಧತೆಯ ಸಂಕೇತವಾಗಿದೆ. ಸಂಯುತ್ತ ನಿಕಾಯದಲ್ಲಿ 'ನೀರಿನಲ್ಲೇ ಹುಟ್ಟಿ ನೀರಿನಲ್ಲೇ ಬೆಳೆದರೂ, ಮೇಲಕ್ಕೆದ್ದು ನಿಂತು, ನೀರಿನ ಸಂಪರ್ಕ ವಿಲ್ಲದ ಪದ್ಮದ ಹಾಗೆ, ತಥಾಗತ ಲೋಕದಲ್ಲಿಯೇ ಹುಟ್ಟಿ ಬೆಳೆದರೂ ಲೋಕಾತೀತನಾಗಿರುತ್ತಾನೆ.' ಎಂದು ವಿವರಿಸಿದೆ. ಕ್ರಿ.ಶ. ಎರಡನೆಯ ಶತಮಾನಕ್ಕೆ ಸೇರಿದ ಗಾಂಧಾರ ಶಿಲ್ಪಗಳಲ್ಲಿ ಬುದ್ಧ ಕಮಲಾಸನನಾಗಿರುವುದು ಕಂಡುಬರುತ್ತದೆ. ಅಜಂತೆಯ ಮೊದಲನೆಯ ಗುಹೆಯಲ್ಲಿ ಚಿತ್ರಿತವಾಗಿರುವ 'ಬೋಧಿಸತ್ತ್ವ ಪದ್ಮಪಾಣಿ'ಯಲ್ಲಿ ಪದ್ಮ ಪುಷ್ಪಕ್ಕೆ ವಿಶೇಷ ಪ್ರಾಶಸ್ತ್ಯ ಕೊಡಲಾಗಿದೆ.

ಪ್ರಾಚೀನ ಚಿತ್ರಕಲೆ, ಶಿಲ್ಪಗಳಲ್ಲಿ ಕೇವಲ ಸಾಂಕೇತಿಕ ಸ್ಥಾನ ಅಲಂಕರಿಸಿದ್ದ ಹೂಬಳ್ಳಿಗಳು ಮಧ್ಯಕಾಲದಲ್ಲಿ ಹೆಚ್ಚು ವೈವಿಧ್ಯ ತಳೆದಂತೆ ಕಂಡುಬರುತ್ತದೆ. ಈ ವೇಳೆಗೆ ಕಲೆಯ ತತ್ತ್ವಗಳಲ್ಲಿಯೇ ಗಮನಾರ್ಹವಾದ ವ್ಯತ್ಯಾಸವಾಗಿತ್ತು. ಕಲೆಯನ್ನು ಕೇವಲ ಭಗವದಾರಾಧನೆಯ ನಿಮಿತ್ತವಾಗಿ ಉಪಯೋಗಿಸಿಕೊಳ್ಳಬೇಕೆಂಬ ಭಾವನೆ ಬದಲಾಗಿ, ಅದನ್ನು ಮಾನವನ ಜೀವನಕ್ರತುವನ್ನಾಗಿ ಉಪಯೋಗಿಸಿಕೊಳ್ಳುವ ಪರಿಪಾಠ ಆರಂಭವಾಗಿತ್ತು. ಮೊಘಲರ ಸಂಪರ್ಕ, ಅವರು ದೂರ ಪ್ರಾಚ್ಯ, ಮಧ್ಯಪ್ರಾಚ್ಯಗಳಿಂದ ತಂದಿದ್ದ ಕಲಾಕೃತಿಗಳು,

ಕಾಲಾನುಗುಣವಾದ ಜೀವನಕ್ರಮ ವ್ಯತ್ಯಾಸ ಇವು ನೂತನ ಸಂಪ್ರದಾಯುಗಳಿಗೆ ಜನ್ಮಕೊಟ್ಟವು.

ಮೊಘಲ ಮತ್ತು ರಜಪೂತ ಸಂಪ್ರದಾಯುಗಳೆರಡನ್ನೂ ನಾವು ಈ ಸಂಧಿಕಾಲದ ಶಿಶುಗಳೆಂದು ಪರಿಗ್ರಹಿಸಬಹುದು. ಮೊಘಲ ಸಂಪ್ರದಾಯುದ ಚಿತ್ರಗಳಲ್ಲಿ ಭಾರತೀಯರಿಗೆ ಪ್ರಿಯವಾಗಿದ್ದ ಚಂಪಕ, ಬಕುಳ, ಪದ್ಮ ಪುಷ್ಪಗಳಲ್ಲದೆ ಕಾಡಿನ ಹೂಬಳ್ಳಿಗಳೂ ಸ್ಥಾನಪಡೆದಿವೆ. ಇದರ ಕಾರಣ ಊಹಿಸಬಹುದು. ಇಸ್ಲಾಂ ಧರ್ಮಾವಲಂಬಿಯಾದ ಮೊಘಲ ಚಿತ್ರಗಾರ ಹಿಂದೂ ಚಿತ್ರಕಾರನಷ್ಟು ಸ್ವತಂತ್ರನಾಗಿರಲಿಲ್ಲ. ಪವಿತ್ರ ಕೊರಾನಿನಲ್ಲೇ ಲಲಿತಕಲೆಗಳಿಗೆ ಸ್ಥಾನವಿಲ್ಲದಿದ್ದಾಗ, ಅವುಗಳಿಗೆ ಪ್ರಾಧಾನ್ಯ ಕೊಡುವುದೆಂತು? ಹುಮಾಯೂನ್, ಅಕ್ಬರ್, ಜಹಾಂಗೀರ್, ಷಹಜಹಾನ್ ಇಸ್ಲಾಂ ಮತಾನುಯಾಯಿಗಳಾಗಿದ್ದರೂ ಉದಾರಮತಿಗಳಾಗಿದ್ದರು. ಅವರ ಆಸ್ಥಾನಗಳಲ್ಲಿ ಮುಸ್ಲಿಮ್, ಹಿಂದೂ ಚಿತ್ರಕಾರರು, ಶಿಲ್ಪಿಗಳು ವರ್ಧಿಸಿದರು.

ಇಸ್ಲಾಮಿನ ಕಟ್ಟು ಕಟ್ಟಳೆಗೆ ಬದ್ಧನಾಗಿದ್ದ ಮುಸ್ಲಿಮ್ ಚಿತ್ರಗಾರ ಕೊರಾನಿನ ಮಹಾಪುರುಷರ ಚರಿತ್ರೆಗಳನ್ನಾಗಲಿ, ಇಸ್ಲಾಮಿನ ಪ್ರವಾದಿಗಳ ಜೀವನವನ್ನಾಗಲಿ ಚಿತ್ರಿಸಲು ಸಾಧ್ಯವಿರಲಿಲ್ಲ. ಸಹಜವಾಗಿ ಅವನಕ್ಷೇತ್ರ ಸಂಕ್ಷಿಪ್ತವಾಯಿತು. ಹಿಂದೂ ಚಿತ್ರಗಾರ ರಾಮಾಯಣ, ಮಹಾಭಾರತ, ಭಾಗವತ, ಯೋಗವಾಶಿಷ್ಠಾದಿ ಗ್ರಂಥಗಳ ಮರೆಹೊಗಬಹುದಾಗಿತ್ತು. ಆ ಅನುಕೂಲ ಮುಸ್ಲಿಮ್ ಚಿತ್ರಗಾರನಿಗಿರಲಿಲ್ಲ. ನಿತ್ಯಜೀವನದ ದೃಶ್ಯಗಳು, ತನ್ನ ದೊರೆಯ ಸಾಹಸ, ಬೇಟೆ, ಶೃಂಗಾರ, ವ್ಯಕ್ತಿಚಿತ್ರಗಳು ಇವುಗಳಿಗೇ ಅವನು ಬದ್ಧನಾಗಬೇಕಾಗಿತ್ತು. ಇದರಿಂದಾಗಿ ಮುಘಲ್ ಚಿತ್ರಗಳಲ್ಲಿ ಪ್ರಕೃತಿ ದೃಶ್ಯಗಳು ಹೆಚ್ಚು ಯಶಸ್ವಿಯಾದುದು ಕಂಡು

ಬರುತ್ತದೆ. ಅವರು ಗಿಡಮರಗಳನ್ನು ಅಳವಡಿಸಿರುವ ಬಗೆ, ಹೂ ಬಳ್ಳಿಗಳ ರೇಖೆರೇಖೆಗಳನ್ನೂ ಮಾರ್ಮಿಕರಾಗಿ ಬಿಡಿಸಿರುವ ಬಗೆ, ಅವರ ಕಲಾಪ್ರಾವಿಣ್ಯ, ನಿಸರ್ಗಮೈತ್ರಿಯ ಕುರುಹು ಗಳಾಗಿವೆ.

ನಾಯಕ–ನಾಯಿಕಾ ಚಿತ್ರಮಾಲೆ, ರಾಗ-ರಾಗಿಣಿ ಚಿತ್ರಮಾಲೆ ಮೊಘಲ ಹಾಗೂ ರಜಪೂತ ಚಿತ್ರಗಾರರಿಬ್ಬರಿಗೂ ಪ್ರಕೃತಿಯ ವೈವಿಧ್ಯಪೂರ್ಣ ವೈಭವವನ್ನು ಸಾರುವುದಕ್ಕೆ ಯೋಗ್ಯ ಸಾಧನಗಳಾದವು. ಕಾರಿರುಳನ್ನು ಲಕ್ಷಿಸದೆ ನಾಯಿಕೆ 'ಅಭಿಸಾರಿಕೆ' ಯಾಗಿ ಹೊರಡುತ್ತಾಳೆ. ಆ ಕಗ್ಗತ್ತಲಿನ ಪ್ರಗಾಢ ಮೌನವನ್ನು ಆಕಾಶದಲ್ಲಿನ ಕೆಲವು ಚಿಕ್ಕೆಗಳು ಮಾತ್ರ ಮುರಿ ದಿವೆ. ಕತ್ತಲೆಯ ಮಣಿದೀಪದಂತೆ ಬೆಳಗುತ್ತಿದ್ದ ಚಿಕ್ಕೆಗಳ ಬೆಳಕಿನಲ್ಲೇ ಅಭಿಸಾರಿಕೆ ತನ್ನಿನಿಯನನ್ನು ಅರಸಬೇಕಾಗಿದೆ. ಕಾಡುಮೇಡುಗಳನ್ನು ದಾಟುತ್ತ ಅವಳು ದಿಟ್ಟಳಾಗಿ ಹೊರಟ ದ್ದಾಳೆ. ಅವಳಿಗೆ ದಾರಿಯಲ್ಲಿ ಸಿಕ್ಕುವ ಗಿಡಮರಗಳು ತಟಾಕ ಗಳು, ಹೂ ಬಳ್ಳಿಗಳೆಲ್ಲವನ್ನೂ ಚಿತ್ರಗಾರ ಸೂಕ್ಷ್ಮಕೌಶಲ್ಯದಿಂದ ಬಿಡಿಸಿದ್ದಾನೆ.

ಇದೇ ಸಂಪ್ರದಾಯಕ್ಕೆ ಸೇರಿದ ಇನ್ನೊಂದು ಚಿತ್ರ '**ವಿರಹಿಣಿ**'; ಸಂಜೆಗಳೆದು ರಾತ್ರಿ ಕಾಲಿಟ್ಟಿದೆ. ಹುಚ್ಚಳಂತೆ ಹೊರಟ ವಿರಹಿಣಿ ವನಾಂತರ ಪ್ರದೇಶಕ್ಕೆ ಬಂದಿದ್ದಾಳೆ. ಅತ್ತಿತ್ತ ಎರಡು ಸೈಪ್ರಸ್ ವೃಕ್ಷಗಳು. ಎಡಕೊನೆಯಲ್ಲಿ ಪುಷ್ಪಭರಿತವಾದ ಒಂದು ವೃಕ್ಷ. ಅದರ ಮೇಲೊಂದು ಕಾಡುಹಕ್ಕಿ, ವೃಕ್ಷದ ಬುಡದ ಬಳಿ ಒಂದು ಹರಿಣಿ. ವಿರಹಿಣಿ ಹೂಗಿಡ ಒಂದರ ಆಶ್ರಯದಲ್ಲಿ ನಿಂತು ಕೈಯಲ್ಲಿ ಒಂದು ಹೂ ಹಿಡಿದಿದ್ದಾಳೆ. ಪ್ರಾಯಶಃ ಅವಳನ್ನೇ ಅರಸಿಕೊಂಡು ಬಂದ ಅವಳ ಗೆಳತಿ,

ದೋತಾರದ ಶ್ರುತಿಗೆ ಹಾಡುತ್ತಾ ಗೆಳತಿಯ ವಿರಹೋಜ್ವಲತೆಯನ್ನೂ ಪ್ರಶಾಂತಗೊಳಿಸುತ್ತಿದ್ದಾಳೆ. ವಿರಹ–ಅದರ ಪ್ರಶಾಂತನ ವಸ್ತುವಿನೊಂದಿಗೆ ಇಡಿಯ ನಿಸರ್ಗ ಮೇಳವಿಸಿರುವುದು ಚಿತ್ರಗಾರನ ವೈಶಿಷ್ಟ್ಯ. ಆಕಾಶದಲ್ಲಿ ಸುತ್ತುಗಟ್ಟಿರುವ ನೀಲಮೇಘಗಳು, ಅದರ ಮುಂಭಾಗದಲ್ಲಿ ಹಾರಾಡುತ್ತಿರುವ ಬೆಳ್ಳಕ್ಕಿಗಳು, ದಿಟ್ಟದೃಷ್ಟಿಯಿಂದ ವಿಹರಿಣಿಯನ್ನೇ ಗಮನಿಸುತ್ತಿರುವ ಹರಿಣಿ, ವಿಕಸಿತ ಹಾಗೂ ಅವಿಕಸಿತ ಪುಷ್ಪ ಸಂಚಯಗಳೆಲ್ಲಾ ಮೂಲ ವಸ್ತುವಿನೊಂದಿಗೆ ತಾದಾತ್ಮ್ಯ ಪಡೆದಿವೆ.

ನಾಯಕ-ನಾಯಿಕಾ ಚಿತ್ರಮಾಲೆಗಿಂತಲೂ ರಾಗ-ರಾಗಿಣಿ ಚಿತ್ರಮಾಲೆ ಹೆಚ್ಚು ಸ್ವಾತಂತ್ರ್ಯ ವಹಿಸಿದೆ. ರಾಗ-ರಾಗಿಣಿ ಚಿತ್ರಗಾರ, ನಾಯಕ-ನಾಯಿಕಾ ಚಿತ್ರಗಾರನಷ್ಟು ವಸ್ತುವಿಗಾಧೀನನಾಗಿಲ್ಲ. ರಾಗ-ರಾಗಿಣಿ ಚಿತ್ರಗಾರ, ಒಂದು ರಾಗ, ರಾಗಿಣಿಯ ಲಕ್ಷಣವನ್ನಾಗಲಿ ರೂಪಭೇದವನ್ನಾಗಲಿ ಚಿತ್ರಿಸಹೊರಡುವುದಿಲ್ಲ. ರಾಗ, ಶ್ರಾವಕನ ಮನಸ್ಸಿನಲ್ಲಿ ಯಾವ ಭಾವ ಕೆರಳಿಸಬಲ್ಲುದು, ಯಾವ ರಸ ಉತ್ಪಾದಿಸಬಲ್ಲುದು ಎಂಬುದನ್ನೇ ಅವನು ಅನುಲಕ್ಷಿಸುತ್ತಾನೆ. ಒಂದೇ ರಾಗವನ್ನು ಚಿತ್ರಿಸಿರುವ ಹಲವು ಚಿತ್ರಗಾರರು ಹಲವು ಭಾವ, ರಸಗಳನ್ನು ಚಿತ್ರಿಸಿರುವುದೂ ಉಂಟು. ರಾಗ ರಾಗಿಣಿ ಚಿತ್ರಗಳಲ್ಲಿ ಚಿತ್ರಗಾರರು ಹೂವನ್ನು ಧಾರಾಳವಾಗಿ ಬಳಸಿಕೊಂಡಿದ್ದಾರೆ.

೧. **ಕಾನೋದ ರಾಗಿಣಿ**: ಅರಮನೆಯ ಆವರಣದ ಉದ್ಯಾನವನ. ಹಿನ್ನೆಲೆಯಲ್ಲಿ ಅರಮನೆಯ ಗೋಪುರಗಳು ಕಾಣುತ್ತಿವೆ. ಸಿದ್ಧವಾಗಿರುವ ಶಯ್ಯೆಯ ಬಳಿ, ನಲ್ಲ ನಲ್ಲೆಯನ್ನು ಕೈಹಿಡಿದು ಎಳೆಯುತ್ತಿದ್ದಾನೆ. ಬೆದರಿದ ಆ ಭಾಮಿನಿ ತನ್ನ ನಲ್ಲನತ್ತ ನೋಡದೆ, ಅರಮನೆಯತ್ತ ನೋಡುತ್ತಿದ್ದಾಳೆ. ನಲ್ಲನ

ಬಳಿಗೆ ಬರಲು ನಲ್ಲೆ ಧೈರ್ಯ ಮಾಡಿದ್ದಾಳೆ. ಬಂದ ಮೇಲೆ ಆ ಧೈರ್ಯ ಉಡುಗಿಹೋಗುತ್ತದೆ. ಅವಳು ಪ್ರಾಯಶಃ ಅರಮನೆಯ ದಾಸಿ. ತನ್ನ ಪ್ರಣಯಾಭಿಯೋಗ ಎಲ್ಲಿ ಬಯಲಿಗೆ ಬರುವುದೋ ಎಂಬ ಭೀತಿ ಅವಳನ್ನು ಬಾಧಿಸುತ್ತಿದೆ. ಅಲಂಕರಿಸಿದ ಮಂಟಪದಂತೆ ಸುತ್ತ ಪಸರಿಸಿರುವ ಹೂವುಗಳು ಚಿತ್ರಕ್ಕೆ ಯಥಾಯೋಗ್ಯವಾದ ಚೌಕಟ್ಟನಂತಿದೆ.

೨. **ತೋಡಿ ರಾಗಿಣಿ :** ರಾಗ ರಾಗಿಣಿ ಮಾಲಾ ಚಿತ್ರಕಾರರಿಗೆ ತೋಡಿ ರಾಗಿಣಿ ಅತ್ಯಂತ ಪ್ರಿಯವಾದುದೆಂದು ಕಂಡು ಬರುತ್ತದೆ. ಪಹರಿ, ಗಹರವಾಲ್, ರಾಜಸ್ಥಾನಿ ಸಂಪ್ರದಾಯಗಳಲ್ಲಿ ಹತ್ತಾರು ತೋಡಿ ರಾಗಿಣಿಯ ಚಿತ್ರಗಳು ದೊರೆಯುತ್ತವೆ. ಆದರೆ ಅವೆಲ್ಲದರ ಮೂಲಭಾವನೆ ಒಂದೇ ಆಗಿದೆ.

ಹೂಗಳು ಸಮೃದ್ಧವಾಗಿ ಬೆಳದಿರುವ ವನಪ್ರದೇಶ. ನಿಂತೋ ಕುಳಿತೋ ಒಬ್ಬ ಸುಂದರಿ ದೋತಾರ ನುಡಿಸುತ್ತಿದ್ದಾಳೆ. ಅವಳ ಸೌಂದರ್ಯ, ಸಂಗೀತಗಳೆರಡರಿಂದಲೂ ಆಕರ್ಷಿತವಾದ ಹರಿಣಗಳು, ಹಕ್ಕಿಗಳು ತದೇಕಚಿತ್ತರಾಗಿ ಭಿತ್ತಿಚಿತ್ರಗಳಂತೆ ನಿಂತಿವೆ. ನಿಸರ್ಗ–ಸೌಂದರ್ಯ–ಸಂಗೀತ ಇವುಗಳ ತ್ರಿವೇಣೀ ಸಂಗಮಕ್ಕೆ ತೋಡೀ ರಾಗಿಣಿ ಉತ್ತಮ ದೃಷ್ಟಾಂತ. ಜಿಂಕೆ, ಹಕ್ಕಿಗಳ ಮೇಲೆ ಸಂಗೀತ ಯಾವ ಪ್ರಭಾವ ಮೂಡಿದೆಯೋ ಅದೇ ಪ್ರಭಾವವನ್ನು ಹೂಗಳ ಮೇಲೂ ಮೂಡಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು.

ಮೊಘಲ ಹಾಗೂ ರಜಪೂತ ಚಿತ್ರಕಾರರು ಹೂಗಳನ್ನು ಜಡಪ್ರಕೃತಿಯ ಒಂದು ಅವಿಷ್ಕಾರವಾಗಿ ಕಾಣಲಿಲ್ಲವೆಂದು ಹಿಂದೆಯೇ ಪ್ರಸ್ತಾಪಿಸಿದ್ದೇವೆ. ರಾಗ–ರಾಗಿಣಿ ಮಾಲಾ ಚಿತ್ರಗಳು

ಇನ್ನೊಂದು ವಿಶೇಷ ಅಂಶದ ಕಡೆಗೆ ನಮ್ಮ ಗಮನ ಸೆಳೆದು, ಸಂಶೋಧನೆಗೆ ಅವಕಾಶ ಕಲ್ಪಿಸಿ ಕೊಟ್ಟಿದೆ.

ಹಲವಾರು ಚಿತ್ರಗಳಲ್ಲಿ, ಕಲಾವಿದರು ಮೂಲ ವಸ್ತುವಿಗೆ ಪರಿಪೋಷಕವಾಗಿ ಹೂಗಳನ್ನು ಬಳಸಿಕೊಂಡಿದ್ದಾರೆ. ಹೂಗಳ ಹಿರಿಮೆಯನ್ನೇ ಸಾರುವ ಪುಷ್ಪ–ರಾಗಿಣಿ—ಬಸಂತ ರಾಗಿಣಿಯ ಚಿತ್ರಗಳನ್ನುಳಿದ ಇತರ ಚಿತ್ರಗಳಲ್ಲಿ ಮೂಲ ವಸ್ತುವಿನ ಭಾವ ಹೂಗಳ ಮೇಲೆ ಪ್ರತಿಬಿಂಬಿತವಾಗಿರುವುದನ್ನು ಕಾಣಬಹುದು. ರಾಧಾ-ಮಾಧವರ ಮಿಲನ, ಪುನರ್ಮಿಲನದ ಚಿತ್ರಗಳಲ್ಲಿ ಕಾಣಬರುವ ಗೆಲುವು, ಪರಿತ್ಯಕ್ತೆಯಲ್ಲಾಗಲಿ, ವಾಸವ ಸಜ್ಜಿಕೆಯಲ್ಲಾಗಲಿ ಕಂಡು ಬರುವುದಿಲ್ಲ. ಭಾವ–ರಸಗಳ ಆಂದೋಲನ ಹೂಗಳ ಮೇಲೂ ಪರಿಣಾಮ ಬೀರಬಲ್ಲದೆಂದು ಸಿದ್ಧಾಂತವನ್ನು ಮೊಘಲ, ರಜಪೂತ ಚಿತ್ರಗಾರರು ಸ್ಥಾಪಿಸಿದ್ದಾರೆ.

ಅಭಿಜಾತ ಕಲೆಗಳಲ್ಲಿ ನಾವು ಹೆಚ್ಚಾಗಿ ಕಾಣುವುದು ಮಾನವ ನಿರ್ಮಿತ ಉಪವನಗಳ ಹೂಗಳ ಚೆಲುವು; ಜಾನಪದ ಕಲೆಗಳಲ್ಲಿ ವನಾಂತರದ ಪ್ರಕೃತಿ ವೈಭವದ ವಿರಾಟಸ್ವರೂಪ ದರ್ಶನವಾಗುತ್ತದೆ. ಕುಶಲ ಶಿಲ್ಪಿಯ ಚೇತೋಹಾರಿಯಾದ ಕುಂಚಕ್ಕೆ ಸಿಕ್ಕಿದ, ಕಾಡು ಹೂಗಳೂ ಅನ್ಯಾದೃಶ ಲಾವಣ್ಯ ರಮಣೀಯತೆಯನ್ನು ಪಡೆಯುತ್ತವೆ.

ಆಧುನಿಕ ಚಿತ್ರಕಲೆ, ಪ್ರಕೃತಿ ನೋಟಗಳನ್ನು ವಸ್ತು ಚಿತ್ರಗಳಿಂದ ಬೇರ್ಪಡಿಸಿ, ಬೇರೊಂದು ಸಂಪ್ರದಾಯವನ್ನೇ ಆರಂಭಿಸಿತು. ಗಿಡ, ಮರ, ಹೂ, ಹಕ್ಕಿ, ಮೃಗ ಇವುಗಳನ್ನೇ ಪ್ರತ್ಯೇಕವಾಗಿ ಚಿತ್ರಿಸುವ ಪರಿಪಾಠ ಆರಂಭವಾಯಿತು. ಸಾಲು ಮರಗಳಲ್ಲಿ ಯಥೇಚ್ಛವಾಗಿ ಬೆಳೆಯುವ ಗೋಲ್ಡ್ ಮೋಹರ್ ಹಾಗೂ ರೆಡ್ ಆಲಿಯಾಂಡರ್ಸ್ (Red Oleanders) ಹೂಗಳ

ಅಪೂರ್ವ ಸೌಂದರ್ಯವನ್ನು ಫಕೀರಪ್ಪ ಎಲವಟ್ಟಿಯವರು ತಮ್ಮ ಕೃತಿಗಳಲ್ಲಿ ಚಿರಸ್ಥಾಯಿಗೊಳಿಸಿದ್ದಾರೆ.

ತಮ್ಮ ಕೃತಿಗಳಲ್ಲಿ ಪುಷ್ಪಕ್ಕೆ ಪ್ರಾಧಾನ್ಯ ಕೊಟ್ಟಿರುವ ಇನ್ನಿಬ್ಬರು ಶಿಲ್ಪಿಗಳನ್ನು ಹೆಸರಿಸಬಹುದು. ನಂದಲಾಲ ಬಸು, ಮನೀಷಿ ಡೇ. ಇಬ್ಬರೂ ಆಧುನಿಕ ಚಿತ್ರಕಲಾಚಾರ್ಯ ಅವನೀಂದ್ರ ಠಾಕೂರರ ಶಿಷ್ಯರು. ಇಬ್ಬರೂ ಸಂಪ್ರದಾಯ ಮಾರ್ಗದಲ್ಲೇ ಅಭ್ಯಾಸ ಮಾಡಿದವರು. ನಂದಲಾಲರ ಕೃತಿಗಳಲ್ಲಿ ಸಂಪ್ರದಾಯ ಬದ್ಧತೆ ಕಂಡುಬಂದರೆ, ಮನೀಷಿಯವರ ಚಿತ್ರಗಳಲ್ಲಿ ಸಂಪ್ರ ದಾಯಾತೀತತೆ ಕಂಡುಬರುತ್ತದೆ. ಶಾಂತಿನಿಕೇತನ ಹಾಗೂ ಬಂಗಾಳದ ಹಳ್ಳಿಗಳ ಹಲವು ಚಿತ್ರಗಳನ್ನು ರಚಿಸಿರುವ ನಂದ ಲಾಲರು ಪ್ರಕೃತಿಯನ್ನು ಹಿನ್ನೆಲೆಯಲ್ಲಿಡುತ್ತಾರೆ. ಬಡವನ ಗುಡಿಸಲು ಅವರು ಚಿತ್ರಿಸುವಾಗ, ಬಡತನಕ್ಕಷ್ಟೇ ಪ್ರಾಧಾನ್ಯ. ಅದರ ಪಕ್ಕದಲ್ಲಿರುವ ಹೂಗಿಡಗಳೂ ಬಡತನದ ಪ್ರತೀಕ ಗಳಾಗಿಯೇ ನಿಂತಿರುತ್ತವೆ. ಬಡವನ ಗುಡಿಸಲು ಸುತ್ತಲೂ ಸುಂದರವಾದ ಹೂಗಿಡಗಳು ಬೆಳೆಯಬಾರದೇಕೆ? ಪ್ರಕೃತಿ ಉದ್ದೇಶಪೂರ್ವಕವಾಗಿ ಬಡವನಿಗೆ ಅನ್ಯಾಯ ಬಗೆದಿರುವಳೇ ಎಂಬ ಸಂಶಯ ಸಹಜವಾಗಿ ನಮ್ಮ ಮನಸ್ಸಿನಲ್ಲುತ್ಪನ್ನವಾಗುತ್ತದೆ.

ಮನೀಷಿಯವರ ಜೀವನದೃಷ್ಟಿಯ ಪ್ರತೀಕವೇ ಅವರ ಚಿತ್ರಕಲೆ. ಸೃಷ್ಟಿಯ ಪ್ರತಿಯೊಂದು ಆವಿಷ್ಕಾರಕ್ಕೂ ಬೆಲೆಯಿದೆ ಎಂದು ಮನೀಷಿ ನಂಬುತ್ತಾರೆ. ಸೃಷ್ಟಿಯ ಮಹಾಚಕ್ರದಲ್ಲಿ ಹೂಗಿಡಗಳು, ಮರಗಳು, ದೈವ ಹಾಗೂ ಮಾನವ ನಿರ್ಮಿತ ಸಮಸ್ತ ವಸ್ತುಗಳಿಗೂ ಸ್ಥಾನವಿದೆ. ಅವೆಲ್ಲವುಗಳ ಮೊತ್ತವೇ ಸೃಷ್ಟಿ. ಬಡವನ ಗುಡಿಸಲ ಬಳಿ ಬೆಳೆಯುವ ಚೆಂಡು ಹೂವಾಗಲಿ, ಕಣಿಗೆಲೆ ಹೂವಾಗಲಿ ತೇಜಃಪುಂಜವಾಗಿ ಏಕೆ ಇರಬಾರದು?

ಪ್ರಕೃತಿಯಲ್ಲಿ ಅಂತರ್ಗತವಾಗಿರುವ ಚೆಲುವು, ಹರ್ಷ, ಸುಭಗತೆ ಬಡತನದ ದಾರುಣತೆಯನ್ನಳಿಸಲು ಸಹಾಯಕವಾಗಬಾರದೇಕೆ? ಅನ್ನಕ್ಕೆ ಅಭಾವವಿರಬಹುದು—ಭಾವಕ್ಕೆ ಬಡತನವೇಕೆ? ಅವರ ಚಿತ್ರಗಳಲ್ಲಿ ಪ್ರಕೃತಿಯ ಲಾಸ್ಯ ಪ್ರಭಾವಯುತವಾಗಿದೆ. ಬಗೆ ಬಗೆಯ ಹೂಗಳಂತೂ ನೋಟಕರ ಕಣ್ಮನಗಳನ್ನು ಸೂರೆಗೊಳ್ಳುತ್ತವೆ.

ಜಂಜಡಮಯವಾದ ಜೀವನಕ್ಕೆ ಮಾಧುರ್ಯ ಸಹೃದಯತೆ, ಸುಭಗತೆಗಳ ತನಿಯನ್ನೆರೆಯುವ ಹೂಗಳು ಮಾನವ ಜೀವನವನ್ನೇ ಸಾರ್ಥಕಗೊಳಿಸುತ್ತವೆಯೆಂದೇಕೆ ಹೇಳಬಾರದು.

ಭಾರತೀಯ ಸಂಸ್ಕೃತಿಯಲ್ಲಿ ಶ್ರೀ ಕೃಷ್ಣನ ಪಾತ್ರ

ಉಪನಿಷತ್ಕಾಲದ ಪೂರ್ವದಲ್ಲಿಯೇ ಭಾರತೀಯ ಸಂಸ್ಕೃತಿ ಆರಂಭವಾದರೂ ಉಪನಿಷತ್ಕಾಲದಲ್ಲಿ ಅದು ಸುಸ್ಪಷ್ಟ ರೂಪು ತಳೆಯಿತು. ಉಪನಿಷತ್ತುಗಳ ಗುಹ್ಯಾಗುಹ್ಯತರ ತತ್ತ್ವಾರ್ಥ, ಪಾರಮಾರ್ಥಿಕ ವಿವೇಚನೆ ಸಾಮಾನ್ಯ ಜನಪದಕ್ಕೆ ಅರ್ಥವಾಗಲೆಂದೇ ರಾಮಾಯಣ, ಮಹಾಭಾರತ, ಭಾಗವತ ಹುಟ್ಟಿಕೊಂಡವು.

ರಾಮಾಯಣದ ಶ್ರೀ ರಾಮಚಂದ್ರ, ಭಾರತ, ಭಾಗವತಗಳ ಶ್ರೀ ಕೃಷ್ಣ ಇಬ್ಬರೂ ಭಾರತೀಯ ಸಂಸ್ಕೃತಿಯ ಮೂರ್ತಿವಂತ ಪ್ರತಿನಿಧಿಗಳಾಗಿದ್ದಾರೆ. ಸತ್ಯಕ್ಕಾಗಿ ಹೋರಾಡಿ ಅಂತಿಮದಸೆ ಮುಟ್ಟುವುದಕ್ಕಾಗಿ ಪರಿಪರಿಯ ಅಳಲು ತೊಳಲುಗಳಿಗೆ ಸಿಕ್ಕಿದರೂ ಧೃತಿಗೆಡದೆ ನಿಂತ ಶ್ರೀ ರಾಮ ಭಾರತೀಯ ಸಂಸ್ಕೃತಿಯ ಮಹೋನ್ನತಿಯ ಪ್ರತೀಕವಾಗಿದ್ದಾನೆ. ಶ್ರೀ ಕೃಷ್ಣನೂ ಧರ್ಮಕ್ಕಾಗಿ ಹೋರಾಡಿದವನೇ—ಧರ್ಮಗ್ಲಾನಿಯೊದಗಲು ಅದನ್ನು ನಿವಾರಿಸಿ ಧರ್ಮ ಸಂಸ್ಥಾಪನೆಗಾಗಿ ಅವತರಿಸಿದ ಶ್ರೀ ಕೃಷ್ಣ ಸಾಕ್ಷಿಸ್ವರೂಪನಾಗಿದ್ದಾನೆ. ಶ್ರೀ ರಾಮ ಕೋದಂಡರಾಮನಾದರೆ ಶ್ರೀ ಕೃಷ್ಣ ಪಾರ್ಥಸಾರಥಿ. ಶ್ರೀ ರಾಮನದು ಏಕದೃಷ್ಟಿ; ಶ್ರೀ ಕೃಷ್ಣನದು ಅನೇಕ ದೃಷ್ಟಿ. ಶ್ರೀ ರಾಮ ಪರಮಪುರುಷ; ಶ್ರೀ ಕೃಷ್ಣ ಪುರುಷೋತ್ತಮ. ಸರ್ವತೋಮುಖ ಜೀವನವನ್ನು ಅನುಲಕ್ಷಿಸಿದ್ದ ಶ್ರೀ ಕೃಷ್ಣನ ಬಾಳು ಮಾನವನ ಪೂರ್ಣಾವತಾರದ ಇತಿಹಾಸವಾಗಿದೆ. ಉತ್ಕ್ರಾಂತಿ ದೆಸೆಯಲ್ಲಿ ಮಾನವ ಅನುಭವಿ

ಸುವ ಬಗೆಬಗೆಯ ಕೋಟಲೆಗಳು, ಸಮಸ್ಯೆಗಳು, ಸಂಕಷ್ಟಗಳ ವಿಲೋಭನಗಳನ್ನೆಲ್ಲಾ ಶ್ರೀ ಕೃಷ್ಣ ಬಲ್ಲವನಾಗಿದ್ದ. ಶಾಂ ದೂತನಾಗಿದ್ದ ಶ್ರೀ ಕೃಷ್ಣ ಕೆಲವು ಸಲ ಶಸ್ತ್ರಚಿಕಿತ್ಸಕನಂತೆಯು ಕಾಣಿಸಿಕೊಂಡಿದ್ದಾನೆ.

ಇಹ–ಪರ ಜೀವನದ ಸಾರ್ಥಕತೆ ಅವುಗಳ ಪರಸ್ಪರಾ ಲಂಬನ, ಜೀವನದ ಪರಿಪೂರ್ಣ ವಿಕಾಸಗಳಿಗೆ ರಾಮ, ಕೃಷ್ಣ ಚರಿತ್ರೆ ಉತ್ತಮ ದೃಷ್ಟಾಂತಗಳಾಗಿವೆ.

ರಾಮ, ಕೃಷ್ಣರ ಐತಿಹಾಸಿಕತೆಯ ಬಗ್ಗೆ ವಿಪುಲ ಚರ್ಚೆ ನಡೆದಿದೆ. ರಾಮ, ಕೃಷ್ಣರು ವಾಲ್ಮೀಕಿ, ವ್ಯಾಸರ ಊಹೆಯ ಫಲವೆಂದು ಕೆಲವು ವಿದ್ವಾಂಸರು ವಾದಿಸಿದ್ದಾರೆ. ಅವರ ವಾದ ವೇನೇ ಇರಲಿ—ಸಹಸ್ರಾರು ವರ್ಷಗಳಿಂದ ಈ ಮಹಾಪುರುಷ ರಿಬ್ಬರ ಜೀವನ—ಸಂದೇಶ ಈ ನಾಡಿನ ಸಂಸ್ಕೃತಿಯನ್ನು ನಿತ್ಯ ಜೀವನವನ್ನು, ಸಾಹಿತ್ಯ, ಕಲೆಯನ್ನು, ಜ್ಞಾನ, ಭಕ್ತಿ, ವೈರಾಗ್ಯ ವನ್ನು ಕಡೆದು, ಭಾರತದ ಹಿರಿಮೆಯನ್ನು ಹೆಚ್ಚಿಸಿದೆಯೆನ್ನು ವುದರಲ್ಲಿ ಯಾವ ಸಂದೇಹವೂ ಇಲ್ಲ.

ರಾಮ, ಕೃಷ್ಣರಿಬ್ಬರೂ ಔತ್ತರೇಯರು. ಅವರು ಹುಟ್ಟಿ ಬೆಳೆದುದು, ಅವರ ಕಾರ್ಯಕ್ಷೇತ್ರ ಎಲ್ಲಾ ಉತ್ತರ ಭಾರತವೇ. ಇಬ್ಬರಿಗೂ ದಕ್ಷಿಣ ಭಾರತದ ನಿಕಟ ಪರಿಚಯವಿತ್ತು. ರಾಮಾಯಣ, ಭಾರತದ ಕೆಲವು ಪ್ರಸಂಗಗಳು ದಕ್ಷಿಣದಲ್ಲೇ ನಡೆದಿವೆ. ಆದರೆ ಉತ್ತರದಲ್ಲಿ ಕೃಷ್ಣಪಂಥ, ದಕ್ಷಿಣದಲ್ಲಿ ರಾಮ ಪಂಥ ಹೆಚ್ಚಾಗಿ ಬೆಳೆದುದು ಕಂಡು ಬರುತ್ತದೆ. ದಕ್ಷಿಣ ಭಾರತದ ಎಲ್ಲ ಭಾಷೆಗಳಿಗೂ ಭಾರತ, ಭಾಗವತಗಳು, ಭಾವಾಂತರ, ಭಾಷಾಂತರ, ರೂಪಾಂತರವಾಗಿರುವುದಲ್ಲದೆ ಅವುಗಳ ಆಧಾರದ ಮೇಲೆ ಸ್ವತಂತ್ರ ಕಾವ್ಯ, ನಾಟಕಗಳು ಹುಟ್ಟಿಕೊಂಡವು.

ಆದರೂ ದಾಕ್ಷಿಣಾತ್ಯರು ರಾಮಾಯಣ ಅದರ ನಾಯಕ ಶ್ರೀರಾಮಚಂದ್ರನ ಬಗ್ಗೆ ಹೆಚ್ಚಿನ ಆಸ್ಥೆ ತೋರಿರುವುದರ ಕಾರಣ ಸುಲಭವಾಗಿ ತಿಳಿಯುವಂತಿಲ್ಲ.

ಮಹಾಭಾರತ ಒಂದು ದೃಷ್ಟಿಯಿಂದ ಶ್ರೀ ಕೃಷ್ಣ ಚರಿತ್ರೆಯೇ ಆಗಿದ್ಧರೂ ನಾವು ಶ್ರೀ ಕೃಷ್ಣನ ಹೆಸರು ಕೇಳುವುದು ಅಲ್ಲಿಯೇ ಮೊದಲಲ್ಲ. ಛಾಂದೋಗ್ಯೋಪನಿಷತ್, ನಾರಾಯಣಾರ್ಥ ದರ್ಶಿಕೋಪನಿಷತ್ ಮತ್ತು ಆತ್ಮಬೋಧೋಪನಿಷತ್ತುಗಳಲ್ಲಿ ಕೃಷ್ಣನ ಪ್ರಸ್ತಾಪವಿದೆ. ವೇದಯುಗದ ಆದಿಯಲ್ಲಿ ಕೃಷ್ಣನಿಗೆ ದೇವತ್ವದ ಪಟ್ಟವಿಲ್ಲ; ವೇದಯುಗದ ಅಂತ್ಯದಲ್ಲಿ ಕೃಷ್ಣ ಅವತಾರ ಪುರುಷನಾಗಿದ್ದಾನೆ. ಮಹಾಭಾರತದಲ್ಲಂತೂ ಅವನು ಪ್ರತ್ಯಕ್ಷ ವಿಷ್ಣು, ಸ್ಥಿತಪ್ರಜ್ಞ–ಪುರುಷೋತ್ತಮ. ಈ ಪುರುಷೋತ್ತಮ ಭಾವನೆಯೇ ಸ್ಥಿರವಾಗಿ ನಿಂತು, ತರುವಾಯದ ಎಲ್ಲ ಕವಿ, ಕಲಾವಿದರ ಮೇಲೂ ವಿಶೇಷ ಪ್ರಭಾವ ಬೀರಿರಬೇಕು. ಕೃಷ್ಣನ ದೇವತ್ವವನ್ನು ಒಪ್ಪಿಕೊಳ್ಳದಿದ್ದ ಜೈನಕವಿಗಳೂ ಅವನ ಪುರುಷೋತ್ತಮತ್ವದ ಬಗ್ಗೆ ಸಂಶಯ ತಳೆದಿಲ್ಲ.

ಕನ್ನಡ ಕವಿಗಳಲ್ಲಿ ಆದಿ ಪಂಪ (೯೪೧), ರನ್ನ (೯೯೦), ರುದ್ರಭಟ್ಟ (೧೨೦೦), ಕುಮಾರವ್ಯಾಸ (೧೪೦೦), ಕನಕದಾಸ (೧೫೮೦), ಚಿಕ್ಕದೇವರಾಜ (೧೭೦೦), ಸಿಂಗಾರಾರ್ಯ (೧೭೦೦), ಇಡಿಯಾಗಿಯೋ ಬಿಡಿಯಾಗಿಯೋ ಶ್ರೀ ಕೃಷ್ಣಚಾರಿತ್ರ್ಯವನ್ನು ತಮ್ಮ ಕೃತಿಗಳಲ್ಲಿ ಪ್ರಸ್ತಾಪಿಸಿದ್ದಾರೆ. ಪಂಪ, ರನ್ನರ ಕಣ್ಣಿಗೆ ರಾಜಕಾರಣಪಟುವಾಗಿ ಕಂಡು ಬಂದ ಶ್ರೀ ಕೃಷ್ಣ ರುದ್ರಭಟ್ಟನ ಕಣ್ಣಿಗೆ

"ಜಗಮಂ ನುಂಗುವ ಶೂಲಿ ನೀನೆ

ಜಗಮಂ ಮಾಳ್ಪಬ್ಜಜಂ ನೀನೆ

ತಜ್ಜಗಮಂ ರಕ್ಷಿಪ ವಿಷ್ಣು ನೀನೆ
ಜಗಮಂ ಪೊರೆವ ನೀನೆ
ಸರ್ವೇಶ ಸರ್ವಗ ಸರ್ವಾತ್ಮಕ
ಸರ್ವಭೂತಮಯ, ನಿನ್ನಿಂ
ಭಿನ್ನವಾಗಿರ್ಪ ವಸ್ತುಗಳಿಲ್ಲ"

ಆಗಿ ಕಾಣಿಸಿಕೊಂಡಿದ್ದಾನೆ.

ಶ್ರೀ ಕೃಷ್ಣನ ಪಾತ್ರಕ್ಕೆ ಕುಮಾರವ್ಯಾಸ ತೋರಿರುವ ಪ್ರೇಮಗೌರವ ಬೇರೆ ಯಾವ ಕನ್ನಡ ಕವಿಯೂ ತೋರಿಲ್ಲವೆಂದು ನಿಸ್ಸಂದೇಹವಾಗಿ ಹೇಳಬಹುದು. ಮಹಾಭಾರತ ಕೃಷ್ಣನ ಬಹುಮುಖ ಪ್ರತಿಭೆಯ ರಂಗವಾಗಿದೆ. ಅಲ್ಲಿ ಕೃಷ್ಣ ಮಾನವನಾಗಿದ್ದಾನೆ—ಮಾನವೇಂದ್ರನಾಗಿದ್ದಾನೆ; ಭಗವಂತನಾಗಿ ಭಕ್ತ ಪರಾಧೀನನಾಗಿದ್ದಾನೆ; ಜಗದ್ವಂದ್ಯ ಭಗವದ್ಗೀತೆಯನ್ನು ಉಪದೇಶಿಸಿದ ಗುರುರಾಜನಾಗಿದ್ದಾನೆ. ಈ ಬೃಹತ್‌ಚೇತನದ ಪರಿಚಯಮಾಡಿಕೊಡುವ ಕೆಲಸವನ್ನು ಕುಮಾರವ್ಯಾಸ ಭಕ್ತಿಯಿಂದ, ದಕ್ಷತೆಯಿಂದ ನಿರ್ವಹಿಸಿದ್ದಾನೆ. ಪೀಠಿಕಾ ಪ್ರಕರಣದಲ್ಲಿ ಅವನೇ ಹೇಳುವಂತೆ 'ಕೃತಿಯು ಸತ್ಕರ್ಣಾಟಕದ ಭಾರತಕ್ಕೆ ಮಂಜುಳಮಂಜರಿಯು ಮಹಾಕೃತಿಗೆ ನಾಯಕ ಗದುಗಿನ ವೀರನಾರಾಯಣ.' ಶ್ರೀ ಕೃಷ್ಣನ ಚಾರುಚರಿತ್ರೆಯನ್ನು ಹೇಳುವುದಕ್ಕೇ ಕುಮಾರವ್ಯಾಸ 'ಮಹಾಭಾರತ' ಕಥೆ ಬರೆಯಲು ಹೊರಟದ್ದು.

'ಗೀತಗೋಪಾಲ' ಕರ್ತೃವಾದ ಚಿಕ್ಕದೇವರಾಜನ ಮೇಲೆ ಜಯದೇವಕವಿಯ(೧೨೦೦) 'ಗೀತಗೋವಿಂದ' ವಿಶೇಷ ಪ್ರಭಾವ ಮೂಡಿದೆಯೆಂಬುದರಲ್ಲಿ ಸಂದೇಹವಿಲ್ಲ. ತನ್ನ ಕಾವ್ಯರಚನೆಯ ಉದ್ದೇಶ ವಿವರಿಸುತ್ತಾ, ಚಿಕ್ಕದೇವರಾಜ,

" ಹರಿಕೀರ್ತನವೊಂದೇ ಪರಗತಿಕನುಕೂಲವೆಂದು ನೆರನಿಸಿ ನೆಗಳ್ದಂ
ಪಾಲಂ ಬಯಸಿದ ರೋಗಿಗೆ ಪಾಲಿಂದೌಷಧಮೀವ ವೈದ್ಯನ ತೆರದಿಂ
ದೀಲೋಗರೊಲ್ವ ಗೀತದ ಮೂಲದೊಳೇ ಮುಕ್ತಿಗತಿಯ ಮೊಗ
ದೋರಿನಿದಂ ॥"

ಮಧ್ಯ ಕಾಲದಲ್ಲಿ ಬೆಳೆದ ಭಕ್ತಿಪಂಥ ಕೃಷ್ಣಾರಾಧನೆಗೆ, ವಿಶೇಷ ಇಂಬುಗೊಟ್ಟಿತು. ಜಯದೇವ, ವಿದ್ಯಾಪತಿ, ಚಂಡೀದಾಸ, ಮೀರಾಬಾಯಿ ಮೊದಲಾದ ಸಂತ ಕವಿಗಳ ಕೃತಿಗಳಿಗೆ ಕೃಷ್ಣಲೀಲಾ ವಿಲಾಸವೇ ವಸ್ತುವಾಯಿತು. ಜಯದೇವ ಹೇಳುವಂತೆ

" ಶ್ರೀ ಜಯದೇವ ಭಣಿತಮತಿ
ಸುಂದರ ಮೋಹನ ಮಧುರಿಪು ರೂಪಂ
ಹರಿಚರಣ ಸ್ಮರಣಂ ಪ್ರತಿ ಸಂಪ್ರತಿ
ಪುಣ್ಯವತಾ ಮನುರೂಪಂ

[ಅತಿ ಸುಂದರವೂ ಮೋಹಕವೂ ಆದ ಮಧುಸೂದನನ ರೂಪವನ್ನು ವರ್ಣಿಸುವ ಶ್ರೀ ಜಯದೇವ ಕವಿಯ ಈ ಗಾನವು ಹರಿಚರಣಗಳ ಸ್ಮರಣೆಯನ್ನು ಮಾಡುವ ಭಾಗ್ಯವಂತರಿಗೆ ಮೀಸಲಾಗಿದೆ.]

ಯದ್ಗಂಧರ್ವ ಕಲಾಸು ಕೌಶಲ
ಮನುಧ್ಯಾನಂ ಚಯುದ್ವೈಷ್ಣವಂ
ಯಚ್ಛೃಂಗಾರ ವಿವೇಕತತ್ವ ರಚನಾ
ಕಾವ್ಯೇಷು ಲೀಲಾಯತುಂ ।
ತತ್ಸರ್ವಂ ಜಯದೇವ ಪಂಡಿತಕವೇಃ
ಕೃಷ್ಣೈಕತಾನಾತ್ಮನಃ

ಸಾನಂದಾ ಪರಿಶೋಧಯಂತು
ಸುಧಿಯಃ ಶ್ರೀಗೀತಗೋವಿಂದತಃ

[ಪಂಡಿತೋತ್ತಮರೇ, ಸರ್ವದಾ ಶ್ರೀ ಕೃಷ್ಣನಲ್ಲೇ ನೆಟ್ಟ ಮನಸ್ಸುಳ್ಳ ಶ್ರೀ ಜಯದೇವ ಕವಿಯಿಂದ ರಚಿತವಾದ ಈ ಗೀತ ಗೋವಿಂದವೆಂಬ ಕಾವ್ಯದಲ್ಲಿ ಗಾಂಧರ್ವ ಕಲೆಯಲ್ಲಿ ಕುಶಲತೆ, ವಿಷ್ಣುವಿನ ಧ್ಯಾನ, ಶೃಂಗಾರರಸದ ವಿವೇಚನೆ ಮತ್ತು ಯಥಾರ್ಥ ಜ್ಞಾನ ಮುಂತಾದ ಗುಣಗಳು ಇವೆಯೋ ಇಲ್ಲವೋ ಎಂಬುದನ್ನು ಆನಂದದಿಂದ ಪರಿಶೋಧಿಸಿ.]

ನಾಯಕ ನಾಯಿಕಾ, ರಾಗರಾಗಿಣಿ ಲಕ್ಷಣಗಳನ್ನು ವಿವರಿಸುವ ಚಿತ್ರಗಳ ಮೇಲೆ 'ಗೀತ ಗೋವಿಂದ' ಪ್ರಭಾವ ಮೂಡಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಮಧ್ಯಕಾಲದ ಚಿತ್ರಕಲೆಯ ಹೆಗ್ಗುರುತುಗಳಾಗಿರುವ ಈ ಎರಡು ಚಿತ್ರಶ್ರೇಣಿಗಳಲ್ಲಿ ಕೃಷ್ಣರಾಧೆಯರ ಪ್ರೇಮ ಸಲ್ಲಾಪವೇ ಹೆಚ್ಚಾಗಿ ಚಿತ್ರಿಸಲ್ಪಟ್ಟಿದೆ. ರಜಪೂತ ಸಂಪ್ರದಾಯದ ಚಿತ್ರಗಾರರ ಆದರ್ಶ ವ್ಯಕ್ತಿ ಗೋವಳ ಕೃಷ್ಣ. ಪ್ರಕೃತಿಯ ಮಕ್ಕಳಾಗಿ ಗುಡ್ಡಗಾಡುಗಳಲ್ಲಿ ಬೆಳೆದ ಈ ಚಿತ್ರಗಾರರು ಸಖ್ಯಭಾವದಲ್ಲಿ ಶ್ರೀಕೃಷ್ಣನನ್ನು ಒಡನಾಡಿಗಳಂತೆ ಕುತೂಹಲ, ಸೌಹಾರ್ದಗಳಿಂದ ಗಮನಿಸಿದ್ದಾರೆ. ನಮಗವನು ಭಗವಂತನಾಗಿರಬಹುದು–ಲೋಕೋತ್ತರ ಗೀತಾಚಾರ್ಯನಾಗಿರಬಹುದು. ರಜಪೂತ ಚಿತ್ರಗಾರರಿಗೆ ಅವನು ಪಹಡಿಯಲ್ಲಿ ಬೆಳೆದ ಒಬ್ಬ ಗೋವಳ–ಅವರ ಇಷ್ಟಮಿತ್ರ. ಕಾಂಗ್ರಾ ಚಿತ್ರಗಾರರ ಕೃಷ್ಣ ನಮಗೆ ರೆಮ್‌ಬ್ರಾಂಟನ ಕ್ರಿಸ್ತನನ್ನು ನೆನಪಿಗೆ ತರುತ್ತದೆ. ಈ ಸಂಪ್ರದಾಯದ ಕೆಲವು ಚಿತ್ರಗಳನ್ನು ಅವಲೋಕಿಸೋಣ :

೧ ಶ್ರೀ ಕೃಷ್ಣನ ಶಿರ: ರಾಧಾಕೃಷ್ಣನ ಬೃಹತ್-ಚಿತ್ರದಿಂದ ಈ ಭಾಗವನ್ನಷ್ಟೇ ಎತ್ತಿಕೊಳ್ಳಲಾಗಿದೆ. ಶ್ರೀ ಕೃಷ್ಣ ಪೂರ್ಣವಾಗಿ ಅಲಂಕೃತನಾಗಿದ್ದಾನೆ. ತಲೆಯ ಮೇಲೆ ವಜ್ರ ವೈಢೂರ್ಯಗಳಿಂದ ಕೆತ್ತಿದ ರುಮಾಲು, ಕೊರಳಲ್ಲಿ ವೈಜಯಂತಿ ಮಾಲೆ. ರಾಸಲೀಲೆಯ ಸಂದರ್ಭವನ್ನು ವಿವರಿಸುತ್ತಿರುವ ಚಿತ್ರಗಾರ ಉದ್ದೇಶಪೂರ್ವಕವಾಗಿಯೇ ಕೃಷ್ಣನ ಮುಖ ಸ್ತ್ರೀಮುಖದಂತೆ ಕಾಣಿಸಿದ್ದಾನೆ. ಕೃಷ್ಣನಲ್ಲಿ ಸ್ತ್ರೀಯ ಕೋಮಲಕಾರುಣ್ಯ, ಪುರುಷನ ವಜ್ರಕಾಠಿಣ್ಯ ಎರಡೂ ಸಮಾವೇಶವಾಗಿದೆಯೆಂದು ತೋರಿಸುವುದೇ ಚಿತ್ರಗಾರನ ಉದ್ದೇಶ. ಗೋಪಿಕಾ ಸ್ತ್ರೀಯರ ಕಣ್ಣೀರಿಗೆ ಕರಗುತ್ತಿದ್ದ ಕೃಷ್ಣನೇ ಪಾರ್ಥನನ್ನು ಪ್ರೇರೇಪಿಸಿ ಭೀಷ್ಮ, ದ್ರೋಣ, ಕರ್ಣಾದಿಗಳ ವಧೆಗೈಸುತ್ತಾನೆ ಪ್ರೇಮದ ಹಾದಿಯಲ್ಲಿ ನಡೆಯುವವರಿಗೆ ಅವನು ಪ್ರಿಯಸಖ; ಅಧರ್ಮ ಪಥದಲ್ಲಿ ಅಡಿಯಿಡುವವರಿಗೆ ಅವನು ಪರಮ ಶತ್ರು.

೨. ಅಭಿಸಾರಿಕೆ: ರಜಪೂತ ಸಂಪ್ರದಾಯದ ಚಿತ್ರಗಾರರು ಶೃಂಗಾರರಸವನ್ನು ರಾಧಾಕೃಷ್ಣರ ಪ್ರೇಮಕ್ಕೆ ಅನ್ವಯಿಸಿಯೇ ಚಿತ್ರಿಸಿದ್ದಾರೆ. ಮಳೆ, ಗಾಳಿಯನ್ನು ಲಕ್ಷಿಸದೆ ನಾಯಿಕೆ ನಾಯಕನ ಮನೆಗೆ ಬಂದಿದ್ದಾಳೆ. ಅವಳ ಸ್ಥಿತಿ ಕಂಡು ನಾಯಕ ಆಶ್ಚರ್ಯಚಕಿತನಾಗಿದ್ದಾನೆ. ಪ್ರೇಮಭಿಸಾರಿಕೆ ಮತ್ತು ನಾಯಕನ ಸಂಭಾಷಣೆಯನ್ನು ಕವಿ ಸ್ವಾರಸ್ಯವಾಗಿ ವರ್ಣಿಸಿದ್ದಾನೆ.

ಅವನು: ಪ್ರಿಯೆ, ನೀನು ನನ್ನನ್ನು ಋಣಿಯನ್ನಾಗಿ ಮಾಡಿರುವೆ. ಆಮಂತ್ರಣವಿಲ್ಲದೆಯೇ ಬಂದಿರುವ ನಿನ್ನ ಪ್ರಣಯದ ಉತ್ಕಟಾವಸ್ಥೆಯನ್ನು ಬಲ್ಲೆ.

ಅವಳು: ಘನಶಾಮ, ಮೇಘಮಾಲೆಯ ಕರೆಯೇ ನನ್ನನ್ನು ಇಲ್ಲಿಗೆ ಬರಮಾಡಿತು.

ಅವನು: ನೀನು ಅಪಾಯಕ್ಕೆ ಸಿಲುಕಿದ್ದೆ. ದೇಹ ಕೂಡ ಕಾಣದ ಈ ಕಾರಿರುಳಿನಲ್ಲಿ ನಿನಗೆ ಮಾರ್ಗ ಹೇಗೆ ಗೊತ್ತಾಯಿತು.

ಅವಳು: ಕೇಶವ, ಮಿಂಚು ಹಾದಿಯನ್ನು ಬೆಳಗಿಸಿತು.

ಅವನು: ಬೆಟ್ಟಗುಡ್ಡಗಳನ್ನು ದಾಟಿ, ಕೆಸರಿನಲ್ಲಿ ನಡೆದು ಬಂದಿರುವ ನಿನ್ನ ಕೋಮಲ ಪಾದಗಳಿಗೆ ಮುಳ್ಳು ನಡಲಿಲ್ಲವೇ?

ಅವಳು: ಹಸ್ತಿಸದೃಶ ಧೈರ್ಯ ನನಗೆ ನೆರವಾಯಿತು.

ಅವನು: ಇರುಳು ಅತಿ ಭಯಂಕರವಾಗಿದೆ—ನೀನು ಏಕಾಂಗಿನಿ.

ಅವಳು: ಇಲ್ಲ ಸ್ವಾಮಿ. ಪ್ರೇಮ ನನ್ನ ಜೀವಗೆಳೆಯನಲ್ಲವೇ?

ರಾಧಾ ಕೃಷ್ಣರಿಗೆ ಅನ್ವಯವಾಗಿರುವ ನಾಯಕ ನಾಯಿಕಾ ಲಕ್ಷಣ ಚಿತ್ರಗಳನ್ನು ಸ್ಥೂಲ ದೃಷ್ಟಿಯಿಂದ ನೋಡದೆ ಸಾಂಕೇತಿಕ ವಾಗಿ ನೋಡಬೇಕೆಂದು ಡಾ. ಆನಂದಕುಮಾರಸ್ವಾಮಿಯವರು ಎಚ್ಚರಿಕೆ ಇತ್ತಿದ್ದಾರೆ. ಪರಮಪುರುಷನೇ ನಾಯಕ—ಭಕ್ತನೇ ನಾಯಿಕೆ. ಕಷ್ಟ ಕಾರ್ಪಣ್ಯಗಳನ್ನು ಕಡೆಹಾಯ್ದು ದೈಹಿಕ ಸುಖದುಃಖ ಮರೆತು ಭಕ್ತ ಭಗವಂತನೆಡೆಗೆ ಧಾವಿಸುವ ಭಾವನೆಯೇ ಈ ಚಿತ್ರಗಳ ಗೂಡಾರ್ಥವೆಂದು, ಅವರು ಅಭಿಪ್ರಾಯ ಪಡುತ್ತಾರೆ.

೩. **ಕೊಳಲು ಕೃಷ್ಣ :** ಪದ್ಮ ಪುಷ್ಪದ ಮೇಲೆ ನಿಂತು ಶ್ರೀಕೃಷ್ಣ ಕೊಳಲು ನುಡಿಸುತ್ತಿದ್ದಾನೆ. ಐವರು ಗೋಪ ಗೋಪಿಯರು, ನಾಲ್ಕು ಹಸುಗಳು ಅವನ ಅಮರ ಗಾನದಲ್ಲಿ ಮೈಮರೆತಿದ್ದಾರೆ.

ಶ್ರೀಕೃಷ್ಣ ಸಾಮಾನ್ಯ ಜೀವಿಗಳ ಸಖನೆಂಬ ಭಾವನೆಯನ್ನು ಪಹರಿ ಚಿತ್ರಗಳು ಒತ್ತಿಯೊತ್ತಿ ಹೇಳುತ್ತವೆ. ಸಾಮಾನ್ಯ

ಗೋವಳರು ಕೃಷ್ಣನಲ್ಲಿಟ್ಟಿದ್ದ ನಿಶ್ಚಲ ಭಕ್ತಿಯನ್ನಲ್ಲದೆ ಗೋವುಗಳ ಮಾನವೀಯ ಅಂತಃಕರಣವೂ ಈ ಚಿತ್ರದಲ್ಲಿ ನಿರೂಪಿಸಲ್ಪಟ್ಟಿದೆ. ಕೃಷ್ಣ ಮಾನವವರ್ಗದ ಸಖ ಮಾತ್ರವೇ ಅಲ್ಲ; ಅಣು, ರೇಣು, ತೃಣ, ಕಾಷ್ಠಗಳಿಗೂ ಅವನು ಸಖನಾಗಿದ್ದಾನೆ.

೪. **ಕೃಷ್ಣಲೀಲೆ:** ಈ ಚಿತ್ರಕ್ಕೆ ಚಿತ್ರಶಿಲ್ಪಿ 'ಗೀತ ಗೋವಿಂದ'ದ ನೆರವು ಪಡೆದಿದ್ದಾನೆ.

"ಅನೇಕ ನಾರಿ ಪರಿರಂಭ ಸಂಭ್ರಮ
ಸ್ಫುರನ್ಮನೋಹಾರಿ ವಿಲಾಸಲಾಲಸಂ
ಮುರಾರಿ ಮಾರಾರಿ ಉಪದರ್ಶಯಂತ್ಯ
ಸೌಸಖೀ ಸಮಕ್ಷಂ ಪುನರಾಹರಾಧಿಕಾಂ ॥"

[ಮುರಾರಿಯು ಅನೇಕ ಸುಂದರಿಯರನ್ನು ಆಲಂಗಿಸುವ ಸಂಭ್ರಮದಲ್ಲಿದ್ದಾನೆ. ಇದರಿಂದ ರಮಣೀಯವಾದ ವಿಲಾಸ ಗಳನ್ನು ಅವನ ಉತ್ಸುಕತೆ ಹೆಚ್ಚುತ್ತಿದೆ. ಇದನ್ನು ರಾಧೆಯ ಸಖಿಯೊಬ್ಬಳು ಕಣ್ಣಾರೆ ಕಂಡು ಅಲ್ಲಿಗೆ ರಾಧೆಯನ್ನು ಕರೆದು ಕೊಂಡು ಬಂದು ಕೃಷ್ಣನನ್ನು ತೋರಿಸುವಳು.]

೫. **ಗೋಪಾಲ:** ಪಹರಿ ಚಿತ್ರಗಾರರಿಗೆ ಅತ್ಯಂತ ಪ್ರಿಯವಾದ ಈ ವಸ್ತುವಿನ ಅನೇಕ ಚಿತ್ರಗಳು ದೊರೆಯುತ್ತವೆ. ಸಂಜೆ ಗೋವುಗಳನ್ನಟ್ಟಿಕೊಂಡು ಕೃಷ್ಣ ಗೋವಳರೊಂದಿಗೆ ಮನೆಗೆ ಹಿಂದಿರುಗುತ್ತಿದ್ದಾನೆ. ಕೈಯಲ್ಲಿ ಹಿಡಿದಿರುವ ಕೊಳಲಿ ನಿಂದ ಕೃಷ್ಣನನ್ನು ಗುರುತಿಸಬೇಕಲ್ಲದೆ ಅವನಿಗೂ ಗೋವಳ ರಿಗೂ ಯಾವ ವ್ಯತ್ಯಾಸವೂ ಕಂಡು ಬರುವುದಿಲ್ಲ. ಗೋವುಗಳ ಮುಖದಲ್ಲಿ ಕಾಣುವ ಆತುರ, ಉತ್ಸಾಹ, ಈ ಮೆರವಣಿಗೆ ನೋಡುತ್ತ ನಿಂತಿರುವ ಗೋಪಿಯರ ಆಸಕ್ತಿ ಚಿತ್ರದಲ್ಲಿ ರಮ್ಯ ವಾಗಿ ಕಾಣಿಸಲ್ಪಟ್ಟಿದೆ.

೬. ಕಾಳೀಯ ಮರ್ದನ: ದುಷ್ಟ ಕಾಳೀಯನನ್ನು ಮರ್ದಿಸಲು ಕೃಷ್ಣ ಮಡುವಿಗೆ ಧುಮಿಕ್ಕಿ, ಕಾಳೀಯನೊಂದಿಗೆ ಹೋರಾಡಿ, ಅವನ ಹೆಡೆಗಳ ಮೇಲೆ ಲಾಸ್ಯವಾಡಿ, ಬಾಲ ಹಿಡಿದು ಅಪ್ಪಳಿಸುತ್ತಿದ್ದಾನೆ. ನಾಗಿನಿಯರು ಶರಣಾಗತರಾಗಿ ಕ್ಷಮಾಭಿಕ್ಷೆ ಬೇಡುತ್ತಿದ್ದಾರೆ. ದಡದಲ್ಲಿ ಗೋಪ ಗೋಪಿಯರು, ಯಶೋಧೆ ನಂದರು ವ್ಯಾಕುಲಚಿತ್ತರಾಗಿ ನೋಡುತ್ತಿದ್ದಾರೆ. ಮಡುವಿಗೆ ಧುಮ್ಮಿಕ್ಕಲು ಧಾವಿಸುತ್ತಿರುವ ನಂದನನ್ನು ಯಶೋಧೆ ತಡೆಯುತ್ತಿದ್ದಾಳೆ.

ಕೃಷ್ಣನ ಮೈಮೇಲೆ ವೀರಾವೇಶ ಎದ್ದು ಕಾಣುತ್ತಿದ್ದರೂ ಅವನ ಮುಖ ಪ್ರಶಾಂತವಾಗಿದೆ. ದುಷ್ಟ ಶಿಕ್ಷಣ, ಶಿಷ್ಟ ರಕ್ಷಣದ ಉತ್ತರವಾದಿತನ ಒಪ್ಪಿಕೊಂಡಿರುವ ಭಗವಂತ ಉದ್ವೇಗರಹಿತನಾಗಿ ತನ್ನ ಕರ್ತವ್ಯ ನಿರ್ವಹಿಸುತ್ತಿದ್ದಾನೆ.

ಕೃಷ್ಣನ ಅಂತರಂಗವನ್ನು ಯಥಾರ್ಥವಾಗಿ ಚಿತ್ರಿಸಿರುವ ಪಹರಿ ಕೃತಿಗಳಲ್ಲಿ ಇದು ಪ್ರಥಮಶ್ರೇಣಿಯಲ್ಲಿ ನಿಲುತ್ತದೆ.

೭. ಪಾಕಶಾಲೆಯಲ್ಲಿ ರಾಧೆ: ಪಾಕಶಾಲೆಯಲ್ಲಿ ರಾಧೆ ತದೇಕಚಿತ್ತಳಾಗಿ ಅಡಿಗೆಯಲ್ಲಿ ಉದ್ಯುಕ್ತಳಾಗಿದ್ದಾಳೆ. ಸಖಿಯೊಬ್ಬಳು ವ್ಯಂಜನಗಳನ್ನು ಸಿದ್ಧಗೊಳಿಸುತ್ತಿದ್ದಾಳೆ. ಕೃಷ್ಣ ಕಿಟಕಿಯಾಚೆ ನಿಂತು ರಾಧೆಯನ್ನೇ ನೋಡುತ್ತಿದ್ದಾನೆ.

ರಜಪೂತ ಚಿತ್ರಗಾರರ ಸೌಂದರ್ಯಾನುಪ್ರೇಕ್ಷೆ, ಸಮರಸ ಭಾವನೆಗೆ ಈ ಚಿತ್ರ ಉತ್ತಮ ನಿದರ್ಶನವಾಗಿದೆ. ಅಡಿಗೆ ಮಾಡುತ್ತ ಕುಳಿತಿರುವ ರಾಧೆಯ ಮನಸ್ಸು ಎಲ್ಲಿದೆ ?—ಆ ಚಿತ್ತೈಕಾಗ್ರತೆ ಅವಳ ಪಾಕನೈಪುಣ್ಯದ ಸಂಕೇತವೇ? ಬಹು ಮಾರ್ಮಿಕವಾಗಿ ಚಿತ್ರಗಾರ ಈ ಸಮಸ್ಯೆ ಬಿಡಿಸಿದ್ದಾನೆ. ಕೃಷ್ಣನ ಮುಖ ಕಾಣುತ್ತಿರುವ ಕಿಟಕಿಯ ಮೇಲೆ ಎರಡು ಪಾರಿವಾಳಗಳು

ಕ್ರೀಡಾಸಿದ್ಧತೆಯಲ್ಲಿ ನಿಂತಿವೆ. ರಾಧಾಕೃಷ್ಣರ ಮನಸ್ಸಿನ ಭಾವನೆಯನ್ನು ಪಾರಿವಾಳಗಳ ಸಂಕೇತದಿಂದ ಚಿತ್ರಗಾರ ಸೂಚಿಸಿದ್ದಾನೆ.

೭. ಮಥುರೆಯ ಬ್ರಾಹ್ಮಣತಿಯರು ಕೃಷ್ಣನಿಗೆ ಆಹಾರ ತೆಗೆದುಕೊಂಡು ಹೋಗುತ್ತಿರುವುದು : ಕೃಷ್ಣ ಒಂದು ತೋಟದಲ್ಲಿ ತನ್ನ ಸಂಗಡಿಗರೊಂದಿಗೆ ಕುಳಿತಿದ್ದಾನೆ. ಮಥುರಾ ನಗರದ ಬ್ರಾಹ್ಮಣರು ಬಗೆಬಗೆಯ ತಿಂಡಿ ತಿನಿಸು ಸಿದ್ಧಪಡಿಸಿಕೊಂಡು ಚಿನ್ನದ ಹರಿವಾಣಗಳಲ್ಲಿ ಹೊತ್ತುಕೊಂಡು ಅವನ ಬಳಿಗೆ ಹೋಗುತ್ತಿದ್ದಾರೆ. ಹಾಗೆ ಹೊರಟ ಒಬ್ಬ ಬ್ರಾಹ್ಮಣತಿಯನ್ನು ಅವಳ ಗಂಡ ತಡೆಗಟ್ಟಿ, ಹಗ್ಗದಿಂದ ಬಿಗಿಯುತ್ತಿದ್ದಾನೆ. ಆದರೆ ಎಲ್ಲರಿಗಿಂತ ಮುಂದಾಗಿಯೇ ಅವಳು ಕೃಷ್ಣನ ಸನ್ನಿಧಿ ಸೇರಿದ್ದಾಳೆ. ಇಹಲೋಕ ವ್ಯಾಪಾರವನ್ನೇ ತ್ಯಜಿಸಿದ ಆ ಬ್ರಾಹ್ಮಣಿತಿಯ ಆತ್ಮ ಕೃಷ್ಣನಲ್ಲಿ ಐಕ್ಯ ಹೊಂದಿದೆ.

—ದಕ್ಷಿಣ ಭಾರತದ ಲೋಹ ಶಿಲ್ಪಿಗಳು ಕೃಷ್ಣನ ಜೀವಿತದ ಕೆಲವು ಸನ್ನಿವೇಶಗಳನ್ನು ಕಡೆದಿದ್ದಾರೆ. ಕೃಷ್ಣ, ಕಾಳಿಯ ಮರ್ದನ, ರಾಧಾಕೃಷ್ಣ, ಪಾರ್ಥಸಾರಥಿ ಈ ವಸ್ತುಗಳ ಶಿಲ್ಪಗಳು ಹೇರಳವಾಗಿ ದೊರೆಯುತ್ತವೆ. ಚಿತ್ರಕಲೆಗಿರುವ ಅವಕಾಶ, ಅನುಕೂಲ ಲೋಹಶಿಲ್ಪಕ್ಕಿಲ್ಲದಿರುವುದರಿಂದ ಕೃಷ್ಣನ ಜೀವನದ ಹಲವು ಸನ್ನಿವೇಶಗಳ ಶಿಲ್ಪಗಳು ನಮಗೆ ದೊರೆಯುತ್ತಿಲ್ಲ.

—ಆಧುನಿಕ ಚಿತ್ರಗಾರರಲ್ಲಿ ಕೃಷ್ಣನ ಜೀವನ ಚಿತ್ರಿಸಿರುವ ಮೂವರನ್ನು ಹೆಸರಿಸಬೇಕು—ನಂದಾಲಾಲ ಬಸು, ಪ್ರಮೋದ ಕುಮಾರ ಚಟ್ಟೋಪಾಧ್ಯಾಯ ಮತ್ತು ಅಬ್ದುರ್ ರಹಮಾನ್ ಚುಗ್‌ತಾಯ್.

ಆಚಾರ್ಯ ನಂದಾಲಾಲರ 'ಗೀತಾಬೋಧೆ' ಅಸಾಮಾನ್ಯ

ಕೃತಿ. ಎತ್ತರದ ಸಿಂಹಾಸನದಲ್ಲಿ ಆಜಾನುಬಾಹು ಶ್ರೀ ಕೃಷ್ಣ ಕುಳಿತಿದ್ದಾನೆ. ಅವನೆದುರಿಗೆ ಒಂದು ಸಣ್ಣ ಪೀಠದಮೇಲೆ ಶಿಶುಪಾರ್ಥ ಕುಳಿತಿದ್ದಾನೆ. ಅರ್ಜುನನಿಗೆ ಕೃಷ್ಣ ಉಪದೇಶ ಮಾಡುತ್ತಿದ್ದಾನೆ. ಪಾಶ್ಚಾತ್ಯರ ಪ್ರಮಾಣ ಸಿದ್ಧಾಂತವನ್ನು ಅಲ್ಲಗಳೆಯುವ ಈ ಚಿತ್ರ ಭಾರತೀಯ ಸಂಪ್ರದಾಯದ-ಸಾಂಕೇತಿಕ ಚಿತ್ರಕಲೆಯ ಅಪೂರ್ವ ಕೃತಿಯಾಗಿದೆ. ವಿಶ್ವರೂಪಿಯಾಗಿರುವ ಕೃಷ್ಣ ಆಜಾನುಬಾಹುವಾಗಿರುವುದೂ ಪಾರ್ಥ ಶಿಶುವಿನಂತೆ ಅವನ ಮುಂದೆ ಕೈಕಟ್ಟಿ ಕುಳಿತಿರುವುದೂ ಸನ್ನಿವೇಶದ ಮಹತ್ತ್ವವನ್ನು ಒಮ್ಮೆಲೇ ಮನಗಾಣಿಸುತ್ತದೆ.

ಪ್ರಮೋದಕುಮಾರ ಚಟ್ಟೋಪಾಧ್ಯಾಯರು ರಸಋಷಿಗಳೂ ಹೌದು ; ಋಷಿಕವಿಗಳೂ ಹೌದು. ಇತರ ಪ್ರತಿಯೊಂದು ಕೃತಿಯಲ್ಲಿಯೂ ಆಳವಾದ ಆಧ್ಯಾತ್ಮಿಕ ಭಾವನೆ ಅಚ್ಚೊತ್ತಿರುತ್ತದೆ. ಶಿವನ ತಪೋಮಯ ಜೀವನವನ್ನು ಅನ್ಯಾದೃಶ್ಯವಾಗಿ ಚಿತ್ರಿಸಿರುವ ಈ ಶಿಲ್ಪಿ ಕೃಷ್ಣನ ಮೇಲೆ ಕೆಲವು ಚಿತ್ರಗಳನ್ನು ರಚಿಸಿದ್ದಾರೆ. ಅವುಗಳಲ್ಲಿ 'ಕೃಷ್ಣ ಸುಧಾಮ' ಮುಖ್ಯವಾದುದು. ಕೃಷ್ಣ ದ್ವಾರಕಾಧೀಶನಾಗಿದ್ದಾನೆ. ಅವನ ಬಳಿಗೆ ಬಾಲ್ಯಸ್ನೇಹಿತ ಸುಧಾಮ ಹಿಡಿಯವಲಕ್ಕಿ ಗಂಟು ಹೊತ್ತುಕೊಂಡು ಬಂದಿದ್ದಾನೆ. ದ್ವಾರಕಾಧೀಶನಾದರೇನು-ಮೂಜಗದೊಡೆಯನಾದರೇನು ? ಶ್ರೀ ಕೃಷ್ಣ ಶ್ರೀ ಕೃಷ್ಣನೇ ! ಪ್ರೇಮ ಔದಾರ್ಯದ ಮೂರ್ತಿವಂತ ಸ್ವರೂಪನಾದ ಶ್ರೀ ಕೃಷ್ಣ ತನ್ನ ಪೀಠದಿಂದೆದ್ದು ಬಂದು ಸುಧಾಮನನ್ನು ಆಲಂಗಿಸಿಕೊಂಡಿದ್ದಾನೆ. ಬಡಸುಧಾಮನ ಜೀವ ತುಂಬಿ ಹೋಗಿದೆ. ಅವನ ಬೇಡಬಂದುದು ಹೆಂಡತಿ ಮಕ್ಕಳಿಗೆ ಒಂದಿಷ್ಟು ಅನ್ನ – ಬಟ್ಟೆ ; ಅವನಿಗೆ ದೊರೆತುದು ಭಗವಂತನ ಅನಂತ ಕರುಣಾನಿಧಿ.

ಕಲೆ, ಜಾತಿ, ಮತ, ಕುಲ, ದೇಶ, ಭಾಷೆಗಳಿಗತೀತವೆಂಬುದನ್ನೂ ಕೃಷ್ಣಧ್ಯಾನ, ಜ್ಞಾನ ಎಲ್ಲ ಭಿನ್ನ ಭೇದಭಾವನೆಗಳನ್ನೂ ಅಳಿಸಬಲ್ಲದೆಂಬುದನ್ನೂ ಅಬ್ದುರ್ ರಹಮಾನ್ ಚುಗ್ತಾಯ್‌ಯವರ ಕೃತಿಗಳು ಸಿದ್ಧಮಾಡಿಕೊಟ್ಟವೆ. ಈ ವರಶಿಲ್ಪಿ ಪರ್ಶಿಯನ್ ಮಹಾಕಾವ್ಯಗಳ ವಸ್ತುಗಳಮೇಲೆ ಹಲವು ಭವ್ಯ ಚಿತ್ರಗಳನ್ನೂ ರಚಿಸಿರುವುದಲ್ಲದೆ ಶ್ರೀ ಕೃಷ್ಣನ ಜೀವನದಮೇಲೆ ಕೆಲವು ಚಿತ್ರಗಳನ್ನು ರಚಿಸಿದ್ದಾರೆ. ಅವುಗಳಲ್ಲಿ 'ಕೃಷ್ಣಪ್ರೇಮ' ಅಗ್ರಸ್ಥಾನದಲ್ಲಿ ನಿಲ್ಲುತ್ತದೆ.

ಹೊರಗಣ್ಣಿಗೆ ಓಂಕಾರರೂಪವಾಗಿ ಕಾಣುವ ಅಬ್ದುರ್ ರಹಮಾನರ ಕೃತಿ ರಾಧಾಕೃಷ್ಣ ಪ್ರಣಯ ಮಿಳನದ ಚಿತ್ರವಾಗಿದೆ. ಲೋಕದ ಅತ್ಯಗತ್ಯ ಬೆಳವಣಿಗೆಗೆ ಮೂಲಪುರುಷ–ಪ್ರಕೃತಿಯ ಮಧುರ ಮಿಳನ ಅತ್ಯಾವಶ್ಯಕವೆನ್ನುವುದನ್ನು ಶಿಲ್ಪಿ ತೋರಿಸಿದ್ದಾರೆ. ಕೇವಲಾದ್ವೈತ ಭಾವನೆಯೊಂದಕ್ಕೆ ಚಿತ್ರದಲ್ಲಿ ರೂಪು ಕೊಡುವ ಈ ಪ್ರಯತ್ನ ಸ್ತೋತ್ರಾರ್ಹವಾದುದಾಗಿದೆ.

ಸಹಸ್ರಾರು ವರ್ಷಗಳಿಂದ ಶ್ರೀ ಕೃಷ್ಣ ಭಾರತೀಯರ ಆರಾಧ್ಯ ಮೂರ್ತಿಯಾಗಿದ್ದಾನೆ. ಮಾನವರಲ್ಲಿ ಮಾನವನಾಗಿ, ದೇವರಲ್ಲಿ ದೇವರಾಗಿ, ಸತ್ಯ – ಜ್ಞಾನ – ಪ್ರೇಮದ ಮೂರ್ತಿವಂತ ಸ್ವರೂಪನಾಗಿರುವ ಈ ಪುಣ್ಯ ಪುರುಷನ ಜೀವನ ಸಂದೇಶವೇ ಭಾರತೀಯ ಸಂಸ್ಕೃತಿಯ ಜೀವನಾಡಿಯಾಗಿದೆ.

ಆಧಾರ ಗ್ರಂಥಗಳು

1. *Rajput Painting* : Text : Volume : 1
   Rajput Painting : Plates : Volume : 2
   —Ananda Coomaraswamy (O. U. P.)
2. *Indian Drawings* : Ananda Coomaraswamy (India Society)
3. *Indian Painting* : Percy Brown (O. U. P.)
4. *Indian Sculpture and Painting* : E. B. Havel (Murray)
5. *A History of Fine art in India and Ceylon*. Vincent Smith (Clarendon Press)
6. *South Indian Bronzes* : O. C. Ganguly (India Society of Oriental Arts, Calcutta).

ನಮ್ಮಲ್ಲಿ ದೊರೆಯುವ ಪುಸ್ತಕಗಳು

೧	ಗೃಹಲಕ್ಷ್ಮಿ—ಅ. ನ. ಕೃ.	೧.೫೦
೨	ಚಿತ್ರ ವಿಚಿತ್ರ—ಅ. ನ. ಕೃ.	೨.೫೦
೩	ಅಪರಾಜಿತೆ—ಅ. ನ. ಕೃ.	೨.೦೦
೪	ಕಂಬನಿಯ ಕುಯಿಲು—ತ. ರಾ. ಸು.	೨.೨೫
೫	ರಕ್ತರಾತ್ರಿ—ತ. ರಾ. ಸು.	೨.೨೫
೬	ತಿರುಗುಬಾಣ—ತ. ರಾ. ಸು.	೧.೫೦
೭	ಮುತ್ತೈದೆ—ಕೃಷ್ಣಮೂರ್ತಿ ಪುರಾಣಿಕ	೧.೫೦
೮	ಬೆವರಿನ ಬೆಲೆ—ಕೃಷ್ಣಮೂರ್ತಿ ಪುರಾಣಿಕ	೧.೫೦
೯	ಮನಸೋತ ಮನದನ್ನೆ—ಕೃಷ್ಣಮೂರ್ತಿ ಪುರಾಣಿಕ	೧.೫೦
೧೦	ಬನದ ಹುಣ್ಣಿಮೆ—ಕೃಷ್ಣಮೂರ್ತಿ ಪುರಾಣಿಕ	೧.೭೫
೧೧	ಹಾವಾಡಿಗ—ನರೇಂದ್ರಬಾಬು	೧.೫೦
೧೨	ಓದಿದ ಹುಡುಗಿ—ನರೇಂದ್ರಬಾಬು	೨.೦೦
೧೩	ಸೌಭಾಗ್ಯ—ನಿರಂಜನ	೧.೫೦
೧೪	ಕೊನೇ ನಮಸ್ಕಾರ—ನಿರಂಜನ	೧.೫೦
೧೫	ಹಿಂದಿರುಗಿ ಬರಲಿಲ್ಲ—ಕೋ. ಚೆನ್ನಬಸಪ್ಪ	೧.೫೦
೧೬	ಅವಳೋ! ಇವಳೋ!—ದಕ್ಷಿಣಾಮೂರ್ತಿ	೧.೫೦
೧೭	ಮಿಸ್. ಲೀಲಾವತಿ—ಶ್ರೀನಿವಾಸರಾವ್ ಕೊರಟಿ	೧.೫೦
೧೮	ಮಕ್ಕಳ ಮನಸ್ಸು—ಡಾಕ್ಟರ್ ಬಿ. ಕುಪ್ಪುಸ್ವಾಮಿ	೪.೦೦
೧೯	ಭಾಷಣಗಳು ಮತ್ತು ಲೇಖನಗಳು (ಸಂ. ೨)—ಎ. ಆರ್. ಕೃಷ್ಣಶಾಸ್ತ್ರಿ	೪.೦೦
೨೦	ವಿಜಯನಗರ—ವಿ. ರಾಘವೇಂದ್ರರಾವ್	೧.೫೦
೨೧	ಸಾಹಿತ್ಯ ಸಮಾರಾಧನೆ—ಅ. ನ. ಕೃ.	೧.೨೫